# ಚಾಮರಾಜನಗರ

# ಜಿಲ್ಲಾ ರಂಗಮಾಹಿತಿ

ಕೆ. ವೆಂಕಟರಾಜು

ಕರ್ನಾಟಕ ನಾಟಕ ಅಕಾಡೆಮಿ

ಜಿಲ್ಲಾ ರಂಗಮಾಹಿತಿ ಮಾಲಿಕೆ

# ಚಾಮರಾಜನಗರ ಜಿಲ್ಲಾ
# ರಂಗ ಮಾಹಿತಿ

ಕೆ. ವೆಂಕಟರಾಜು

ಕರ್ನಾಟಕ ನಾಟಕ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೦೨

**Chamarajanagara Jilla Ranga Mahiti :**
District theatre information written by K. Venkataraju
Published by **Mr. Siddaraju,** Registrar, Karnataka Nataka Academy, Kannada Bhavana, J.C.Road, Bengaluru- 560002 .  Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧,೦೦೦
ಪುಟಗಳು : ೮೪
ಬೆಲೆ : ರೂ. ೭೦/-

**ಪ್ರಕಾಶಕರು**
ಸಿದ್ಧರಾಜು, ರಿಜಿಸ್ಟ್ರಾರ್,
ಕರ್ನಾಟಕ ನಾಟಕ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
ಕೃಷ್ಣ ರಾಯಚೂರು

ಮುದ್ರಣ :
**ಮಾರುತಿ ಪ್ರಿಂಟಿಂಗ್ ಪ್ರೆಸ್**
ಬೆಂಗಳೂರು
ಮೊ. : ೯೭೩೫೨೮೩೮೭೪

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೬ ರಿಂದ ೩೦ ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟನಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟನೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟನಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಜಿಲ್ಲಾ ರಂಗಮಾಹಿತಿ ಮುನ್ನೋಟ

**ಕ**ರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟನಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ವೈವಿಧ್ಯಗಳ ಗಡಿ ಚಾಮರಾಜನಗರ**

ಈ ಗಡಿನಾಡ ಜಿಲ್ಲೆಯಲ್ಲಿ ರಂಗ ಚಟುವಟಿಕೆಗಳಿಗೆ ಕೊರತೆ ಇಲ್ಲ. ವೃತ್ತಿ ನಾಟಕ ಕಂಪನಿಗಳು ಕ್ಯಾಂಪ್ ಮಾಡುತ್ತವೆ. ನವನವೀನ ನಾಟಕದ ಪರದೆಗಳು ಇಲ್ಲಿ ಲಭ್ಯವಿವೆ. ಹವ್ಯಾಸಿಗಳ ಪ್ರಯೋಗಶೀಲತೆ ಇದೆ. ಆದಿವಾಸಿ, ಬುಡಕಟ್ಟು ಜನಾಂಗದ ರಂಗಭೂಮಿ ಚಟುವಟಿಕೆ ಇದೆ. ಬೀದಿ ನಾಟಕಗಳು ಹೇರಳವಾಗಿ ಪ್ರದರ್ಶನಗೊಳ್ಳುತ್ತವೆ.

ವೈವಿಧ್ಯಮಯ ರಂಗಚಟುವಟಿಕೆಯ ಪ್ರಾಥಮಿಕ ಪರಿಚಯವನ್ನು ಲೇಖಕ ಕೆ.ವೆಂಕಟರಾಜು ಇಲ್ಲಿ ಸೋದಾಹರಣವಾಗಿ ಚಿತ್ರಿಸಿದ್ದಾರೆ. ಈ ರಂಗಚಟುವಟಿಕೆಗಳ ಮತ್ತಷ್ಟು ವಿವರಣೆ ಹಾಗೂ ವಿಶ್ಲೇಷಣೆಯನ್ನು ಯಾರಾದರೂ ಮುಂದುವರಿಸಬಹುದಾಗಿದೆ.

**– ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು :

**ಕೆ. ಜಗುಚಂದ್ರ**

**ಉಮೇಶ್ ಸಾಲಿಯಾನ್**

**ಹಾಲ್ಕುರಿಕೆ ಶಿವಶಂಕರ್**

# ಕರ್ನಾಟಕ ನಾಟಕ ಅಕಾಡೆಮಿ

**ಎಲ್.ಬಿ.ಶೇಖ (ಮಾಸ್ತರ)**
ಅಧ್ಯಕ್ಷರು

ಸದಸ್ಯರು

ರಾಜಪ್ಪ ಕಿರಗಸೂರು
ಕಲ್ಪನಾ ನಾಗನಾಥ್
ಪಿ.ತಿಪ್ಪೇಸ್ವಾಮಿ
ಎಂ.ಎಸ್.ಗುಣಶೀಲನ್
ಮುದ್ದಣ್ಣ ರಟ್ಟೆಹಳ್ಳಿ
ಅನ್ನಪೂರ್ಣ ಸಾಗರ
ಗುಡಿಹಳ್ಳಿ ನಾಗರಾಜ
ಎಚ್.ಷಡಾಕ್ಷರಪ್ಪ ಹೊಸಮನಿ
ಶ್ರೀಪಾದ ಭಟ್
ಉಮೇಶ ಸಾಲಿಯಾನ್
ವಿ.ಎನ್.ಅಕ್ಕಿ
ಬಿ.ಎಂ.ರಾಮಚಂದ್ರ
ಎನ್.ಕೆ.ರಾಮಕೃಷ್ಣ
ಎ.ವರಲಕ್ಷ್ಮಿ
ಎಸ್.ಕೆ.ಕೊನೆಸಾಗರ
ಹಾಲ್ಕುರಿಕೆ ಶಿವಶಂಕರ್
ಎಲ್.ಎಚ್.ರಂಗನಾಥಪ್ಪ
ಕೆ.ಜಗುಚಂದ್ರ

ರಿಜಿಸ್ಟ್ರಾರ್:
**ಸಿದ್ದರಾಜು**

ಯೋಜನಾ ಸಹಾಯಕರು:
**ಕೆ.ರೇವಣ್ಣ**

ಕಚೇರಿ ಸಿಬ್ಬಂದಿ:
**ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ**

# ಸ್ವಗತ

**ಕ**ರ್ನಾಟಕ ನಾಟಕ ಅಕಾಡೆಮಿ ಪ್ರತಿಯೊಂದು ಜಿಲ್ಲೆಯ ರಂಗಚಟುವಟಿಕೆ. ಇತಿಹಾಸ ತಿಳಿಸುವ ರಂಗಕೈಪಿಡಿ ಹೊರತರುವ ಕೆಲಸವನ್ನು ಹಮ್ಮಿಕೊಂಡಿದೆ. ಇದೊಂದು ಆಗಬೇಕಿದ್ದ ಕೆಲಸ. ಚಾಮರಾಜನಗರ ಜಿಲ್ಲೆಯ ಕೈಪಿಡಿಯನ್ನು ಸಂಕಲಿಸಿಕೊಡುವ ಹೊಣೆಯನ್ನು ಅಕಾಡೆಮಿ ನನಗೆ ವಹಿಸಿತು. ಇದು ಮೇಲು ನೋಟಕ್ಕೆ ಸುಲಭವೆಂದು ತೋರಿದರೂ ಅಷ್ಟೊಂದು ಸರಳವಾದ ಕೆಲಸವಲ್ಲ.

ಈ ಕೈಪಿಡಿ ತಯಾರಿಸಲು ನಾನೇ ಒಂದು ವಿನ್ಯಾಸ ರೂಪಿಸಿಕೊಂಡೆ. ಈ ಕೈಪಿಡಿಯಲ್ಲಿ ಚಾಮರಾಜನಗರ ಜಿಲ್ಲೆಯ ರಂಗಭೂಮಿ ಒಂದು ವಿಹಂಗಮ ನೋಟ – ಎಂಬ ಪ್ರಧಾನವಾದ ಒಂದು ಲೇಖನ ಸಿದ್ಧಪಡಿಸಲಾಯಿತು. ಈ ಲೇಖನದಲ್ಲಿ **ಜನಪದ ರಂಗಭೂಮಿ, ಗ್ರಾಮೀಣ ಹವ್ಯಾಸಿ ರಂಗಭೂಮಿ** ಮತ್ತು **ಹವ್ಯಾಸಿ ರಂಗಭೂಮಿ** ಎಂಬ ಶೀರ್ಷಿಕೆಗಳಡಿಯಲ್ಲಿ ಬರಹ ಇದೆ. ಇದಕ್ಕೆ ಪೂರಕವಾಗಿ ಅನುಬಂಧದ ರೀತಿಯಲ್ಲಿ, ಈ ಜಿಲ್ಲೆಯ ನಾಟಕಕಾರರು, ತರಬೇತಿ ಪಡೆದವರು. ಕಾರ್ಯನಿರ್ವಹಿಸುತ್ತಿರುವ ಹವ್ಯಾಸಿ ರಂಗ ತಂಡಗಳು ಹಾಗೂ ಇನ್ನಿತರ ವಿವರಗಳು ಪ್ರತ್ಯೇಕವಾಗಿ ನೀಡಲಾಗಿದೆ.

ಗ್ರಾಮೀಣ ಹವ್ಯಾಸಿ ತಂಡ ಮತ್ತು ಹವ್ಯಾಸಿ ತಂಡಗಳ ಮಾಹಿತಿ ಸಂಗ್ರಹಿಸುವ ಸಲುವಾಗಿ ಒಂದು ನಮೂನೆಯನ್ನು ಸಿದ್ಧಪಡಿಸಲಾಯಿತು. ಎರಡು ಬಾರಿ ಪತ್ರಿಕಾ ಪ್ರಕಟಣೆ ನೀಡಿ ಮಾಹಿತಿ ಸಂಗ್ರಹಿಸಲಾಯಿತು. ಮಾಹಿತಿ ನೀಡಿದವರಿಂದ ಮತ್ತಷ್ಟು ಹೆಸರುಗಳನ್ನು ಪಡೆದು ಅವರನ್ನು ಸಂಪರ್ಕಿಸಿ ಮಾಹಿತಿ ಪಡೆಯಲಾಯಿತು. ಹೀಗೆ ಆದಷ್ಟೂ ಸಮಗ್ರವಾಗಿರುವಂತೆ ನೋಡಿಕೊಳ್ಳಲಾಗಿದೆ. ಇದರಿಂದ ಚಾಮರಾಜನಗರದ ರಂಗಚಟುವಟಿಕೆಯ ಸಂಕ್ಷಿಪ್ತ ಸಮಗ್ರ ನೋಟ ಸಿಕ್ಕಬಹುದು ಎಂದು ಭಾವಿಸಿದ್ದೇನೆ.

ವಾಸ್ತವವಾಗಿ, ಈ ಯೋಜನೆ, ಡಾ॥ ಬಿ.ವಿ.ರಾಜಾರಾಂ ರವರ ಅಧ್ಯಕ್ಷಾವಧಿಯಲ್ಲಿ ಪ್ರಾರಂಭವಾಯಿತು. ಆದರೆ ಅವರು ನಾಟಕ ಅಕಾಡೆಮಿಯಿಂದ ನಿರ್ಗಮಿಸಿದ ಸಂಧರ್ಭದಲ್ಲಿ ಕೈಪಿಡಿಗಳು ಹೊರಬರಲಿಲ್ಲ. ಈಗ ಈ ಯೋಜನಗೆ ಕಾಯಕಲ್ಪ ಸಿಕ್ಕಿ ಮುದ್ರಣವಾಗುತ್ತಲಿದೆ. ಹಿಂದಿನ ಅಧ್ಯಕ್ಷರಾಗಿದ್ದ ಡಾ॥ ಬಿ.ವಿ. ರಾಜಾರಾಂ,

ಸದಸ್ಯರುಗಳಾಗಿದ್ದ ನಾ.ನಾಗಚಂದ್ರ, ಪ್ರಸನ್ನಕುಮಾರ್, ಹಾಗೂ ರಿಜಿಸ್ಟ್ರಾರ್‌ರಾಗಿದ್ದ ನರಸಿಂಹಮೂರ್ತಿಯವರಿಗೆ ಈ ಸಂಧರ್ಭದಲ್ಲಿ ಕೃತಜ್ಞತೆ ಸಲ್ಲಿಸಿವುದು ನನ್ನ ಕರ್ತವ್ಯ. ಅದೇ ರೀತಿಯಲ್ಲಿ ಈಗಿನ ಅಧ್ಯಕ್ಷರಾಗಿರುವ ಶ್ರೀ ಎಲ್.ಬಿ.ಶೇಖ (ಮಾಸ್ತರ) ಮತ್ತು ಈ ಯೋಜನೆಯ ಬಗ್ಗೆ ಅತೀವ ಆಸಕ್ತಿ ತಳೆದು ಈ ಕೈಪಿಡಿ ಹೊರಬರಲು ಕಾರಣವಾಗಿರುವ ಶ್ರೀ ಗುಡಿಹಳ್ಳಿ ನಾಗರಾಜ ಅವರಿಗೆ ಕೃತಜ್ಞತೆಗಳು.

ಈ ಕೈಪಿಡಿ ಸಿದ್ಧಪಡಿಸುವ ಹೊತ್ತಿನಲ್ಲಿ ಸಹಾಯ ನೀಡಿದ ಶ್ರೀಮತಿ ಚಿತ್ರಾ. ವಿ. ವಿವೇಕ್ ಪ್ರಕಾಶ್, ಬಿ.ಎಸ್.ವಿನಯ್, ವಿ. ಶ್ರೀನಿವಾಸ, ಮಾಹಿತಿ ನೀಡಿದ ಸ್ಥಳೀಯ ರಂಗತಂಡಗಳ ಮುಖ್ಯಸ್ಥರುಗಳಾದ ಶ್ರೀ. ಸೋಮಶೇಖರ ಬಿಸಲ್ವಾಡಿ, ಸಿ.ಎಂ. ನರಸಿಂಹ ಮೂರ್ತಿ, ಪಿ. ಮಹೇಶ್, ಕಮರವಾಡಿ ಮಹದೇವಸ್ವಾಮಿ, ಗೋಪಾಲ್, ಗುಂಡ್ಲುಪೇಟೆಯ ಬಿ.ಎಂ. ಸುರೇಶ್, ಎಸ್.ಬಿ. ನಾಗರಾಜು; ಗ್ರಾಮೀಣ ಹವ್ಯಾಸಿ ತಂಡಗಳ ನಿರ್ದೇಶಕರುಗಳು ಹಾಗೂ ಹಾರ್ಮೋನಿಯಂ ಮಾಸ್ತರುಗಳಿಗೆ ನಾನು ಋಣಿ.

ನಾನು ಪ್ರಾಮಾಣಿಕವಾಗಿ ಪ್ರಯತ್ನಿಸಿದರೂ, ಎಚ್ಚರಿಕೆ ವಹಿಸಿದ್ದರೂ, ಕೆಲವೊಂದು ಹೆಸರು, ಮಾಹಿತಿ ಬಿಟ್ಟುಹೋಗಿರಬಹುದು.

ಮಾಹಿತಿ ತಪ್ಪಾಗಿಯೂ ಇರಬಹುದು. ಆದರೆ, ಇದು ಪ್ರಜ್ಞಾಪೂರ್ವಕವಾಗಿ ಮಾಡದ್ದಲ್ಲ ಎಂದು ಮಾತ್ರ ಹೇಳಬಲ್ಲೆ.

**– ಕೆ. ವೆಂಕಟರಾಜು**

# ಚಾಮರಾಜನಗರ ಜಿಲ್ಲೆಯ ರಂಗಭೂಮಿ – ಒಂದು ವಿಹಂಗಮನೋಟ

**ಚಾ**ಮರಾಜನಗರ ಕರ್ನಾಟಕದ ದಕ್ಷಿಣದ ಕೊನೆಯಲ್ಲಿರುವ ಗಡಿ ಜಿಲ್ಲೆ. ಇಲ್ಲಿಂದ ಕೆಲವೇ ಕಿಲೋಮೀಟರುಗಳ ದೂರದಲ್ಲಿ ತಮಿಳುನಾಡು ಹಾಗೂ ಕೇರಳ ರಾಜ್ಯದ ಗಡಿಗಳಿವೆ. ಚಾಮರಾಜನಗರ ತಾಲ್ಲೂಕಿಗೆ ಅಂಟಿಕೊಂಡಂತಿರುವ ಸುಮಾರು ೪೫ ಗ್ರಾಮಗಳ ತಾಳವಾಡಿ ಫಿರ್ಕಾ ತಮಿಳುನಾಡಿಗೆ ಸೇರಿದ ಭಾಗ. ಆದರೆ ಅದು ಸಂಪೂರ್ಣ ಕನ್ನಡಮಯವಾಗಿದೆ. ಕರ್ನಾಟಕದ ಏಕೀಕರಣ ಸಂದರ್ಭದಲ್ಲಿ ತಾಳವಾಡಿ ಫಿರ್ಕಾ ಕೂಡಾ ಮದರಾಸು ಆಧಿಪತ್ಯಕ್ಕೆ ಸೇರಿದ್ದ ಕೊಳ್ಳೇಗಾಲದಂತೆಯೇ ಕರ್ನಾಟಕಕ್ಕೆ ಸೇರಬೇಕಾಗಿತ್ತು. ಆದರೆ, ಅನೇಕ ಕಾರಣಗಳಿಂದ ಅದು ತಮಿಳುನಾಡಿನಲ್ಲಿಯೇ ಉಳಿಯಿತು.

೧೯೯೭ರಲ್ಲಿ (೧೯೯೮–೯೯) ಚಾಮರಾಜನಗರ ಸ್ವತಂತ್ರ ಜಿಲ್ಲೆಯಾಗಿ ರೂಪುಗೊಂಡಿತು. ಅದಕ್ಕೆ ಮುನ್ನ ಮೈಸೂರು ಜಿಲ್ಲೆಯ ಹನ್ನೊಂದು ತಾಲ್ಲೂಕುಗಳ ಪೈಕಿ ಒಂದಾಗಿತ್ತು.

ಈಗ ಈ ಜಿಲ್ಲೆ, ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆ ಎಂಬ ೪ ತಾಲ್ಲೂಕುಗಳನ್ನು ಒಳಗೊಂಡಿದೆ. ಈ ಜಿಲ್ಲೆಯಲ್ಲಿ ಸುಮಾರು ೪೦೦ ಕ್ಕೂ ಹೆಚ್ಚು ಗ್ರಾಮಗಳು ಇವೆ. ಈ ಕಂದಾಯ ಗ್ರಾಮಗಳಲ್ಲದೆ ಉಪಗ್ರಾಮಗಳು ಇವೆ. ಸುಮಾರು ೯,೬೫,೪೬೨ ಜನಸಂಖ್ಯೆ ಇದೆ. ಈ ಜಿಲ್ಲೆಯಲ್ಲಿ ಸೋಲಿಗರು ಇತ್ಯಾದಿ ಆದಿವಾಸಿಗಳು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಬಹುತೇಕ ಮಂದಿ ಬೇಸಾಯ ಅವಲಂಬಿಸಿದ ಜನ. ಈ ಜಿಲ್ಲೆಯಲ್ಲಿ ನೀರಾವರಿಗೆ ಒಳಪಟ್ಟ ಪ್ರದೇಶ ಬಹಳ ಕಡಿಮೆ ಇದೆ. ಹೀಗಾಗಿ ವ್ಯವಸಾಯಕ್ಕೆ ಮಳೆಯನ್ನು ಆಶ್ರಯಿಸಿದ್ದಾರೆ. ಕೊಳವೆ ಬಾವಿಗಳನ್ನು ಕೊರೆಸಿ, ನೀರನ್ನು ಎತ್ತಿ ವ್ಯವಸಾಯ ಮಾಡುತ್ತಿದ್ದಾರೆ. ತುಂಬ ವಿಚಿತ್ರದ ಸಂಗತಿ ಎಂದರೆ ಈ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಈ ಭಾಗದಲ್ಲಿನ ಬೆಳೆಗಳ ವೈವಿಧ್ಯ ಅಚ್ಚರಿಪಡುವಂತಿದೆ. ಇಲ್ಲಿ ಎಲ್ಲ ರೀತಿಯ ಬೆಳೆಗಳನ್ನು ಕಾಣಬಹುದು.

## ಸಾಂಸ್ಕೃತಿಕ ಸಮೃದ್ಧಿ :

ಈ ಜಿಲ್ಲೆಯು ಸಾಂಸ್ಕೃತಿಕವಾಗಿ ಸಮೃದ್ಧವಾದ ಜಿಲ್ಲೆ. ಈ ಜಿಲ್ಲೆ, ಎರಡು ಜನಪದ ಮಹಾಕಾವ್ಯಗಳನ್ನು (ಮಲೆ ಮಹದೇಶ್ವರ ಕಾವ್ಯ ಮಂಟೇಸ್ವಾಮಿ ಕಾವ್ಯ) – ಕೊಟ್ಟಿದೆ. ಫಿನ್ಲೆಂಡಿನ ಕಲೆವಾಲ ಜನಪದ ಮಹಾಕಾವ್ಯ ಹೊರತುಪಡಿಸಿದರೆ ಈ ಎರಡು ಮಹಾಕಾವ್ಯಗಳೇ ಸುದೀರ್ಘವಾದ ಜನಪದ ಮಹಾಕಾವ್ಯಗಳು ಎಂದು ಹೇಳಲಾಗುತ್ತದೆ. ಈ ಮಹಾಕಾವ್ಯಗಳನ್ನು ಹಗಲು ಇರುಳು ಎನ್ನದೇ ನಿರಂತರವಾಗಿ ಹಾಡುವ ಕಲಾವಿದರು, ಕಲಾವಿದ ಕುಟುಂಬಗಳು ಇವೆ. ಇದು ಈ ಕಲಾವಿದರಿಗೆ ವೃತ್ತಿ, ಹವ್ಯಾಸ, ಆಚರಣೆ ಎಲ್ಲವೂ ಹೌದು. ಈ ರೀತಿಯ ಕಲಾವಿದರು ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಹೇರಳವಾಗಿ ಇದ್ದಾರೆ.

ಈ ಕಾವ್ಯವನ್ನು ಹೊರತುಪಡಿಸಿಯೂ, ಅನೇಕ ಬಗೆಯ ಜನಪದ ಕಲೆಗಳು ಇಲ್ಲಿ ಕಾಣಸಿಗುತ್ತವೆ. ಆಧುನಿಕತೆಯ ಪ್ರವಾಹದಲ್ಲಿ ಇವು ಕೊಚ್ಚಿ ಹೋಗುತ್ತಿದ್ದರೂ, ಅತ್ಯಂತ ಪ್ರತಿಕೂಲ ಸನ್ನಿವೇಶದಲ್ಲಿಯೂ ಈ ಕಲೆಗಳು ಜೀವ ಹಿಡಿದು ಕೊಂಡಿವೆ ಎನ್ನುವುದು ಅತ್ಯಂತ ಮಹತ್ವದ ಸಂಗತಿ.

ಚಾಮರಾಜನಗರ ಜಿಲ್ಲೆಯ ರಂಗಭೂಮಿ ಹಿಂದು – ಇಂದು ಮುಂದನ್ನು ದಾಖಲಿಸುವಾಗ ಇವುಗಳನ್ನು ಮೂರು ಶೀರ್ಷಿಕೆಗಳಲ್ಲಿ ಚರ್ಚಿಸಬಹುದು.

೧) **ಜನಪದ ರಂಗಭೂಮಿ**

೨) **ಗ್ರಾಮೀಣ ಹವ್ಯಾಸಿ ರಂಗಭೂಮಿ**

೩) **ಹವ್ಯಾಸಿ ರಂಗಭೂಮಿ**

ಇದರ ಜತೆಗೆ ಈ ಮೂರು ಪ್ರಕಾರದ ರಂಗಚಟುವಟಿಕೆಯಲ್ಲಿ ತೊಡಗಿಕೊಂಡ ನಟರು, ನೇಪಥ್ಯದ ಕಲಾವಿದರು, ತಂತ್ರಜ್ಞರು, ನಾಟಕಕಾರರು ಇವರುಗಳನ್ನು ಸ್ಮರಿಸಬೇಕಾಗುತ್ತದೆ.

ಈ ಜಿಲ್ಲೆ ೪ ತಾಲ್ಲೂಕುಗಳನ್ನು ಒಳಗೊಂಡಿದ್ದರೂ, ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಯಳಂದೂರು ಗಳಲ್ಲಿ ಮಾತ್ರ ಹೆಚ್ಚಿನ ರಂಗಚಟುವಟಿಕೆಗಳು ನಡೆಯುತ್ತಿರುವಂತೆ ಕಂಡುಬರುತ್ತದೆ. ಆದರೆ ಕೊಳ್ಳೇಗಾಲ ಮದರಾಸು ಆಧಿಪತ್ಯಕ್ಕೆ ಸೇರಿದ್ದ ಕಾರಣದಿಂದಲೋ ಅಥವಾ ಕನ್ನಡ ಭಾಷಿಕರು ಹೆಚ್ಚಾಗಿದ್ದು, ರಾಜ್ಯದ (ಮದರಾಸು) ಕೊನೆಯ ಭಾಗದಲ್ಲಿ ಇದ್ದುದರಿಂದಲೋ ಈ ಭಾಗದಲ್ಲಿ ರಂಗ ಚಟುವಟಿಕೆಗಳು ಹೆಚ್ಚು ನಡೆದಂತೆ ಕಂಡುಬರುವುದಿಲ್ಲ. ಈಗಲೂ ಈ ತಾಲ್ಲೂಕಿನಲ್ಲಿ ನಾಟಕಗಳ ಪ್ರದರ್ಶನ ನಡೆದರೂ, ಆ ತಾಲ್ಲೂಕಿನ ತಂಡಗಳು ಪ್ರದರ್ಶಿಸಿದ ದಾಖಲೆ

ಕಂಡು ಬರುವುದಿಲ್ಲ. ಈ ಜಿಲ್ಲೆಯ ಉಳಿದ ತಾಲ್ಲೂಕುಗಳಲ್ಲಿ ಉಗಾದಿ, ಮಾರಿಹಬ್ಬ ಇತ್ಯಾದಿ ನೆಪದಲ್ಲಿ ಗ್ರಾಮೀಣ ಭಾಗದವರು ಜನ ಆಸ್ಥೆಯಿಂದ ಅಪಾರ ಹಣ ಖರ್ಚು ಮಾಡಿಕೊಂಡು ನಾಟಕ ಕಲಿಯುತ್ತಾರೆ, ಪ್ರದರ್ಶಿಸುತ್ತಾರೆ. ಆದರೆ ಈ ರೀತಿಯ ಪದ್ಧತಿ ಕೊಳ್ಳೇಗಾಲ ತಾಲ್ಲೂಕಿನ ಗ್ರಾಮಗಳಲ್ಲಿ ಕಂಡುಬರುವುದಿಲ್ಲ. ಇದು ಸ್ವಲ್ಪ ವಿಚಿತ್ರ ಎನಿಸುತ್ತದೆ.

ಚಲನಚಿತ್ರದಲ್ಲಿ ಹೇಗೋ ಹಾಗೆ ರಂಗಭೂಮಿಯಲ್ಲಿಯೂ ಡಾ॥ ರಾಜಕುಮಾರ್ ದೊಡ್ಡಹೆಸರು. ಅವರ ತಂದೆ ಶ್ರೀ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು ಕೊಳ್ಳೇಗಾಲ ತಾಲ್ಲೂಕು ಸಿಂಗಾನಲ್ಲೂರು ಗ್ರಾಮದವರು! ಆದರೆ, ಅವರ ಬಹುಪಾಲು ಕಾರ್ಯಕ್ಷೇತ್ರ ಚಾಮರಾಜನಗರ ತಾಲ್ಲೂಕು ಎಂದು ತಿಳಿದು ಬರುತ್ತದೆ. ಅವರು, ತಮ್ಮ ಪತ್ನಿಯ ತವರು ಮನೆ ದೊಡ್ಡಗಾಜನೂರು (ತಮಿಳುನಾಡಿನ ತಾಳವಾಡಿ ಫಿರ್ಕಾದಲ್ಲಿದೆ) ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಚಾಮರಾಜನಗರ ತಾಲ್ಲೂಕಿನ ಗ್ರಾಮಗಳಲ್ಲಿ ಗ್ರಾಮೀಣರಿಗೆ ನಾಟಕ ಕಲಿಸುವ ಮಾಸ್ತರಿಕೆಯನ್ನು ಬಹಳ ವರ್ಷ ಮಾಡಿದ್ದಾರೆ. ರಾಜಕುಮಾರ್ ರವರು ತಮ್ಮ ಬಾಲ್ಯದಲ್ಲಿ ತಮ್ಮ ತಂದೆಯವರು ಹೋದಲೆಲ್ಲಾ ಹಿಂಬಾಲಿಸಿದ ಬಗ್ಗೆ ಈಗಲೂ ಈ ಭಾಗದಲ್ಲಿ ನೆನಪಿಸಿಕೊಳ್ಳುವವರಿದ್ದಾರೆ. ಹೀಗಾಗಿ ಕೊಳ್ಳೇಗಾಲದಲ್ಲಿ ನಾಟಕ ಚಟುವಟಿಕೆಗಳು ನಡೆದಿರುವುದು ಕಡಿಮೆ ಎಂದೇ ಹೇಳಬೇಕು.

ಆದರೂ, ಹಿಂದಿನಿಂದಲೂ, ಗ್ರಾಮೀಣ ನಾಟಕಗಳಿಗೆ ಅಗತ್ಯವಾದ ಡ್ರೆಸ್ಸು, ಪರದೆಗಳು ಇತ್ಯಾದಿ ದೊರಕುವುದು ಕೊಳ್ಳೇಗಾಲದಲ್ಲಿಯೇ. ಈಗಲೂ ಇಲ್ಲಿಯ ಎರಡು ಸಂಸ್ಥೆಗಳು ಈ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಈ ಸಂಸ್ಥೆಗಳು ಚಾಮರಾಜನಗರ ಜಿಲ್ಲೆ ಮಾತ್ರವಲ್ಲ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಗ್ರಾಮೀಣ ಹವ್ಯಾಸಿಗಳಿಗೂ ಈ ಸೇವೆ ಒದಗಿಸುತ್ತಾರೆ. ಅಲ್ಲದೇ ಕಾಲಕಾಲಕ್ಕೆ ತಮ್ಮನ್ನು ತಾವು ಆಧುನೀಕರಿಸಿಕೊಳ್ಳುತ್ತಲೂ ಹೋಗುತ್ತಿದ್ದಾರೆ. (ಇವರ ವಿವರ ಪ್ರತ್ಯೇಕ ನೀಡಲಾಗುತ್ತದೆ.)

## ೧) 'ಜನಪದ ರಂಗಭೂಮಿ'

ಇಲ್ಲಿಯ ಗ್ರಾಮೀಣ ಭಾಗದಲ್ಲಿ ಸಂಚರಿಸಿ, ಗ್ರಾಮೀಣ ಹವ್ಯಾಸಿ ಕಲಾವಿದರ ಜತೆಗೆ ಮಾತಿಗಿಳಿದರೆ, ಈ ಭಾಗದಲ್ಲಿ ಒಂದು ಬಗೆಯ 'ಜನಪದ ರಂಗಭೂಮಿ' ಅಸ್ತಿತ್ವದಲ್ಲಿ ಇದ್ದುದು ಕಂಡುಬರುತ್ತದೆ. ಅದನ್ನು ಇವರು ಯಕ್ಷಗಾನ ಎಂದೇ ಕರೆಯುತ್ತಾರೆ.

ಪ್ರಾಯಶಃ ಅರುವತ್ತರ ದಶಕಕ್ಕೆ ಮುನ್ನವೇ ಈ ಯಕ್ಷಗಾನ ಎಂದು ಇವರು ಕರೆಯುವ ಬಯಲಾಟದ ರಂಗ ಪ್ರದರ್ಶನ ನಿಂತಿತೆಂದು ಕಂಡುಬರುತ್ತದೆ. ಈ

ಯಕ್ಷಗಾನ ಕಲಾವಿದರೇ, ವೃತ್ತಿ ರಂಗಭೂಮಿಯ ನಾಟಕಗಳಿಂದ (ಗುಬ್ಬಿ ಕಂಪನಿ, ಚಾಮುಂಡೇಶ್ವರಿ ಕಂಪನಿ ಇತ್ಯಾದಿ) ಹಾಗೂ ಆರಂಭದ ಕನ್ನಡ ಚಿತ್ರಗಳಿಂದ ಪ್ರಭಾವಿತರಾಗಿ, ಅವರೂ ಅದೇ ಬಗೆಯ ನಾಟಕಗಳಲ್ಲಿ ತೊಡಗಿದರು ಎನಿಸುತ್ತದೆ. ಇದರಿಂದಾಗಿ ಈ ಜನಪದ ಬಯಲಾಟ ಕ್ರಮೇಣ ಕಣ್ಮರೆಯಾಯಿತು ಎನಿಸುತ್ತದೆ.

ಚಾಮರಾಜನಗರ ಸಮೀಪವೇ ಇರುವ – ಈಗ ಚಾಮರಾಜನಗರ ನಗರಸಭೆಯ ವ್ಯಾಪ್ತಿಗೆ ಬಂದಿರುವ ರಾಮಸಮುದ್ರದ ಪರಿಶಿಷ್ಟ ಜಾತಿಯವರು ತಮ್ಮ ಬೀದಿಯ **'ಮಂಟೇಲಿಂಗೇಶ್ವರ ಕೃಪಾ ಪೋಷಿತ ನಾಟಕ ಮಂಡಲಿ'** ಎಂಬ ಹೆಸರಿನಡಿಯಲ್ಲಿ ಪ್ರತಿ ವರ್ಷ ಶಿವರಾತ್ರಿ ಸಂದರ್ಭದಲ್ಲಿ ನಾಟಕವಾಡುತ್ತಾರೆ. ಈ ಅರುವತ್ತು ವರ್ಷದಲ್ಲಿ ಒಂದು ವರ್ಷವೂ ಅವರು ನಾಟಕ ಆಡುವುದನ್ನು ತಪ್ಪಿಸಿಲ್ಲ. ಕೆಲವೊಂದು ವರ್ಷ ಎರಡೆರಡು ನಾಟಕ ಅಭ್ಯಾಸ ಮಾಡಿ, ಯಜಮಾನರುಗಳ ತೀರ್ಮಾನದಂತೆ ಒಂದು ನಾಟಕವನ್ನು ಶಿವರಾತ್ರಿಯಲ್ಲಿಯೂ ಮತ್ತೊಂದು ನಾಟಕವನ್ನು ಯುಗಾದಿಯಲ್ಲಿಯೂ ಅಭಿನಯಿಸಿದ ಪ್ರಸಂಗ ಇದೆ.

ಈ ಹಿಂದೆ, ಅಂದರೇ ಸುಮಾರು ಅರುವತ್ತು ಎಪ್ಪತ್ತು ವರ್ಷಗಳ ಹಿಂದೆ 'ಯಕ್ಷಗಾನ ಅಥವಾ ಬಯಲಾಟ' ಆಡಿದ ಪ್ರಸಂಗವನ್ನು ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಇವರು ಈ ರೀತಿಯ ಎರಡು ಪ್ರಸಂಗಗಳನ್ನು ಪ್ರದರ್ಶಿಸಿದ್ದರು. (ಇವುಗಳ ಹೆಸರಿನ ಮಾಧುರ್ಯ, ಸೌಂದರ್ಯ ಗಮನಿಸಿ!)

೧) **ಪಂಚವಟೀ ರಾಮಾಯಣ**

೨) **ಸ್ವರ್ಗಾರೋಹಣ ಪರ್ವ**

ಈ ಎರಡೂ ಪ್ರದರ್ಶನಗಳನ್ನು ರಾಮಸಮುದ್ರದವರೇ ಆದ ಬಸವಯ್ಯನವರೇ ನಿರ್ದೇಶಿಸಿದ್ದು ವಿಶೇಷ. ಇದು ಹೊರಗಿನಿಂದ ಆಮದಾದುದಲ್ಲ, ಸ್ಥಳೀಯವಾದುದೇ ಇರಬೇಕು ಎಂದು ದೃಢಪಡುತ್ತದೆ.

ಈ ಬಯಲಾಟ, ಈಗ ಪ್ರಚಲಿತದಲ್ಲಿರುವ ನಾಟಕಕ್ಕಿಂತ ಈ ಕೆಲವು ಅಂಶಗಳಲ್ಲಿ ಭಿನ್ನ.

೧) ಇಲ್ಲಿ ಪ್ರತಿ ದೃಶ್ಯಕ್ಕೆ ಪ್ರತ್ಯೇಕವಾದ (ತೆರೆಗಳು) ಸೀನರಿ ಇರುವುದಿಲ್ಲ.

೨) ಹಿಂಬದಿಯ ತೆರೆಯ ಮುಂದೆ ಹಿಮ್ಮೇಳ ಹಾಗೂ ಹಾಡುಗಾರರು ಕೂರುತ್ತಾರೆ.

೩) ಹಾರ್ಮೋನಿಯಂ ಬಳಕೆ ಇಲ್ಲ. ಮುಖವೀಣೆ ಎಂಬ ವಾದ್ಯ ನುಡಿಸುತ್ತಾರೆ. ಮದ್ದಳೆ ಬಳಸುತ್ತಾರೆ.

೪) ಕಲಾವಿದರು ಕುಣಿತದೊಂದಿಗೆ ಅಭಿನಯಿಸಿಸುತ್ತಾರೆ.

ಈ ರೀತಿಯಲ್ಲಿ ಬಯಲಾಟ ಕಲಿತ ಅಂಶವನ್ನು ಚಾಮರಾಜನಗರಕ್ಕೆ ಸಮೀಪದ

ಮರಿಯಾಲ ಗ್ರಾಮದಲ್ಲಿಯೂ ಹಿರಿಯರು ನೆನಪಿಸಿಕೊಳ್ಳುತ್ತಾರೆ. ಈ ಪ್ರದರ್ಶನಗಳು ಕುರಿತಂತೆ ವೇಷಭೂಷಣಗಳಾಗಲೀ, ಮುದ್ರಿತ ಅಥವಾ ಕೈಬರಹ ಪ್ರತಿಯಾಗಲೀ, ಛಾಯಾಚಿತ್ರಗಲಾಗಲೀ ದೊರೆಯದು. ಇದು ಕಣ್ಮರೆಯಾಗಿದೆ ಎಂದೇ ಹೇಳಬಹುದು.

ಮರಿಯಾಲ ಗ್ರಾಮದಲ್ಲಿಯೂ ೧೯೪೦ರ ದಶಕದಲ್ಲಿ ಈ ರೀತಿಯ 'ಯಕ್ಷಗಾನ'ವನ್ನು ಪ್ರದರ್ಶಿಸುವಂತೆ ಕಂಡುಬರುತ್ತದೆ. ಅಲ್ಲಿ ರಾಮಾಯಣ ಅಭಿನಯಿಸಿದ್ದರು. ರಾಮನಿಗೆ ನೀಲಿ ಬಣ್ಣವನ್ನು, ರಾಕ್ಷಸ ಪಾತ್ರಗಳಿಗೆ ಕೆಂಪು ಬಣ್ಣವನ್ನು ಲೇಪಿಸಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಹಿಮ್ಮೇಳದಲ್ಲಿ ೪ ಮಂದಿ ಇದ್ದು, ಮುಖವೀಣೆ ಮತ್ತು ಮೃದುಂಗ ಬಳಸಿರುವುದನ್ನು ತಿಳಿಸುತ್ತಾರೆ.

## ಗೊರು ಗೊರುಕ ಗೊರಕನ

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟದ ಪೋಡುಗಳಲ್ಲಿ ಸೋಲಿಗರು ಎಂಬ ಆದಿವಾಸಿ ಜನಾಂಗ ವಾಸ ಮಾಡುತ್ತಿದ್ದಾರೆ. ಅವರಲ್ಲಿ 'ಗೊರು-ಗೊರುಕ-ಗೊರುಕನ' ಎಂಬ ನೃತ್ಯ ಪ್ರಕಾರ ಇದೆ. ನಿರ್ದಿಷ್ಟ ದಿನದಂದು, ರಾತ್ರಿ ಆ ಜನಾಂಗದ ಎಲ್ಲರೂ ಕಾಡಿನಲ್ಲಿ ಒಂದೆಡೆ ಸೇರಿ ಒಂದು ರೀತಿಯ ಗಾಯನ-ನೃತ್ಯಗಳ ಮಿಶ್ರಣ ರಂಗ ಪ್ರಯೋಗ ನಡೆಸುತ್ತಾರೆ. ಈ ಜನಪದ ಕಲೆಗಳು ಅದರಲ್ಲಿಯೂ ವಿಶೇಷವಾಗಿ ಬಯಲಾಟ ಪ್ರಕಾರಗಳನ್ನು ಆಧುನಿಕ ಸಂವೇದನೆಗಳ ಅಭಿವ್ಯಕ್ತಿಗೆ ಬಳಸಿಕೊಳ್ಳಬಹುದಾದ ಸಾಧ್ಯತೆ ಇದೆ.

## ೨) ಗ್ರಾಮೀಣ ಹವ್ಯಾಸಿ ರಂಗಭೂಮಿ

ಈ ಜಿಲ್ಲೆಯ ಮೂರು ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ನಾಟಕಗಳನ್ನು ಕಲಿತು ಪ್ರದರ್ಶಿಸುವ ಪರಿಪಾಠ ಇದೆ. ಶಿವರಾತ್ರಿ ಯುಗಾದಿಯೇ ಅಲ್ಲದೇ ಆ ಗ್ರಾಮಕ್ಕೆ ಅಥವಾ ಆ ಸಮುದಾಯಕ್ಕೆ ವಿಶಿಷ್ಟವಾದ ಜಾತ್ರೆ ಅಥವಾ ಹಬ್ಬದ ಸಂದರ್ಭದಲ್ಲಿ ಈ ನಾಟಕವನ್ನು ಪ್ರದರ್ಶಿಸಲಾಗುತ್ತದೆ. ಗ್ರಾಮಗಳಲ್ಲಿ ಆಯಾ ಜಾತಿಯವರಿಗೆ ಪ್ರತ್ಯೇಕವಾದ ಬೀದಿಗಳು ಅಥವಾ ಕೇರಿಗಳು ಉಂಟು. ಆಯಾ ಪಂಗಡದವರು ನಾಟಕಗಳನ್ನು ಕಲಿತು ಅವರವರ ಬೀದಿ ಅಥವಾ ಕೇರಿಗಳಲ್ಲಿ ಪ್ರದರ್ಶಿಸುತ್ತಾರೆ. ಹೀಗಾಗಿ ಕೆಲವು ಗ್ರಾಮಗಳಲ್ಲಿ ವರ್ಷದಲ್ಲಿ ಎರಡು/ಮೂರು ನಾಟಕಗಳು ಆಗುವುದುಂಟು. ರಾಮಸಮುದ್ರದಲ್ಲಿ ಅಂಬೇಡ್ಕರ್ ಬೀದಿಯಲ್ಲಿ ಪ್ರತಿವರ್ಷ ನಾಟಕಗಳನ್ನು ಅಭಿನಯಿಸಿಕೊಂಡು ಬಂದಿದ್ದಾರೆ. ಅದರ ಜತೆಗೆ ಪ್ರತಿವರ್ಷ ಅಲ್ಲದಿದ್ದರೂ ಎರಡು-ಮೂರು ವರ್ಷಗಳಿಗೊಮ್ಮೆ ಇಲ್ಲಿಯ ನಾಯಕರ ಬೀದಿಯಲ್ಲಿ ನಾಟಕ ಪ್ರದರ್ಶಿಸುತ್ತಾರೆ. ಹಾಗೇಯೇ ಪ್ರತಿವರ್ಷ ಜನವರಿ ತಿಂಗಳಲ್ಲಿ

ಚಾಮರಾಜನಗರ ತಾಲ್ಲೂಕು ಹಾಗೂ ನಂಜನಗೂಡು ತಾಲ್ಲೂಕಿನ ಸುಮಾರು ೨೧ ಗ್ರಾಮಗಳಲ್ಲಿ ಆ ಗ್ರಾಮಗಳಿಗೆ ವಿಶಿಷ್ಟವಾದ 'ಬಂಡಿ ಹಬ್ಬ' ನಡೆಯುತ್ತದೆ. ಇದೊಂದು ಸ್ಥಳೀಯವಾದ ಮತ್ತು ವಿಶಿಷ್ಟವಾದ ಹಬ್ಬ. ಈ ಸಂದರ್ಭದಲ್ಲಿ ಚಾಮರಾಜನಗರ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ಮರಿಯಾಲ ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ನಾಟಕ ಪ್ರದರ್ಶನವಾಗುವುದೂ ಉಂಟು. ಒಮ್ಮೆ ಆ ಹಬ್ಬದ ದಿವಸ ಏಕಕಾಲದಲ್ಲಿ ೪ ನಾಟಕಗಳು – ಗ್ರಾಮದ ಬೇರೆ –, ಬೇರೆ ಕಡೆ ನಾಟಕ ಪ್ರದರ್ಶನ ಕಂಡಿರುವುದೂ ಉಂಟು.

## ನಾಟಕದ ಪ್ರಕ್ರಿಯೆ

ಗ್ರಾಮೀಣ ಹವ್ಯಾಸಿ ರಂಗ ಚಟುವಟಿಕೆ ಒಂದು ಆಚರಣೆಯಂತೆ ನಡೆಯುತ್ತದೆ. ಹೀಗಾಗಿ ಅಲ್ಲಿ ಹೆಚ್ಚಾಗಿ ಹೊಸ ಪ್ರಯೋಗಗಳಿಗೆ ಅವಕಾಶ ಕಡಿಮೆ. ಹೊಸ ನಾಟಕಗಳಿಗೂ ಅವಕಾಶ ಕಡಿಮೆ.

ಈ ವರ್ಷ ನಾಟಕ ಬೇಕೆ–ಬೇಡವೇ ಎಂಬುದನ್ನು ಗ್ರಾಮದ ಅಥವಾ ಆ ಸಮುದಾಯದ ಯಜಮಾನರುಗಳು ನಿರ್ಧರಿಸುತ್ತಾರೆ. ಆಮೇಲೆ ಆಡಬೇಕಾದ ನಾಟಕ ನಿರ್ಧರಿಸುತ್ತಾರೆ. ಇತ್ತೀಚಿನ ದಿವಸಗಳಲ್ಲಿ ಈ ಹಿಂದೆ ಪ್ರದರ್ಶಿತಗೊಂಡ ನಾಟಕಗಳನ್ನೇ ಪುನಃ ತಾಲೀಮಿಗೆ ಆರಿಸಿಕೊಳ್ಳುತ್ತಾರೆ. ಉದಾಹರಣೆ ಚಾಮರಾಜನಗರ ತಾಲ್ಲೂಕಿನ **ಸಂತೇಮರಹಳ್ಳಿಯಲ್ಲಿ 'ದಕ್ಷಯಜ್ಞ' ರಾಮಸಮುದ್ರ ನಾಯಕರ ಬೀದಿಯಲ್ಲಿ 'ಕುರುಕ್ಷೇತ್ರ' ಅಂಬೇಡ್ಕರ್ ಬೀದಿಯಲ್ಲಿಯೂ 'ಕುರುಕ್ಷೇತ್ರ' ಚಾಮರಾಜನಗರ ಅಂಬೇಡ್ಕರ್ ಬೀದಿಯಲ್ಲಿ 'ಕುರುಕ್ಷೇತ್ರ' ಅಥವಾ 'ತ್ರಿಜನ್ಮಮೋಕ್ಷ'** ಇತ್ಯಾದಿ ನಾಟಕಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆನಂತರ ಡ್ರಾಮಾ ಮಾಸ್ಟರುಗಳ ಆಯ್ಕೆಯಾಗುತ್ತದೆ. ಆನಂತರ ನಾಟಕ ಪ್ರಾಕ್ಟೀಸಿಗೆ ಮನೆ, ಸಮಯ ಗೊತ್ತುಪಡಿಸುತ್ತಾರೆ. ನಾಟಕ ಪ್ರಾಕ್ಟೀಸಿನ ಆರಂಭದಿಂದ ಅದು ಪ್ರದರ್ಶನ ಕಾಣುವ ದಿವಸದ ವರೆವಿಗೂ ಡ್ರಾಮಾ ಮಾಸ್ಟರ್ ಆ ಗ್ರಾಮದಲ್ಲಿಯೇ ಉಳಿಯುತ್ತಾರೆ. ಈ ಡ್ರಾಮಾ ಮಾಸ್ಟರುಗಳ ದೈನಂದಿನ ಅಗತ್ಯ ಅಂದರೆ ಊಟ, ತಿಂಡಿ, ಬೀಡಿ ಹಾಗೂ ಇತ್ಯಾದಿ ಖರ್ಚುಗಳನ್ನು ಸರದಿಯ ಪ್ರಕಾರ ಗ್ರಾಮಸ್ಥರು ವಹಿಸಿಕೊಳ್ಳುತ್ತಾರೆ. ಇದರ ಜತೆಗೆ ನಿಗದಿಪಡಿಸಿಕೊಂಡ ಸಂಭಾವನೆ ನೀಡುತ್ತಾರೆ. ನಾಟಕದ ದಿವಸ, ಅವರಿಗೆ ಹೊಸ ಬಟ್ಟೆ, ಕೆಲವೊಮ್ಮೆ ಚಿನ್ನದ ಉಂಗುರ ಇತ್ಯಾದಿ ಉಡುಗೊರೆ ನೀಡುವುದುಂಟು.

## ಸಂಪನ್ಮೂಲ ಮತ್ತು ಖರ್ಚು

ಇಂದಿನ ದಿನಮಾನದಲ್ಲಿ ಈ ನಾಟಕಗಳಿಗೆ ಈಗ ಸುಮಾರು ೧ ಲಕ್ಷ ರೂಪಾಯಿಯವರೆವಿಗೂ ಖರ್ಚು ಬೀಳುತ್ತದೆ. ಕೆಲವು ವರ್ಷಗಳ ಹಿಂದೆ ಅದು

೪೫ಸಾವಿರ, ೭೦ ಸಾವಿರ ಹೀಗೆ ಬೀಳುತ್ತಿತ್ತು. ಸುಮಾರು ೨೦ ವರ್ಷಗಳ ಹಿಂದೆ ೫ ರಿಂದ ೧೦ ಸಾವಿರ ಖರ್ಚು ಬೀಳುತ್ತಿತ್ತು. ತಲಾ ೨೫೦ ರೂ. ತೊಡಗಿಸಿ ೨೦ ಮಂದಿ ಕಲಾವಿದರು ಭಾಗವಹಿಸಿದ ನಾಟಕಗಳು ಇವೆ. ಡ್ರಾಮಾ ಮಾಸ್ಟರು ಸಂಭಾವನೆ, ಪರದೆ, ಡ್ರೆಸ್, ಸ್ಟೇಜ್ ಇತ್ಯಾದಿ ರಂಗ ಪರಿಕರಗಳ ಬಾಡಿಗೆ, ರಂಗ ಸಂಗೀತಕ್ಕೆ ಅಗತ್ಯವಾದ ಸಂಗೀತಗಾರರು (ವಾದ್ಯಗಾರರಿಗೆ) ಸಂಭಾವನೆ, ಪ್ರಚಾರ – ಮುದ್ರಣ, ನಾಟಕದಲ್ಲಿ ಅಭಿನಯಿಸಲು ಆಹ್ವಾನಿಸಿ ಕಲಾವಿದೆಯರ ಸಂಭಾವನೆ ಹೀಗೆ ಎಲ್ಲವೂ ಖರ್ಚಿನ ಬಾಬಿನಲ್ಲಿ ಬರುತ್ತವೆ. ಇತ್ತೀಚೆಗೆ ಇದನ್ನು ವಿಡಿಯೋ ಚಿತ್ರೀಕರಿಸಿಟ್ಟುಕೊಳ್ಳುವ ಪರಿಪಾಠವೂ ಬೆಳೆದಿದೆ.

ಬಹುತೇಕ ಎಲ್ಲ ಖರ್ಚುಗಳನ್ನು ಇದರಲ್ಲಿ ಭಾಗವಹಿಸುವ ಕಲಾವಿದರೇ ಹಂಚಿಕೊಳ್ಳುತ್ತಾರೆ. ಇತ್ತೀಚಿನ ದಿವಸಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ೧೦ ಅಥವಾ ೨೦ ಸಾವಿರ ದಷ್ಟು ಸಹಾಯ ಮಾಡುತ್ತದೆ.

## ನಾಟಕಗಳ ಆಯ್ಕೆ

ಈ ಬಾಗದಲ್ಲಿ **ಕುರುಕ್ಷೇತ್ರ, ದಕ್ಷಯಜ್ಞ, ಶನಿಮಹಾತ್ಮೆ, ರಾಮಾಯಣ, ಕೃಷ್ಣಲೀಲೆ, ದಾನಶೂರಕರ್ಣ, ಶಿವಕುಮಾರ, ಶಿವಜಲಂಧರ, ಪ್ರಭುಲಿಂಗಲೀಲೆ, ಜಗಜ್ಯೋತಿ ಬಸವೇಶ್ವರ** ಇತ್ಯಾದಿ ಪೌರಾಣಿಕ ಐತಿಹಾಸಿಕ ನಾಟಕಗಳನ್ನು ಅಭಿನಯಿಸುತ್ತಾರೆ. ಕೆಲವು ವರ್ಷಗಳ ಹಿಂದೆ **ದೇವದಾಸಿ, ಎಚ್ಚಮನಾಯಕ** ಅಭಿನಯಿಸುತ್ತಿದ್ದರು. ಈಗ ಇವುಗಳ ಭರಾಟೆ ಕಡಿಮೆಯಾಗಿದೆ. ಕೆಲವೊಮ್ಮೆ, **ರತ್ನಮಾಂಗಲ್ಯ, ದೀಪಾವಳಿ, ಬಸ್‌ಕಂಡಕ್ಟರ್, ಕೊಂಡು ತಂದ ಗಂಡ** ಇತ್ಯಾದಿ ನಾಟಕಗಳನ್ನು ಅಭಿನಯಿಸುವುದು ಉಂಟು.

ನಾಟಕ ಕಂಪನಿಯವರು ಅಭಿನಯಿಸುವ, ಅಭಿನಯಿಸುತ್ತಿದ್ದ ನಾಟಕಗಳನ್ನೇ ಇವರು ಆಯ್ಕೆ ಮಾಡಿಕೊಳ್ಳುತ್ತಾರೆ. ಇತ್ತೀಚಿನ ದಿವಸಗಳಲ್ಲಿ ಹಳೆಯ ನಾಟಕಗಳನ್ನು ಕಲಿಸಿಬಲ್ಲ ಮಾಸ್ಟರುಗಳ ಕೊರತೆಯಿಂದಾಗಿ, ನಾಟಕಗಳ ವೈವಿಧ್ಯ ಕಡಿಮೆ. ಕರ್ನಾಟಕದಲ್ಲಿ ವೃತ್ತಿ ಕಂಪನಿಗಳ ಭರಾಟೆ ಕಡಿಮೆಯಾಗ ತೊಡಗಿದಂತೆ ಗ್ರಾಮೀಣ ಹವ್ಯಾಸಿಗಳಲ್ಲಿಯೂ ವೈವಿಧ್ಯತೆ ಕಡಿಮೆಯಾಗಿದೆ.

## ನಾಟಕಕಾರರು

ಕೊಳ್ಳೇಗಾಲ ತಾಲ್ಲೂಕಿನ **ಹೊಂಡರಬಾಳು** ಗ್ರಾಮದ **ಲಿಂಗರಾಜ ಅರಸು** ಎಂಬುವರು ಬರೆದ ಅನೇಕ ನಾಟಕಗಳನ್ನು ಬಹುತೇಕ ಈ ಭಾಗದಲ್ಲಿ ಪ್ರದಶಿಸಿದ್ದಾರೆ. ಇವರು ಬರೆದ **ದಕ್ಷಯಜ್ಞ, ತ್ರಿಜನ್ಮಮೋಕ್ಷ, ಕುರುಕ್ಷೇತ್ರ, ಶಿವಕುಮಾರ** ನಾಟಕಗಳು ಪ್ರದರ್ಶನ ಕಂಡಿವೆ. ನಾಟಕ ಕಲಿಸುವ ಮಾಸ್ತರುಗಳು ಕೆಲವು ತಂಡಗಳಿಗೆ ಬಿ.ಪುಟ್ಟಸ್ವಾಮಯ್ಯನವರು ಬರೆದ ಕುರುಕ್ಷೇತ್ರ ಕಲಿಸಿದರೆ, ಕೆಲವೊಂದು ತಂಡಗಳಿಗೆ

ಅರಸಿನವರು ಬರೆದ ಕುರುಕ್ಷೇತ್ರ ಕಲಿಸುತ್ತಾರೆ. ಇವರಲ್ಲದೆ ಡಾ|| ಜಿ.ವಿ.ಲಿಂಗಣ್ಣ (ಪರಿಪೂರ್ಣದೆಡೆಗೆ) ಪಿ. ವಜ್ರಪ್ಪ (ದಾನಶೂರ ಕರ್ಣ) ಬೆಳ್ಳಾವೆ ನರಹರಿಶಾಸ್ತ್ರಿಗಳು (ಕೃಷ್ಣಲೀಲೆ, ಸುಭದ್ರ ಪರಿಣಯ, ಸದಾರಮೆ) ಕುಂತೂರು ಸಿದ್ದಪ್ಪಶಾಸ್ತ್ರಿ (ಬೇಡರ ಕಣ್ಣಪ್ಪ) ಬರೆದ ನಾಟಕಗಳು ಪ್ರದರ್ಶನ ಕಂಡಿವೆ. ಇವರ ಪೈಕಿ **ಡಾ|| ಜಿ.ವಿ.ಲಿಂಗಣ್ಣ ಚಾಮರಾಜನಗರ ತಾಲ್ಲೂಕು ಜ್ಯೋತಿಗೌಡನಪುರ** ಗ್ರಾಮದವರು.

## ತರಬೇತಿಯ ಅವಧಿ

ನಾಟಕದ ತಾಲೀಮಿನ ಅವಧಿ ೨ ತಿಂಗಳಿನಿಂದ ೬ ತಿಂಗಳವರೆವಿಗೂ ನಡೆಯುತ್ತದೆ. ಬಹುತೇಕ, ಆಯಾ ಪಾತ್ರಧಾರಿಗಳಿಗೆ ಮಾಸ್ತರುಗಳೇ ಅವರವರ ಸಂಭಾಷಣೆಗೆ ಬರೆದುಕೊಡುತ್ತಾರೆ. ಲೆಗ್ ಹಾರ್ಮೋನಿಯಂ ಮುಂದೆ ಕುಳಿತ ಮಾಸ್ತರು, ನಟನನ್ನು ಎದುರಿಗೆ ಕೂಡಿಸಿಕೊಂಡು ಮಾತುಗಳನ್ನು ಹೇಳಿಕೊಡುತ್ತಾರೆ. ಮಾಸ್ತರುಗಳು ಹೇಳಿದ್ದನ್ನು ನಟ ಮತ್ತೆ ಹೇಳಿ ಮಾತು ಕಲಿಯುತ್ತಾರೆ. ಅಕ್ಷರಸ್ಥರಾದರೆ ಅವರ ನೆರವಿಗೆ ಸಂಭಾಷಣೆ ಇರುವ ಪುಟ್ಟ ಪುಸ್ತಕ ಇರುತ್ತದೆ. ತರಬೇತಿಯ ಸಮಯ ಬಿಟ್ಟು ಉಳಿದ ಅವಧಿಯಲ್ಲಿ ಕುರಿ ಮೇಯಿಸುತ್ತಾ, ದನ ಕಾಯುತ್ತಾ, ಹೊಲಕಾಯುತ್ತಾ ಮಾತು ಹಾಡನ್ನು ಅಭ್ಯಾಸ ಮಾಡುತ್ತಾರೆ. ತಾಲೀಮು ಮತ್ತು ರಂಗ ಪ್ರದರ್ಶನದ ನಡುವೆ, ಪ್ರದರ್ಶನಕ್ಕೆ ಮುಂಚೆ ರಂಗಪೂಜೆ ಇರುತ್ತದೆ. ರಂಗಪೂಜೆ, ವಾಸ್ತವವಾಗಿ ಸ್ಟೇಜ್ ರಿಹರ್ಸಲ್, ರಂಗಪರಿಕರ, ಮೈಕ್ ಕಲಾವಿದೆಯರು ಎಲ್ಲರೊಡನೆ ಈ ತಾಲೀಮು ನಡೆಯುತ್ತದೆ.

## ಸಂಗೀತ ಮತ್ತು ಪರಿಕರಗಳು

ಗ್ರಾಮೀಣ ಹವ್ಯಾಸಿ ರಂಗಭೂಮಿಯಲ್ಲಿ ಹಾಡು, ಸಂಗೀತ, ಇರಲೇಬೇಕು. ಡ್ರಾಮಾ ಮಾಸ್ತರುಗಳು ಸಂಗೀತದಲ್ಲಿ (ಕರ್ನಾಟಕ ಶಾಸ್ತ್ರಿಯ ಸಂಗೀತ) ಪರಿಣತಿ ಪಡೆದವರು. ಇವರಿಗೆ ಆಯಾ ನಾಟಕಗಳ ಹಾಡುಗಳು ಕಂಠಸ್ಥವಾಗಿರುತ್ತವೆ. ಇವರು ನಟರಿಗೆ ಹಾರ್ಮೋನಿಯಂನಲ್ಲಿ ಹಾಡು ಕಲಿಸುತ್ತಾರೆ. ಪ್ರದರ್ಶನದಲ್ಲಿ ಕೀಬೋರ್ಡ್, ತಬಲ, ಕ್ಲಾರಿಯೋನೆಟ್, ರಿದಂಪ್ಯಾಡ್ ಇತ್ಯಾದಿ ಪರಿಕರಗಳನ್ನು ಬಳಸುತ್ತಾರೆ. ಈಚಿನ ವರ್ಷಗಳಲ್ಲಿ ಬದಲಾವಣೆಯಲ್ಲಿರುವ ಸಿನಿಮಾ ಹಾಡುಗಳನ್ನು ವ್ಯಾಪಕವಾಗಿ ಬಳಸುತ್ತಾರೆ. ಚಲನಚಿತ್ರದ ಅನುಕರಣಗಳ ನೃತ್ಯವನ್ನು ವ್ಯಾಪಕವಾಗಿ ಬಳಸುತ್ತಾರೆ.

## ಸ್ಟೇಜ್, ಮೇಕಪ್, ಪರಿಕರಗಳು

ಗ್ರಾಮೀಣ ಹವ್ಯಾಸಿ ನಾಟಕಗಳಿಗೆ ಇವುಗಳನ್ನು ಬಾಡಿಗೆಯ ಆಧಾರದ ಮೇಲೆ ಒದಗಿಸುವ ಸಂಸ್ಥೆ, ಈ ಜಿಲ್ಲೆಯ ಕೊಳ್ಳೇಗಾಲದಲ್ಲಿ ಎರಡು, ಪಕ್ಕದ ತಾಲ್ಲೂಕಿನ ಹೆಮ್ಮರಗಾಲದಲ್ಲಿ ಒಂದು ಹಾಗೂ ನೆರೆಯ ಜಿಲ್ಲೆ ಮಂಡ್ಯ ಜಿಲ್ಲೆಯಲ್ಲಿ ಹಲವಾರು

ಇವೆ. ಇವರು ಕಾಲ–ಕಾಲದಲ್ಲಿ ತಮ್ಮನ್ನು ನವೀಕರಿಸಿಕೊಂಡಿದ್ದಾರೆ. ಇವರು ಪೈಪುಗಳ ನೆರವಿನಿಂದ ೨೬ ಥ ೨೦ ರಂಗಸ್ಥಳದ ಅಳತೆ ಇರುವ (ಸೈಡ್ ವಿಂಗ್ಸ್ ಮತ್ತು ನೇಪಥ್ಯ ಬಿಟ್ಟು) ಸ್ಟೇಜ್ ನಿರ್ಮಿಸುತ್ತಾರೆ. ಸೈಡ್‌ವಿಂಗ್ಸ್ ರಾಸ್ತಾ ಸೀನ್, ಜಂಗಲ್ ಸೀನ್, ಅರಮನೆ ಸೀನ್, ಮನೆ ಸೀನ್ ಇತ್ಯಾದಿ ಇರುವ ಪರದೆ ನಿಲ್ಲಿಸುತ್ತಾರೆ. ನಟ – ನಟಿಯರಿಗೆ ಪೂರ್ಣ ಮೇಕಪ್ ಮಾಡುತ್ತಾರೆ. ಅವರವರ ಪಾತ್ರಕ್ಕೆ ತಕ್ಕ ಪೋಷಾಕು ಒದಗಿಸಿ ಧ್ವನಿವರ್ಧಕವನ್ನ ಅಳವಡಿಸುತ್ತಾರೆ. ಇವುಗಳ ಸಾಗಾಣಿಕೆ ಮಾಡಲು ಅವರದೇ ಲಾರಿ ಇರುತ್ತದೆ. ಇಲ್ಲವೆ ಬಾಡಿಗೆಯ ವಾಹನದಲ್ಲಿ ಸರಬರಾಜು ಮಾಡುತ್ತಾರೆ.

ಈ ಎಲ್ಲ ಪ್ರಕ್ರಿಯೆ ಮುಗಿದು ನಾಟಕ ಪ್ರದರ್ಶನ ಕಾಣುತ್ತದೆ.

ಈ ಜಿಲ್ಲೆಯ **ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು** ತಾಲ್ಲೂಕುಗಳ ಬಹುತೇಕ ಗ್ರಾಮಗಳಲ್ಲಿ ಗ್ರಾಮೀಣ ಹವ್ಯಾಸಿಗಳು ಹಲವಾರು ವರ್ಷಗಳಿಂದ ನಾಟಕ ಕಲಿತು ಪ್ರದರ್ಶಿಸಿಕೊಂಡು ಬಂದಿದ್ದಾರೆ. ಕೆಲವು ಗ್ರಾಮಗಳಲಿ (ಉದಾ: **ಮಂಟೇಲಿಂಗೇಶ್ವರ ಕೃಪಾ ಪೋಷಿತ ನಾಟಕ ಮಂಡಲಿ, ಅಂಬೇಡ್ಕರ್ ಬೀದಿ, ರಾಮಸಮುದ್ರ**) ಹಲವಾರು ದಶಕಗಳಿಂದ ಒಂದು ವರ್ಷವೂ ತಪ್ಪದೆ ನಾಟಕ ಮಾಡಿಕೊಂಡು ಬಂದಿದ್ದಾರೆ. ಕೆಲವೊಂದು ಗ್ರಾಮಗಳಲ್ಲಿ ಈ ಕ್ರಮಬದ್ಧತೆ ಇಲ್ಲದಿದ್ದರೂ, ಎರಡು – ಮೂರು ವರ್ಷಗಳಿಗೊಮ್ಮೆಯಾದರೂ ನಾಟಕ ಮಾಡಿಕೊಂಡು (ಉದಾ: **ಮಂಟೇಸ್ವಾಮಿ ನಾಟಕ ಮಂಡಲಿ, ನಾಯಕರ ಬೀದಿ, ಅಂಬೇಡ್ಕರ್ ಬೀದಿ, ಚಾಮರಾಜನಗರ.** ಮಹದೇಶ್ವರ ಕಲಾ ಸಂಘ, ಸಂತೇಮರಹಳ್ಳಿ, **ಮುರುಘರಾಜೇಂದ್ರ ಕೃಪಾ ಪೋಷಿತ** ನಾಟಕ ಮಂಡಲಿ, ಮರಿಯಾಲ, ದೊಡ್ಡಮ್ಮ **ತಾಯಿ ಕೃಪಾ ಪೋಷಿತ ನಾಟಕ ಮಂಡಲಿ, ಮರಿಯಾಲ. (ನಾಯಕರ ಬೀದಿ) (ಹರಿಜನರ ಬೀದಿ)** ಇತ್ಯಾದಿ ಹೀಗಾಗಿ, ದಾಖಲೆಗಾಗಿಯಾದರೂ ಇದರ ಪಟ್ಟಿ ಮಾಡುವುದು ಸ್ವಲ್ಪ ಕಷ್ಟದ ಕೆಲಸ. ರಂಗಚಟುವಟಿಕೆಗೆ ನಡೆದ / ನಡೆಸುತ್ತಿರುವ ಗ್ರಾಮಗಳನ್ನು ಹೀಗೆ ಪಟ್ಟಿಮಾಡಬಹುದು.

ಚಾಮರಾಜನಗರ ತಾಲ್ಲೂಕಿನ **ಚಾಮರಾಜನಗರ, ಬದನಗುಪ್ಪೆ, ರಾಮಸಮುದ್ರ, ಮರಿಯಾಲ, ಯರಗನಹಳ್ಳಿ, ಯಣಗುಂಬ, ರಾಮಯ್ಯನಪುರ, ನಾಗವಳ್ಳಿ, ದೇಮಹಳ್ಳಿ, ಮೂಡಲಗ್ರಹಾರ, ಮಾದಾಪುರ, ಮೈಲಾಜಿಪುರ, ಹೆಗ್ಗೋಠಾರ, ಪಣ್ಯದಹುಂಡಿ, ಬಾಣಹಳ್ಳಿ, ಬಡಗಲಪುರ, ಕುಮಚಹಳ್ಳಿ, ಕುಲಗಾಣ, ಕೂರದಹಳ್ಳಿ, ಕೋಡಿಮೋಳೆ, ಹೊಸಪುರ, ತಮ್ಮಡಹಳ್ಳಿ, ಕಾಳನಹುಂಡಿ, ಭೋಗಾಪುರ, ಬಸವನಪುರ, ಚಂದಕವಾಡಿ, ಮಂಗಲ, ಸರಗೂರುಮೋಳೆ, ಕೆಬ್ಬೇಪುರ, ಚಿಕ್ಕೇಗೂರು.**

ಗುಂಡ್ಲುಪೇಟೆ ತಾಲ್ಲೂಕಿನ **ಹುಂಡೀಪುರ, ತೆಂಕಲಹುಂಡಿ, ಹೊನ್ನಶೆಟ್ಟಿಹುಂಡಿ, ಕಬ್ಬಹಳ್ಳಿ, ಕಲ್ಲಹಳ್ಳಿ, ಕುಂದಕೆರೆ, ಬಲಚವಾಡಿ, ಹೊನ್ನೇಗೌಡನಹಳ್ಳಿ, ಭೀಮನಬೀಡು, ಆಲತ್ತೂರು, ಮಾದಾಪಟ್ಟಣ, ಕೆಲಸೂರುಪುರ, ಬರಗಿ, ಮಲ್ಲಯ್ಯನಪುರ, ಸೋಮಹಳ್ಳಿ.**

ಯಳಂದೂರು ತಾಲ್ಲೂಕಿನ **ಯಳಂದೂರು, ಕೆಸ್ತೂರು, ದುಗ್ಗಟ್ಟಿ, ಅಂಬಳೆ** ಗ್ರಾಮಗಳು

ಇವುಗಳಲ್ಲಿ ಕೆಲವು ಗ್ರಾಮಗಳಲ್ಲಿ ಪ್ರತಿವರ್ಷ ಅಲ್ಲದಿದ್ದರೂ ಆಗಾಗ್ಗೆ ರಂಗಚಟುವಟಿಕೆ ನಡೆಸಿಕೊಂಡು ಬರುತ್ತಿದ್ದಾರೆ.

## ೩) ಚಾಮರಾಜನಗರ ಜಿಲ್ಲೆಯ ಹವ್ಯಾಸಿ ರಂಗಭೂಮಿ

ಕರ್ನಾಟಕದ ಇತರ ಜಿಲ್ಲೆಗಳಲ್ಲಿಯಂತೆ, ಇಲ್ಲಿಯೂ ನಗರ ಪ್ರದೇಶದಲ್ಲಿ ವಿದ್ಯಾವಂತರಿಂದ ಹವ್ಯಾಸಿ ರಂಗಚಳವಳಿ ಆರಂಭವಾಗಿದೆ ಎನ್ನಬಹುದು. ಒಂದು ದೃಷ್ಟಿಯಿಂದ ಕರ್ನಾಟಕದ ಹವ್ಯಾಸಿ ರಂಗ ಚಳವಳಿಗೂ ವೃತ್ತಿಕಂಪನಿಗಳ ನಾಟಕಗಳೇ ಸ್ಫೂರ್ತಿ ಸೆಲೆ. ಆದರೆ ಈ ಪ್ರಭಾವ ನಗರ ಪ್ರದೇಶದ ವಿದ್ಯಾವಂತರಲ್ಲಿ ಮೂಡಿಸಿದ ರೀತಿಯೇ ಬೇರೆ. ಕಾಲಾಂತರದಲ್ಲಿ ಚಲನಚಿತ್ರ, ಸಾಹಿತ್ಯದಲ್ಲಿನ ಚಳವಳಿಗಳು ಹಾಗೂ ಇತರೆಡೆಗಳಲ್ಲಿನ ರಂಗಚಳವಳಿಗಳು ಹವ್ಯಾಸಿ ರಂಗಚಟುವಟಿಕೆಯ ಮೇಲೆ ಗಾಢವಾದ ಪರಿಣಾಮ ಬೀರಿದೆ.

### ಆರಂಭದ ಹೆಜ್ಜೆಗಳು

ಕಳೆದ ಶತಮಾನದ ಎರಡನೆಯ ದಶಕದ ಕೊನೆ–ಕೊನೆಯ ವೇಳೆಗೆ ಚಾಮರಾಜನಗರದಲ್ಲಿ ಇದನ್ನು ಗುರುತಿಸಬಹುದು. ಪ್ರಾಯಶಃ ಆಗಿನ ಶಾಲೆಯ ವಿದ್ಯಾರ್ಥಿಗಳು **'ಸುರತನಗರದ ಶ್ರೇಷ್ಠಿ'** (ಶೇಕ್‌ಸ್ಪಿಯರ್‌ನ ಮರ್ಚೆಂಟ್ ಆಫ್ ವೆನಿಸ್ ದ ರೂಪಾಂತರ) ವನ್ನು ಅಭಿನಯಿಸಿದ್ದಾಗಿ ತಿಳಿದುಬರುತ್ತದೆ. ಅನೇಕ ಹಿರಿಯರ ಮಾತುಗಳಲ್ಲಿ ಈ ಮಾಹಿತಿ ಹರಿಯುತ್ತಿತ್ತೆ ವಿನಃ ಅದರ ವಿವರಗಳು ಲಭ್ಯವಿಲ್ಲ.

ಆದರೆ, ಚಾಮರಾಜನಗರದಲ್ಲಿ **'ಚಾಮರಾಜೇಶ್ವರ ಅಮೆಚ್ಯುರ್ಸ್'** ಎಂಬ ಹೆಸರಿನ ಒಂದು ಹವ್ಯಾಸಿ ರಂಗ ಬಳಗ ಕೆಲವು ವರ್ಷಗಳ ವರೆಗೆ ಚಟುವಟಿಕೆ ನಡೆಸಿದೆ. ಪ್ರಾಯಶಃ ಮತ್ತು ೪೦ ರ ದಶಕದ ಪ್ರಾರಂಭದಲ್ಲಿ ಎನ್ನಬಹುದು. ಈ ತಂಡಕ್ಕೂ ವೃತ್ತಿ ಕಂಪನಿಯ ನಾಟಕಗಳೇ ಸ್ಫೂರ್ತಿ. ವಿಶೇಷವಾಗಿ **ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರು** ಮತ್ತು ಅವರ ಕಂಪನಿ ಅಭಿನಯಿಸುತ್ತಿದ್ದ ನಾಟಕಗಳು ಈ ತಂಡದ ಮೇಲೆ ಅಪಾರ ಪ್ರಭಾವ ಉಂಟುಮಾಡಿದ್ದುವು. ಅದರ ಜತೆಗೆ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ, ಗುಬ್ಬಿ ವೀರಣ್ಣನವರ ಕಂಪನಿ, ಹಿರಣ್ಣಯ್ಯನವರ ಮಿತ್ರ ಮಂಡಳಿಯ ನಾಟಕಗಳೂ ಪ್ರಭಾವ ಬೀರಿವೆ.

**'ಚಾಮರಾಜೇಶ್ವರ ಅಮೆಚ್ಯುರ್ಸ್'** ನವರು ಅಭಿನಯಿಸಿದ ನಾಟಕಗಳು ಪ್ರಾಯಶಃ **'ಪ್ರಹ್ಲಾದಚರಿತ್ರೆ' 'ಧೃವಚರಿತ್ರೆ' 'ಕಿಸಾಗೌತಮಿ' ಬುದ್ಧೋದಯ' 'ಭಕ್ತತುಕಾರಾಂ'** ಇತ್ಯಾದಿಗಳು. ಪ್ರಾಯಶಃ ಈ ನಾಟಕಗಳ ಹಲವಾರು ಪ್ರಯೋಗಗಳನ್ನು ಚಾಮರಾಜನಗರದ ಮತ್ತು ಸುತ್ತಲಿನ ಊರುಗಳಲ್ಲಿ ಹಾಗೂ ನಂಜನಗೂಡು, ಮೈಸೂರು ಮತ್ತು ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಪ್ರದರ್ಶಿದ್ದಕ್ಕೆ ದಾಖಲೆಗಳು ಇವೆ.

ಪ್ರಾಯಶಃ ಚಾಮರಾಜನಗರಕ್ಕೆ ನಾಟಕ ಪ್ರದರ್ಶಿಸಲು ವೃತ್ತಿ ಕಂಪನಿಗಳು ಬಂದು ಮೊಕ್ಕಾಂ ಹಾಕಿದರೆ, ಅವರಿಂದ ಥಿಯೇಟರ್ ಬಾಡಿಗೆಗೆ ಪಡೆದು ನಾಟಕ ಪ್ರದರ್ಶಿಸುತ್ತಿದ್ದರು ಎನ್ನಲಾಗಿದೆ.

ನಾಟಕ ಶಿರೋಮಣಿ **ಎ.ವಿ. ವರದಾಚಾರ್ಯರ** ನಾಟಕ ಕಂಪನಿಯಲ್ಲಿ ಹಾಗೂ ಗುಬ್ಬಿಕಂಪನಿಯಲ್ಲಿ ಹಾರ್ಮೊನಿಯಂ ವಾದಕರಾಗಿದ್ದ **ಶ್ರೀ ಶಂಕರಪ್ಪ** ನವರು ಈ ತಂಡಕ್ಕೆ ನಾಟಕ ಕಲಿಸುತ್ತಿದ್ದರು. ಶ್ರೀ ಶಂಕರಪ್ಪ ನವರಿಗೆ ಕಿವಿ ಮಂದವಾಗಿದ್ದರೂ, ತುಟಿಗಳ ಚಲನೆ, ಮುಖಭಾವ ಆಧರಿಸಿ ಹಾರ್ಮೊನಿಯಂ ನುಡಿಸುತ್ತಿದ್ದರು.

ಈ ತಂಡದ ಮುಖ್ಯಸ್ಥರು ಎನ್ನಬಹುದಾದ **ದಿ॥ ಎ.ವಾಸುದೇವರಾವ್ (ವಾಸಪ್ಪನವರು)** ಕೆಲವು ಕಾಲ ಕರ್ನಾಟಕದ ಪ್ರಸಿದ್ಧ ನಟ, ಮುಂಡಾಜೆ ರಂಗನಾಥಭಟ್ಟರ ಕಂಪನಿಯಲ್ಲಿದ್ದರು ಎಂದು ತಿಳಿದು ಬರುತ್ತದೆ. (ಇದೇ ಕಂಪನಿಯಲ್ಲಿ ಡಾ॥ ಶಿವರಾಮ ಕಾರಂತರು ಸ್ವಲ್ಪ ಕಾಲ ಇದ್ದು, ಆ ಕಂಪನಿಗೆ ಗಡ್ಕರಿಯವರ ಮೂಲ ಮರಾಠಿ ನಾಟಕ 'ಏಕ್‌ಚ್ಯಾಪ್ಯಾಲಾ' ದ ರೂಪಾಂತರ ಬರೆದು ಕೊಟ್ಟಿದ್ದರು. ಈ ಕಂಪನಿ ಚಾಮರಾಜನಗರ ಮತ್ತು ಯಳಂದೂರುಗಳಲ್ಲಿ ಮುಕ್ಕಾಂ ಕೂಡಾ ಮಾಡಿತ್ತು. ಹಾಗೆಯೇ ಬಿ.ಸೀನಪ್ಪನವರು ವರದಾಚಾರ್ಯರ ಕಂಪನಿಯ ಕೊನೆ ಕಾಲದಲ್ಲಿ ಸ್ವಲ್ಪ ದಿವಸ ಇದ್ದರು ಎಂದೂ ತಿಳಿದು ಬರುತ್ತದೆ.

ಈ ತಂಡದಲ್ಲಿನ ನಟರು ಬಹುತೇಕರು ಬ್ರಾಹ್ಮಣರು, ಅನೇಕರು ವೈದಿಕರುಗಳು, ಪುರೋಹಿತರುಗಳು ಹೌದು. ಈ ತಂಡದಲ್ಲಿ ವಾಸಪ್ಪನವರ ಕುಟುಂಬದಲ್ಲಿ ಅವರ ಹೆಣ್ಣು ಮಕ್ಕಳು, ಅವರ ಸಂಬಂಧಿಕರು, ಬಿ.ಸೀನಪ್ಪನವರ ಮನೆಯಲ್ಲಿನ ಅವರ ಹೆಣ್ಣು ಮಕ್ಕಳು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ದಿ॥ ಹೆಚ್.ಕೆ.ಕುಮಾರಸ್ವಾಮಿಯವರ ತಂಗಿಯರು, ತಮ್ಮಂದಿರು ಬಾಲ ಪಾತ್ರಗಳನ್ನು ಹೆಣ್ಣು ಪಾತ್ರಗಳನ್ನ ಮಾಡುತ್ತಿದ್ದರು. ಇದೊಂದು ಪ್ರಗತಿಪರ ಹೆಜ್ಜೆ ಎಂದೇ ಹೇಳಬಹುದು.

**ಪ್ರಹ್ಲಾದ ಚರಿತ್ರೆ** ಮತ್ತು ಧೃವಚರಿತ್ರೆ ವರದಾಚಾರ್ಯರ ಕಂಪನಿಯವರು ಆಡುತ್ತಿದ್ದ

ನಾಟಕಗಳು ಪ್ರಹ್ಲಾದ ಚರಿತ್ರೆಯ ವರದಚಾರ್ಯರ ಹಿರಣ್ಯಕಶಿಪು ಪಾತ್ರದ ಸುತ್ತ ಐತಿಹ್ಯಗಳು ದಂತಕತೆಗಳು ಹೇರಳವಾಗಿ ದೊರೆಯುತ್ತವೆ. ಈ ನಾಟಕಗಳು ಈ ಗುಂಪಿನ ಮುಖ್ಯನಾಟಕ. ಇವರ ನಾಟಕವೂ ಅದೇ ಹೆಜ್ಜೆಯಲ್ಲಿಯೇ ಸಾಗಿದಂತೆ ಕಾಣುತ್ತದೆ.

ಈ ನಾಟಕದಲ್ಲಿ ಭಾಗವಹಿಸಿದ ಮುಖ್ಯರು ಎ.ವಾಸುದೇವರಾವ್ (ಹಿರಣ್ಯಕಶ್ಯಪು ವೇ॥ಬ್ರಂ॥ಶ್ರೀ॥ ಟಿ.ಕೆ.ನಂಜುಂಡಯ್ಯ (ಹಿರಣ್ಯಾಕ್ಷ ಮತ್ತು ಹಾವಾಡಿಗ) ಕೆ.ಎಸ್.ಚಂದ್ರಶೇಖರ್ (ಭೂದೇವಿ) ಪ್ರಹ್ಲಾದ (ಬಿ.ಸೀನಪ್ಪನವರ ಮಕ್ಕಳುಗಳಾದ ಸತ್ಯವತಿ ಇಂದಿರಾ ಹಾಗೂ ಕೃಷ್ಣಮೂರ್ತಿ) ಕಯಾದು (ರಾಧಾಮಾಧವನ್) ನಾರದ (ಸಂ॥ವಿ॥ಕೃಷ್ಣಭಾಗವತರು),ನಾರಾಯಣ(ಎಸ್.ಸುಬ್ಬಯ್ಯನವರು) ಕೆ.ವಿ.ಕೃಷ್ಣಮೂರ್ತಿ (ಹಂಡೀಬಾಗ್) ಹಾಗೂ ಇವರುಗಳ ಜತೆ ಪಿ.ಪರುಶುರಾಮ್, ಪಿ.ಶಂಕರ್, ಕೃಷ್ಣಗೋವಿಂದ ಇತರರು ಭಾಗವಹಿಸಿದ್ದಂತೆ ಕಾಣುತ್ತದೆ. ಇದಲ್ಲದೆ ಎಸ್.ಶಂಕರನಾರಾಯಣ, ಎನ್.ಅಶ್ವಥ್‌ನಾರಾಯಣ, ಲಲಿತಾ ಟ್ಯಾಗೆಟ್ ಇತ್ಯಾದಿಗಳೂ ಈ ತಂಡದ ಕಲಾವಿದರು.

ಈ ತಂಡ ತಮ್ಮ ನಾಟಕಗಳ ಮೂಲಕ, ಇಲ್ಲಿಯ ಅಗ್ರಹಾರದ ಬೀದಿಯಲ್ಲಿನ ಪಟ್ಟಾಭೀ ರಾಮಮಂದಿರದ ಕಟ್ಟಡಕ್ಕೆ ಹಣ ಸಂಗ್ರಹಿಸಿದ್ದೂ ಉಂಟು.

ಶಿವರಾಮ ಕಾರಂತರ **'ಕಿಸಾಗೋತಮಿ'** ಯನ್ನು ಆರಿಸಿಕೊಂಡು ಅದನ್ನು ಪ್ರದರ್ಶಿಸಿದ್ದು, ಈ ಹೊತ್ತಿನ ಮಟ್ಟಿಗೂ ಒಂದು ಸಾಹಸವೇ! ಅದು ಎಲ್ಲರಿಗೂ ತಿಳಿದಿರುವಂತೆ ಗೀತ ನಾಟಕ. ಆ ನಾಟಕದ ಹಾಡುಗಳಿಗೆ ಕಾರಂತರೇ ರಾಗಗಳನ್ನು ಹೆಸರಿಸಿದ್ದಾರೆ. ಆದರೆ ಶ್ರೀ ಶಂಕರಪ್ಪನವರು ಆ ಹಾಡುಗಳಿಗೆ ದಕ್ಷಿಣಾದಿ ಶೈಲಿಯಲ್ಲಿ ಸ್ವರ ಸಂಯೋಜನೆ ಮಾಡಿ, ಈ ಕಲಾವಿದರಿಂದ ಹಾಡಿಸಿದ್ದರು. ಮತ್ತು ಜನಮನ್ನಣೆ ಗಳಿಸಿತು ಎಂಬುದು ಇವರ ಪ್ರಯೋಗಶೀಲತೆ, ಅಭ್ಯಾಸಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. **ಶ್ರೀಮತಿ ರಾಧಾಮಾಧವನ್ ರವರು ಅವರು ಮರಣ ಹೊಂದುವವರೆಗೂ ಅಲ್ಲಿಯ ಎಲ್ಲ ಹಾಡುಗಳನ್ನು ಹಾಡುತ್ತಿದ್ದರು. ಅವರಿಗೆ ಎಲ್ಲವೂ ನೆನಪಿತ್ತು.**

ಈ ಅಮೆಚ್ಯೂರ್ ತಂಡದ ಸುತ್ತವೂ ಅನೇಕ ದಂತಕತೆ, ಐತಿಹ್ಯಗಳು ಬೆಳೆದಿವೆ. ಅವುಗಳಲ್ಲಿ ಕೆಲವು ನಿಜ ಇರಬಹುದು. ಕೆಲವು ಅತಿಶಯೋಕ್ತಿ, ಉತ್ಪ್ರೇಕ್ಷೆ ಇರಬಹುದು. ಕೆಲವು ಸುಳ್ಳು ಸೇರಿರಬಹುದು. ಆದರೆ, ಇಷ್ಟು ವರ್ಷಗಳ ನಂತರವೂ ಅಲ್ಲೊಬ್ಬರು, ಇಲ್ಲೊಬ್ಬರು ವೃದ್ಧರು, ಹಿರಿಯರು ನೆನಪಿಸಿಕೊಳ್ಳುತ್ತಾರೆ ಎಂದರೆ ಈ ಪ್ರಯೋಗಗಳು ಮೂಡಿಸಿದ ಪ್ರಭಾವ ಅಚ್ಚರಿಗೊಳಿಸುತ್ತದೆ! **ತುಕಾರಾಂ** ನಾಟಕದ ದೃಶ್ಯದಲ್ಲಿ ಆವೇಶಭರಿತರಾಗಿ ರಾಧಾಮಾಧವನ್, ತಮ್ಮ ಸೋದರ ಮಾವ ವಾಸಪ್ಪನವರ ಬೆನ್ನಿಗೆ ಹೊಡೆದ ಏಟು ನಿಜಕ್ಕೂ ಬಾಸುಂಡೆ ಏಳಿಸಿದ್ದು, ಮಗುವನ್ನು ಕಳೆದುಕೊಂಡ

**ಕಿಸಾಗೋತಮಿಯಾಗಿ** ರಾಧಾಮಾಧವನ್ ಅಭಿನಯ, ಬಿ.ಸೀನಪ್ಪನವರ ರೌದ್ರ ಅಭಿನಯ, ಉತ್ತಾನಪಾದನಾಗಿ ಅಭಿನಯಿಸುತ್ತಿದ್ದ ಪಿ.ಶಂಕರ್ ರವರ ಸೌಂದರ್ಯ, ಹಾವಾಡಿಗ ಮತ್ತು ಹಂಡೀಬಾಗ್ ಆಗಿ ನಂಜುಂಡಯ್ಯ ಮತ್ತು ಕೆ.ವಿ.ಕೃಷ್ಣಮೂರ್ತಿಯವರ ಆಶು ವಿಸ್ತರಣೆಯ ಸಂಭಾಷಣೆ ಇತ್ಯಾದಿಗಳು ರಸಮಯ ಪ್ರಸಂಗಗಳು.

## ನಂತರದ ಕೆಲವು ಪ್ರಯೋಗಗಳು

ಚಾಮರಾಜನಗರದಲ್ಲಿ ಪ್ರೌಢಶಾಲೆ ಪ್ರಾರಂಭವಾದ ಹೊತ್ತಿನಲ್ಲಿ ಕೆಲವು ದಿವಸ ರಂಗಭೂಮಿಯ ಕಲಾವಿದ ದಿ॥ ಸಿ.ಬಿ.ಜಯರಾವ್, ಈ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. (ಆ ಕಾಲದಲ್ಲಿ ಬಿ.ಎಸ್ಸಿ., ಬಿ.ಟಿ. (ಈಗಿನ ಬಿ.ಎಡ್.) ಮಾಡಿದ್ದ ಅವರಿಗೆ ಕೆಲಸ ಹುಡುಕಿಕೊಂಡು ಬರುತ್ತಿತ್ತು. ಆದರೆ ಈ ವ್ಯಕ್ತಿ, ಕೆಲಸ ಬಿಟ್ಟು, ಮಹಮದ್‌ಪೀರ್ ರವರ ಕಂಪನಿ ಸೇರಿಕೊಂಡರು) ಇವರು ಇದ್ದ ಅವಧಿಯಲ್ಲಿ ದಿ॥ ಕೈಲಾಸಂ, ಚಾಮರಾಜನಗರದಲ್ಲಿ ಬಂದು ಕೆಲವು ದಿವಸ ಇದ್ದರಂತೆ. ಆ ಸಂದರ್ಭದಲ್ಲಿ ಇಲ್ಲಿಯ ಗುರುನಂಜಶೆಟ್ಟರ ಛತ್ರದಲ್ಲಿ ಅವರ ಒಂದೆರಡು ನಾಟಕ **ತಾಳಿಕಟ್ಟೋಕ್ಕೂಲಿನೇ, ಬಂಡವಾಳವಿಲ್ಲದ ಬಡಾಯಿ)** ಪ್ರದರ್ಶನಗೊಂಡಿದ್ದು, ಅವರು ಅದರಲ್ಲಿ ಪಾತ್ರ ಮಾಡಿದ್ದು ಉಂಟು.

ಚಾಮರಾಜೇಶ್ವರ ಅಮೆಚ್ಯೂರ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ **ಎನ್.ಸುಬ್ರಹ್ಮಣ್ಯಶಾಸ್ತ್ರಿಗಳು** ಕೆಲವು ವರ್ಷಗಳ ಕಾಲ **'ರಾಜಾವಿಕ್ರಮ'** ನಾಟಕವನ್ನು ಆಡಿಸಿ ಅದರಲ್ಲಿ **ವಿಕ್ರಮನಾಗಿ** ಅಭಿನಯಿಸಿದ್ದೂ ಉಂಟು. ಅವರಲ್ಲಿದ್ದ ಅಭಿನಯ ಕಲೆ, ಹಾಡುಗಾರಿಕೆಯಿಂದಾಗಿ ಬಹಳ ವರ್ಷಗಳ ಕಾಲ ಅವರು ಪ್ರತಿ ಶನಿವಾರ ಶನಿಮಹಾತ್ಮೆ ಕತೆಯನ್ನು ವಾಚಿಸುತ್ತಿದ್ದರು. ಅದು ಕಾವ್ಯ ವಾಚನವೂ ಅಲ್ಲ, ಹರಿಕತೆಯು ಅಲ್ಲ. ಏಕವ್ಯಕ್ತಿ ಪ್ರದರ್ಶನವೂ ಅಲ್ಲ. ಆದರೆ ಈ ಮೂರು ಸೇರಿದ ಒಂದು ಅದ್ಭುತ ಪ್ರದರ್ಶನವಾಗಿತ್ತು. ಅದನ್ನು ಅವರು ಹತ್ತಾರುವರ್ಷ ಕಾಲ ನಡೆಸಿಕೊಂಡು ಬಂದರು.

## ಶಾಲೆ, ಕಾಲೇಜು ಮತ್ತು ಶಿಕ್ಷಣ ಸಂಸ್ಥೆಗಳ ಕೊಡುಗೆ

ಚಾಮರಾಜನಗರ ಹವ್ಯಾಸಿರಂಗ ಚಳವಳಿಯ ಬೆಳವಣಿಗೆಯಲ್ಲಿ ಈ ಊರಿನ ಶಾಲೆ, ಕಾಲೇಜು ಮತ್ತು ಇನ್ನಿತರ ಶಿಕ್ಷಣ ಸಂಸ್ಥೆಗಳ ಕೊಡುಗೆ ಬಹಳವೇ ಇದೆ.

ಈ ನಗರದ **ಪುರ ಪ್ರೌಢಶಾಲೆ,** (ಈಗಿನ ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜು) **ಸರಕಾರಿ ಬಾಲಕರ ಮಾಧ್ಯಮಿಕ ಶಾಲೆ** (ಜಿ.ಕೆ.ಬಿ.ಎಂ.ಎಸ್) ಹಿಂದೀ **ಪ್ರಸಾರ ಸಭಾ** ಮತ್ತು **ಶ್ರೀ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್** ಪ್ರತಿ ವರ್ಷ ಡಿಸೆಂಬರ್ ತಿಂಗಳಿನ ಕೊನೆಯ ವಾರದಲ್ಲಿ ತಮ್ಮ ತಮ್ಮ ಶಾಲೆಯ ವಾರ್ಷಿಕೋತ್ಸವಗಳನ್ನು

ಆಚರಿಸುತ್ತಿದ್ದುವು. ಆಯಾ ಶಾಲೆಗಳಲ್ಲಿ ಆ ಸಂದರ್ಭಕ್ಕೆ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಪ್ರಾಯಶಃ ವಿದ್ಯಾರ್ಥಿಗಳಲ್ಲಿ ಯುವಕರಲ್ಲಿ ನಾಟಕದ ಬಗ್ಗೆ ಅಭಿರುಚಿ ಮೂಡಿಸುವಲ್ಲಿ ಈ ಕಾರ್ಯಕ್ರಮಗಳು ಯಶಸ್ವಿಯಾಗುತ್ತಿದ್ದವು.

## ಪುರ ಪ್ರೌಢಶಾಲೆ

ಈಗ ಇದು ಸರಕಾರಿ ಬಾಲಕರ ಪದವೀಪೂರ್ವ ಕಾಲೇಜಾಗಿದೆ. ಚಾಮರಾಜನಗರದ ಹಳೆಯ ಶಿಕ್ಷಣ ಸಂಸ್ಥೆಗಳಲ್ಲಿ ಒಂದು. ಸ್ವಾತಂತ್ರ್ಯಪೂರ್ವದಲ್ಲಿ ಸ್ಥಾಪನೆಯಾದ ಶಿಕ್ಷಣ ಸಂಸ್ಥೆ ಇರಬಹುದು. ಕನ್ನಡ ರಂಗಭೂಮಿಯ ದೊಡ್ಡ ಪ್ರತಿಭೆಯಾದ ಶ್ರೀ **ಸಿ.ಬಿ.ಜಯರಾಯರು**–ಇವರು ಕೈಲಾಸಂ ರವರ ಗೆಳೆಯರೂ–ಕೂಡಾ–ಕೆಲವು ಕಾಲ ಅಧ್ಯಾಪಕರಾಗಿದ್ದರು. ಇವರ ಕಾಲದಲ್ಲಿ ಶಾಲೆಯಲ್ಲಿ ರಂಗಚಟುವಟಿಕೆ ನಡೆದುದೇ ಅಲ್ಲದೇ **ಅ.ನ.ಕೃ.ರವರು** ಈ ಶಾಲೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಶಾಲೆಯ ವಾರ್ಷಿಕೋತ್ಸವಗಳಲ್ಲಿ ಕೆಲವೊಮ್ಮೆ ಎರಡೆರಡು ನಾಟಕ ಪ್ರದರ್ಶನಗೊಂಡಿದ್ದು ಇದೆ. ಇಲ್ಲಿ ಪ್ರದರ್ಶನಗೊಂಡ ಪ್ರಮುಖ ನಾಟಕಗಳು ಇವು.

೧) **'ಹುಚ್ಚ'** – ಎ.ಎಸ್.ಮೂರ್ತಿ, ನಿರ್ದೇಶನ: ಎ.ಭೀಮರಾವ್, ಅಭಿನಯಿಸಿದ ವಿದ್ಯಾರ್ಥಿ ಕಲಾವಿದರು: ಸಿ.ಆರ್.ಕೃಷ್ಣಮೂರ್ತಿ, ಕೆ.ಆರ್.ಕೃಷ್ಣಮೂರ್ತಿ, ಕೆ.ಪಿ.ರಘುರಾಂ, ಸಿ.ವಿ.ವೆಂಕಟೇಶಮೂರ್ತಿ, ಟಿ.ವೆಂಕಟೇಶಯ್ಯ, ವಿ.ಅನಂತಕುಮಾರ್, ಶ್ರೀಧರ ಇತ್ಯಾದಿ.

೨) **'ಮಹಾರಾತ್ರಿ'** – ಕುವೆಂಪು, ನಿರ್ದೇಶನ: ತ.ಹ.ನಾಗರಾಜನ್, ಆರ್.ಶ್ರೀನಿವಾಸ್, ಸಿ.ಎಸ್.ಮುರಳಿ, ಜಿ.ಎಸ್. ಲಕ್ಷ್ಮಣಯ್ಯರ್ ಇತ್ಯಾದಿ.

೩) **'ಶಾಮಣ್ಣನ ಸಾಹಸ'** – ಕ್ಷೀರಸಾಗರ, ನಿರ್ದೇಶನ: ಬಿ.ಬಾಲಗಣಪತಿಭಟ್ಟ ಇಲ್ಲಿಯ ಶಿಕ್ಷಕರು ಅಭಿನಯಿಸಿದ ನಾಟಕ. ಬಿ.ಬಾಲಗಣಪತಿಭಟ್ಟ, ಪಿ.ಪರಶುರಾಂ, ಅನಂತ ವಾಸುದೇವ ಡೋಂಗ್ರೆ ಇತ್ಯಾದಿ.

೪) **'ಅನುಗ್ರಹ'** – ಹೆಚ್.ಎನ್.ರಾಮಕೃಷ್ಣಪ್ಪ ನಿರ್ದೇಶನ: ಎನ್.ಎಸ್.ಶಿವಕುಮಾರ್, ಅಭಿನಯ ಆರ್.ಶ್ರೀನಿವಾಸ ಸಿ.ಎಸ್.ಮುರಳಿ, ಕೆ.ವೆಂಕಟರಾಜು, ಕಾಂತರಾಜು, ಜಿ.ಎಸ್. ಲಕ್ಷ್ಮಣಯ್ಯರ್, ಇತ್ಯಾದಿ.

೫) **'ಬಂಡವಾಳವಿಲ್ಲದ ಬಡಾಯಿ'**– ಕೈಲಾಸಂ, ನಿರ್ದೇಶನ ಎಚ್.ಎಂ.ರಾಮನಾಥನ್, ಎಚ್.ಎಂ.ರಾಮನಾಥನ್, ಎ.ಎಸ್.ನಾರಾಯಣ್, ಡಿ॥ ಲಕ್ಷ್ಮೀಕಾಂತರಾಜು, ತ.ಹ.ನಾಗರಾಜನ್, ಪಿ.ಪರಶುರಾಂ, ಜಿ.ಎಲ್. ಶಾಮಯ್ಯರ್, ಸಿ.ಎಸ್. ವರದರಾಜು ಇತ್ಯಾದಿ.

೬) **'ನರಕದ ನ್ಯಾಯ'** – ಜಿ.ಪಿ.ರಾಜರತ್ನಂ ನಿರ್ದೇಶನ : ಎಚ್.ಎಂ.ರಾಮನಾಥನ್, ಎಚ್.ಎಂ.ರಾಮನಾಥನ್, ಸಿ.ಕೆ.ಆನಂದರಾವ್.

೭) **'ಡಾ॥ ಬ್ರಹ್ಮಚಾರಿ'** – ಎ.ಎಸ್.ಮೂರ್ತಿ, ಎಚ್.ಎಂ.ರಾಮನಾಥನ್,ಇದಲ್ಲದೇ ಪುರ ಪ್ರೌಢಶಾಲೆಯಲ್ಲಿ ವ್ಯಾಯಾಮ ಶಿಕ್ಷಕರಾಗಿದ್ದ **ಶ್ರೀ ಸಿ.ಎಸ್.ವರದರಾಜು** ರವರು, ಜಲಗಾರದಿಂದ ಮೊದಲಾಗಿ ಬಹಳ ನಾಟಕಗಳನ್ನು ಆಡಿಸಿದ್ದರು. ಆದರೆ ವಿವರಗಳು ಖಚಿತವಾಗಿ ಲಭ್ಯವಿಲ್ಲ. ಇದಲ್ಲದೇ ಕೆಲವು ವರ್ಷ ಉರ್ದು ನಾಟಕಗಳನ್ನು, ಹಾಗೂ ಹಿಂದಿ ನಾಟಕಗಳನ್ನು ಅಭಿನಯಿಸಿದ್ದು ಉಂಟು. ಹಿಂದಿಯ **ಪೂಜಾರಿ** ಎಂಬ ನಾಟಕ ಹಲವು ಸಲ ಇಲ್ಲಿ ಮತ್ತು ಹಿಂದೀ ಪ್ರಸಾರ ಸಭೆಯ ವಾರ್ಷಿಕೋತ್ಸವಗಳಲ್ಲಿ ಪ್ರದರ್ಶನಗೊಂಡಿದೆ. ಈ ಶಾಲೆಯಲ್ಲಿ ಬಹಳ ವರ್ಷ ಕೆಲಸಮಾಡಿ, ಇಲ್ಲಿಯೇ ನಿವೃತ್ತರಾದ, ಜಿ.ಎಲ್.ಶ್ಯಾಮ್ಮಯ್ಯರ್ ಹಲವಾರು ವಿದ್ಯಾರ್ಥಿಗಳಲ್ಲಿ ನಾಟಕ ಪ್ರೇಮ ಹುಟ್ಟುಹಾಕಿದರು.

## ಹಿಂದೀ ಪ್ರಸಾರ ಸಭಾ

ಇದು ಬಹು ಹಳೆಯ ಶಿಕ್ಷಣ ಸಂಸ್ಥೆಗಳಲ್ಲಿ ಒಂದು. ೧೯೪೫ರಲ್ಲಿಯೇ ಇದು ಕಾರ್ಯಾರಂಭ ಮಾಡಿತು. ಹಿಂದಿ ಕಲಿಯುವುದೂ ಒಂದು ವಿದ್ರೋಹದ ದಿನವಾಗಿದ್ದ ಕಾಲದಲ್ಲಿ ಇದು ಕೆಲಸ ಮಾಡಿತು ಎಂಬುದು ಮುಖ್ಯ. ಜತೆಗೆ ಇಲ್ಲಿಂದ ಕಲಿತು ಹೋದ ಸಾವಿರಾರು ಮಂದಿ. ಸಮಜದ ವಿವಿಧ ರಂಗದಲ್ಲಿ ಹೆಸರು ಮಾಡಿದ್ದಾರೆ. ಇಲ್ಲಿಂದ ಕಲಿತ ಸಾವಿರಾರು ಮಂದಿ, ಹಿಂದಿ ಶಿಕ್ಷಕರಾಗಿ ತಮ್ಮ ಬದುಕು ಸಾಗಿಸಿದ್ದಾರೆ.

ಈ ಸಂಸ್ಥೆಯ ಸ್ಥಾಪಕರು ಮುಖ್ಯ ಆಚಾರ್ಯರೂ ಆಗಿದ್ದ ಶ್ರೀ ದಿ॥ ಚಕ್ರವರ್ತಿಗೋಪಾಲಚಾರ್ಯರು ಹಾಗೂ ಅವರ ಮಕ್ಕಳಾದ ಶ್ರೀನಿವಾಸಚಕ್ರವರ್ತಿ, ದಿ॥ ರಂಗನಾಥ ಚಕ್ರವರ್ತಿ, ಶ್ರೀವತ್ಸ ಚಕ್ರವರ್ತಿ ಇವರೆಲ್ಲರೂ ನಾಟಕ ಪ್ರೇಮಿಗಳು. ನಾಟಕ ಆಸಕ್ತರು. ನಟರು, ನಿರ್ದೇಶಕರು. ಈ ಶಾಲೆಯ ವಾರ್ಷಿಕೋತ್ಸವ ಸಮಯದಲ್ಲಿ ಒಂದಕ್ಕಿಂತ ಹೆಚ್ಚು ನಾಟಕ ಪ್ರದರ್ಶಿಸುತ್ತಿದ್ದರು. ಇವುಗಳಲ್ಲಿ ಒಂದು ಹಿಂದಿ ನಾಟಕವಾದರೆ ಉಳಿದಿದ್ದು, ಕನ್ನಡ ನಾಟಕಗಳು. ಕೆಲವೊಮ್ಮೆ ನಾಟಕಗಳಿಗಾಗಿ ಎರಡೆರಡು ದಿವಸ ವಾರ್ಷಿಕೋತ್ಸವ ಮಾಡಿದ ದಿವಸಗಳೂ ಉಂಟು.

ಇಲ್ಲಿಯ ಶಿಕ್ಷಕರುಗಳಾಗಿದ್ದ ಶ್ರೀನಿವಾಸ ಚಕ್ರವರ್ತಿ, ರಂಗನಾಥ ಚಕ್ರವರ್ತಿ ಇವರು ಖುದ್ದು, ಶ್ರಮವಹಿಸಿ, ವಾರ್ಷಿಕೋತ್ಸವಗಳ ವೇದಿಕೆ ನಿರ್ಮಿಸುತ್ತಿದ್ದರು. ಪರದೆ ಕಟ್ಟುತ್ತಿದ್ದರು. ಕನಿಷ್ಠ ದೀಪ ಸೌಕರ್ಯ ಇಟ್ಟುಕೊಂಡಿದ್ದರು.

ಈ ಸಂಸ್ಥೆಯಿಂದ ಹಲವಾರು ನಾಟಕ ಪ್ರದರ್ಶಿತಗೊಂಡಿದೆ. ಈ ಸಂಸ್ಥೆಯ ಪ್ರಾರಂಭದ ಕಾಲದಲ್ಲಿ **ದ್ವಿಜೇಂದ್ರಲಾಲರಾಯರ** ಬಂಗಾಳಿ ನಾಟಕದ ಹಿಂದಿ

ಅನುವಾದ **'ವೀರದುರ್ಗಾದಾಸ್'** ಪ್ರದರ್ಶಿತವಾಯಿತೆಂದು ತಿಳಿದುಬರುತ್ತದೆ.

ಈ ಸಂಸ್ಥೆಯಲ್ಲಿ ಪ್ರದರ್ಶಿತವಾದ ಮುಖ್ಯವಾದ ನಾಟಕಗಳು ಟಿ.ಪಿ.ಕೈಲಾಸಂ ರವರ **ಟೊಳ್ಳುಗಟ್ಟಿ ಭಾಗ-೧ ಮತ್ತು ಭಾಗ - ೨** - ಈ ಎರಡೂ ಭಾಗಗಳೂ ಒಟ್ಟಿಗೆ ಪ್ರದರ್ಶಿತವಾಗಿ ಮಾಹಿತಿ ಇದೆ. **ಟೊಳ್ಳುಗಟ್ಟಿ ಭಾಗ-೧** ರಲ್ಲಿ ಮೂರು ಸಣ್ಣ ನಾಟಕಗಳು. **ಪಾತೂತವರ್ಮನೆ, ಸಾತೂತವರ್ಮನೆ** ಹಾಗು **ಯೋಧ್ಯವಾಣಿಗಳಿವೆ.** ಈ ನಾಟಕಗಳನ್ನು ಶ್ರೀನಿವಾಸ ಚಕ್ರವರ್ತಿಯವರು ಅಭ್ಯಾಸ ಮಾಡಿಸಿದ್ದರು.

೨) **'ಪೋಲಿಕಿಟ್ಟಿ'** - (ಪೋಲಿಕಿಟ್ಟಿ ನಾಟಕದ ಮುಖ್ಯವಾದ ದೃಶ್ಯಗಳನ್ನು ಅಭಿನಯಿಸಲಾಗಿತ್ತು. ಈಗ ಪ್ರಸಿದ್ಧ ನರರೋಗತಜ್ಞರಾಗಿರುವ ಡಾ॥ ಆರ್.ಶ್ರೀನಿವಾಸ್ ಕಿಟ್ಟಿಯಾಗಿ ಅಭಿನಯಿಸಿದ್ದರು.

೩) **'ರತ್ನ ಮೆಚ್ಚಿದ್ಗಂಡು'** - (ಕೈ.ಪ.ವಿದ್ಯಾ ನಿದೇಶನ : ದಿ॥ ರಾಮಶೇಷ ದೀಕ್ಷಿತ್, ಶ್ರೀಕಂಠಶಾಸ್ತ್ರಿ, ಹೆಚ್.ಆರ್.ನಾಗೇಂದ್ರಸ್ವಾಮಿ, ಪಿ.ಎಸ್.ನರಸಿಂಹಯ್ಯಂಗಾರ್, ಕೆ.ವಿ.ಶ್ರೀನಿವಾಸಮೂರ್ತಿ, ಕೆ.ವೆಂಕಟರಾಜು ಇತ್ಯಾದಿ)

೪) **'ಗಗ್ಗಯ್ಯನಗಡಿಬಿಡಿ'** - (ನಾ.ಕಸ್ತೂರಿ, ನಿರ್ದೇಶನ : ಶ್ರೀನಿವಾಸಚಕ್ರವರ್ತಿ, ಹೆಚ್.ಆರ್.ನಾಗೇಂದ್ರಸ್ವಾಮಿ, ವಿ.ಎಸ್.ನರಸಿಂಹ ಅಯ್ಯಂಗಾರ್, ಕೆ.ವೆಂಕಟರಾಜು, ನರಹರಿ, ಎನ್.ವಾಸುದೇವಮೂರ್ತಿ ಇತ್ಯಾದಿ.

೫) ಸಾಹುಕಾರ ನಾಟಕದ ರೂಪಾಂತರ **'ಪುನರಾಯಾನ್ ಮಹಾಕಪಿ**॥ ಶ್ರೀನಿವಾಸ ಚಕ್ರವರ್ತಿ, ಟಿ.ನಾಗರಾಜು, ಇತ್ಯಾದಿ.

೬) **'ಖೋಟಾಪೈಸಾ'** (ಗುಂಡಣ್ಣ)

೭) **'ತ್ರಿಬ್ಬಲ್ ತಾಳಿ'** (ಕೆ.ಗುಂಡಣ್ಣ)

ಇದಲ್ಲದೇ ಹಿಂದಿ ನಾಟಕಗಳನ್ನು ಅಭಿನಯಿಸಲಾಗಿತ್ತು. ಈ ಸಂಸ್ಥೆಯಿಂದ ಹಲವಾರು ನಾಟಕ ಆಸಕ್ತರು, ರಂಗಕರ್ಮಿಗಳು ಹುಟ್ಟಿಕೊಂಡರು.

## ಶ್ರೀ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್

ಶ್ರೀ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಇನ್ನೊಂದು ಪ್ರಮುಖವಾದ ಶಿಕ್ಷಣ ಸಂಸ್ಥೆ. ಇದರ ಪ್ರಾಂಶುಪಾಲರ ಶ್ರೀ ಸಿ.ಎನ್.ಸುಂದರರಾಯರು ಎಲ್ಲ ರೀತಿಯ ಕಲೆಗಳಿಗೂ ಪ್ರೋತ್ಸಾಹ ನೀಡುತ್ತಿದ್ದ ವ್ಯಕ್ತಿ. ಈ ಸಂಸ್ಥೆಯಿಂದ **'ಚೆಂದೊಳ್ಳಿ ಚೆಲುವೆ'** ಮುಂತಾಗಿ ಅನೇಕ ನಾಟಕ ಪ್ರದರ್ಶನಗೊಂಡಿದೆ.

## ಟೌನ್ (ರಿಕ್ರಿಯೇಶನ್) ಕ್ಲಬ್

ಕೆಲವು ವರ್ಷಗಳ ಕಾಲ ಈ ಕ್ಲಬ್‌ನಲ್ಲಿಯೂ ನಾಟಕ ಪ್ರದರ್ಶನಗೊಂಡಿದ್ದು ಇದೆ. (೧೯೬೪-೬೯)

ಈ ಕ್ಲಬ್‌ನ ಸದಸ್ಯರು **'ಎಚ್ಚಮನಾಯಕ'** ಕಲಿತು ಪ್ರದರ್ಶಿಸಿದರು. ಈ ನಾಟಕವನ್ನು ತರಬೇತುಗೊಳಿಸಿದವರು ಹೆಸರಾಂತ ಹಾರ್ಮೋನಿಯಂ ವಾದಕರಾಗಿದ್ದ, ದೇವರು ಅವರು. ಪಾತ್ರವಹಿಸಿದವರು ಶ್ರೀ ಶಿವಯ್ಯ. (ತಹಶೀಲ್ದಾರರು, ಎಚ್ಚಮನಾಯಕ) ಸಿ.ಆರ್.ಶಾಮಣ್ಣ (ಶಿರಸ್ತೆದಾರರು, ಬಾದಶಹ), ಶ್ರೀ. ಎ. ಮಂಜುನಾಥ (ಭ್ರಮರಾಂಬ ಚಿತ್ರಮಂದಿರದ ಮ್ಯಾನೇಜರ್, ಚಾಂದ್‌ಖಾನ್) ಶ್ರೀ. ಎಂ. ಮಾದಯ್ಯ(ಪುರ ಪ್ರೌಢಶಾಲೆ ಗುಮಾಸ್ತರು ಬುಡನ್ ಶಾಸ್ತ್ರಿ) ಶ್ರೀ. ಚಂದ್ರಶೇಖರ್ ಕೆ.ಎಸ್. (ಕೃಷ್ಣಚಿತ್ರ ಮಂದಿರದ ಮ್ಯಾನೇಜರ್ - ಖಾನ್‌ಸಿದ್ಧಾಂತಿ) ಶ್ರೀ. ಸಿ.ಎಸ್.ವರದರಾಜ್ (ಪುರ ಪ್ರೌಢಶಾಲೆ ಅಧ್ಯಾಪಕರು-ತಿರುವೆಂಕಟ) ಶ್ರೀ. ಶಂಭುಲಿಂಗಪ್ಪ (ವಿಕ್ರಮ ಶ್ರೀ. ಎಂ.ನಾರಾಯಣ್ (ಬಿಡಿಒ, ಉಸ್ಮಾನ್) ಶ್ರೀ. ಹೆಚ್.ರಾಮದಾಸ್ (ಪ್ರಾಥಮಿಕ ಶಾಲೆ ಅಧ್ಯಾಪಕರು, ಗಮಕಿ, ತಾಪಸಿ) ಇವರುಗಳಲ್ಲದೇ ಇತರ ಅನೇಕರು ಅಭಿನಯಿಸಿದ್ದರು.

ಇದರ ಎರಡು ಪ್ರದರ್ಶನಗಳು ನಡೆದು ಎರಡನೆಯ ಪ್ರದರ್ಶನದಲ್ಲಿ ಎಲ್.ಐ.ಸಿ.ಯಲ್ಲಿ ನೌಕರಿಯಲ್ಲಿದ್ದ ಶ್ರೀ. ಕಪನೀಪತಿ ಯವರು ಎಚ್ಚಮನಾಯಕನಾಗಿ ಶ್ರೀ. ಎನ್.ಎಸ್.ಚಂದ್ರಶೇಖರ್ ರವರು ಸಣ್ಣಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಈ ಪ್ರದರ್ಶನಗಳಿಗೆ ವೃತ್ತಿ ರಂಗಭೂಮಿ ನಟರಾಗಿದ್ದ ಶ್ರೀ. ಸಿ.ವಿ.ರಾಮಾಶಾಸ್ತ್ರಿಯವರು ಧಾರಾಳವಾದ ನೆರವು ನೀಡಿದ್ದರು.

ಇದಲ್ಲದೆ **ಬಿ.ಎ.ಅರಸುಕುಮಾರ್** ರವರ **ರಾಜಾಕೆಂಪೇಗೌಡ** ನಾಟಕವನ್ನು ಅಭಿನಯಿಸಿದ್ದರು. ಇದರಲ್ಲಿ ಕಪನೀಪತಿ, ಸಿ.ವಿ.ರಾಮಾಶಾಸ್ತ್ರಿ ಎ.ಮಂಜುನಾಥ, ಚಂದ್ರಶೇಖರ ಇತ್ಯಾದಿಗಳು ಅಭಿನಯಿಸಿದ್ದರು. ಇದರ ಪ್ರದರ್ಶನ ಬೆಂಗಳೂರು ಮತ್ತು ದಾವಣಗೆರೆ ಗಳಲ್ಲಿ ನಡೆದ ಕಾಂಗ್ರೆಸ್ ವಸ್ತು ಪ್ರದರ್ಶನಗಳಲ್ಲಿ ಸಹ ನಡೆಯಿತು.

ಡಾ॥ ಬ್ರಹ್ಮಚಾರಿ ಎಂಬ ಸಣ್ಣ ನಾಟಕ ಈ ತಂಡ ಅಭಿನಯಿಸಿದ ಕೊನೆಯ ನಾಟಕ.

## ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಇಲ್ಲಿಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದವರು ಒಂದೆರಡು ವರ್ಷ ತಮ್ಮ ವಾರ್ಷಿಕೋತ್ಸವವನ್ನು ಪೇಟೆ ಶಾಲೆಯ ಆವರಣದಲ್ಲಿ ನಡೆಸಿದರು. ಆ ಸಂದರ್ಭದಲ್ಲಿ **ಎಂ.ಎಲ್.ಎ. ಹಾಗೂ ಗಗ್ಗಯ್ಯನ ಗಡಿಬಿಡಿ** ನಾಟಕ ಅಭಿನಯಿಸಿದ್ದರು. ಈಗ ನಿವೃತ್ತ ಶಿಕ್ಷಕರಾಗಿರುವ ಸುಬ್ಬರಾಮು, ಕೃಷ್ಣಮೂರ್ತಿ ಇತ್ಯಾದಿಗಳು ಅಭಿನಯಿಸಿದ್ದರು.

ಇದಲ್ಲದೇ ಸರಕಾರಿ ಬಾಲಕರ ಮಾಧ್ಯಮಿಕ ಶಾಲೆ, ಬಾಲಕಿಯರ ಮಾಧ್ಯಮಿಕ ಶಾಲೆ ಯಂತಹ ಸಂಸ್ಥೆಗಳು ತಮ್ಮ ಸಂಸ್ಥೆ ವಾರ್ಷಿಕೋತ್ಸವ ಸಂದರ್ಭಕ್ಕೆ ಕೆ.ಗುಂಡಣ್ಣ ಎ.ಎಸ್.ಮೂರ್ತಿ ಯವರ ನಾಟಕಗಳನ್ನು ಅಭಿನಯಿಸಿದ್ದು ಉಂಟು (ಭಲೇ ಹುಡುಗಿ, ಇತ್ಯಾದಿ).

## ಕನ್ನಡ ಕಲಾ ಸಂಘ

ಪ್ರಾಯಶಃ ನಾಟಕಗಳಿಗಾಗಿಯೇ ಹುಟ್ಟಿಕೊಂಡ ಸಂಸ್ಥೆಗಳಲ್ಲಿ ಇದು ಮೊದಲನೆಯದು. ಅಮೆಚ್ಯೂರ್ ಸಂಸ್ಥೆಗಳ ಉದಯಕ್ಕೆ ಇದು ಕಾರಣವಾಯಿತೆನ್ನಬಹುದು. ಚಾಮರಾಜನಗರದಲ್ಲಿ ಆಗ ಕಾಲೇಜು ಇರಲಿಲ್ಲ. ಕೆಲವು ವರ್ಷ ಸರಕಾರಿ ಇಂಟರ್ ಮಿಡಿಯೆಟ್ ಕಾಲೇಜುಗಳಲ್ಲಿ ನಾಟಕದಲ್ಲಿ ಆಸಕ್ತಿ ತೋರಿದ್ದ ಹುಡುಗರುಗಳು ಸೇರಿ ಈ ಸಂಸ್ಥೆ ಹುಟ್ಟುಹಾಕಿದರು. ಹೆಚ್ಚು ಕಡಿಮೆ ಐದಾರು ವರ್ಷಗಳು ಸಕ್ರಿಯವಾಗಿ ನಾಟಕಗಳನ್ನು ಮಾಡುತ್ತಿದ್ದರು. (೧೯೬೨ ರಿಂದ ೧೯೬೭) ಸುಮಾರು ೧೫ ವರ್ಷಗಳಿಗೂ ಹೆಚ್ಚು ಸಮಯ ನಾಟಕ ಸಂಬಂಧಿತ ಕೆಲಸಗಳಿಗೆ ಸ್ಫೂರ್ತಿ ನೀಡುತ್ತಿದ್ದ ಸಂಘಟನೆಯಾಗಿತ್ತು. ಇವರು ಅಭಿನಯಿಸಿದ ನಾಟಕಗಳು.

| | | | | |
|---|---|---|---|---|
| ೧. | ಅಳಿಯ ದೇವರು | ದಾಶರಥಿ ದೀಕ್ಷಿತ್ | ಪೇಟೆ ಶಾಲೆ ಆವರಣ (ಬಲ ಬದಿ) | ಸಿ.ಆರ್. ಕೃಷ್ಣಮೂರ್ತಿ, ಕೆ.ಆರ್.ಕೃಷ್ಣಮೂರ್ತಿ<br>ಕೆ.ಎಸ್.ಕೃಷ್ಣ ಟಿ.ಸುಬ್ಬರಾಮಯ್ಯ, ನರೇಂದ್ರ ಕ್ರಿಸ್ಟಿಮ್ಯಾನುವೆಲ್, ಟಿ.ವೆಂಕಟೇಶಯ್ಯ |
| ೨. | ನಂಜಿನ ನಾಲಗೆ | ನವರತ್ನ ಲಕ್ಷ್ಮಣ್ | ಭುಜಂಗೇಶ್ವರ ಬಡಾವಣೆ (ಎಸ್.ವಿ.ಟಿ. ಆಟೋ ವರ್ಕ್ಸ್ ಮುಂದೆ) ಈಗ ಹೋಟೇಲ್ ಸುಬ್ಬಣ್ಣನವರ ವಠಾರ ಇದೆ. ಗುರುನಂಜಶೆಟ್ಟರ ಛತ್ರ ರವೀಂದ್ರ ಕಲಾಕ್ಷೇತ್ರ, ಬೆಂಗಳೂರು | ಸಿ.ಆರ್.ಕೃಷ್ಣಮೂರ್ತಿ, ಹೆಚ್.ಆರ್. ನಾಗೇಂದ್ರಸ್ವಾಮಿ ಟಿ.ವೆಂಕಟೇಶಯ್ಯ, ಕೆ.ಆರ್.ಕೃಷ್ಣಮೂರ್ತಿ, ಟಿ. ಸ್ವರ್ಣಾಂಬ, ನರೇಂದ್ರ, ಕ್ರಿಸ್ಟಿ ಇತ್ಯಾದಿ. |
| ೩. | ಇನ್‌ಸ್ಪೆಕ್ಟರ್‌ಮನೋಹರ್ | ಎ.ಎಸ್.ಮೂರ್ತಿ | ಪೇಟೆ ಶಾಲೆ ಆವರಣ (ಬಲ ಬದಿ) | ಟಿ.ವೆಂಕಟೇಶಯ್ಯ, ಟಿ.ನಾಗರಾಜ್ ಕೆ.ಆರ್.ಕೃಷ್ಣಮೂರ್ತಿ, ನರೇಂದ್ರ ಇತ್ಯಾದಿ. |

| | | | | |
|---|---|---|---|---|
| ೪. | ಗ್ರಹಗತಿ | ಕೆ.ಗುಂಡಣ್ಣ | ಪೇಟೆ ಶಾಲೆ ಆವರಣ (ಬಲ ಬದಿ) | ಶಿವಣ್ಣ, ಟಿ.ನಾಗರಾಜು, ಹೆಚ್.ಆರ್.ನಾಗೇಂದ್ರಸ್ವಾಮಿ, ಶ್ರೀಧರ್ ಇತ್ಯಾದಿ. |
| ೫. | ಧೂಮಕೇತು | ಕೆ.ಗುಂಡಣ್ಣ | ಪೇಟೆ ಶಾಲೆ ಆವರಣ (ಬಲ ಬದಿ) | ಸಿ.ಆರ್.ಕೃಷ್ಣಮೂರ್ತಿ, ಟಿ. ವೆಂಕಟೇಶಯ್ಯ, ಕೆ.ಆರ್.ಕೃಷ್ಣಮೂರ್ತಿ, ಸಿ.ವಿ.ವೆಂಕಟೇಶ, ಇತ್ಯಾದಿ |
| ೬. | ರಿಹರ್ಸಲ್ | ಮಾರುತಿ ಶಿವರಾಂ | ಕೆ.ಬಿ.ಆರ್.ಥಿಯೇಟರ್ | ಸಿ.ಆರ್.ಕೃಷ್ಣಮೂರ್ತಿ, ಕೆ.ಎನ್. ಕೃಷ್ಣಮೂರ್ತಿ, ಕೆ.ಆರ್.ಕೃಷ್ಣಮೂರ್ತಿ, ಟಿ.ನಾಗರಾಜು ಇತ್ಯಾದಿ |
| ೭. | ರೂಪಾಯಿ ಗಿಡ | ಕ್ಷೀರಸಾಗರ | ಪೇಟೆ ಶಾಲೆ ಆವರಣ (ಬಲ ಬದಿ) | ಆರ್.ಶ್ರೀನಿವಾಸ, ಸಿ. ಆರ್. ಶ್ರೀನಿವಾಸನ್, ಸಿ.ಎಲ್.ನರಸಿಂಹಮೂರ್ತಿ, ಕೆ.ವೆಂಕಟರಾಜು, ಎಸ್.ವೆಂಕಟಾದ್ರಿ, ಟಿ.ಸುಬರಾಮಯ್ಯ |

ಇವುಗಳಲ್ಲಿ ನಂಜಿನ ನಾಲಗೆ ೩–೪ ಪ್ರದರ್ಶನ ಕಂಡಿತು. ಇದು ಬೆಂಗಳೂರಿನಲ್ಲಿ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿ ಒಂದು ಬಹುಮಾನವನ್ನು ಪಡೆಯಿತು. ಈ ಸ್ಪರ್ಧೆಗೆ ಹೋಗಿ ಬರುವ ಖರ್ಚು ಎತ್ತಲು ಗುರುನಂಜಶೆಟ್ಟರ ಛತ್ರದಲ್ಲಿ ನಂಜಿನ ನಾಲಗೆಯ ಒಂದು ಬೆನಿಫಿಟ್ ಪ್ರದರ್ಶನವನ್ನು ಏರ್ಪಡಿಸಿತ್ತು.

ಈಗ ನೋಡಿದರೆ ಈ ಸಂಸ್ಥೆ ಬಹಳ ಅಲ್ಪ ಕಾಲ ಕಾರ್ಯನಿರ್ವಹಿಸಿದೆ ಎಂದೆನ್ನಿಸಿದರೂ, ಅದು ಚಾಮರಾಜನಗರ ಹವ್ಯಾಸಿ ರಂಗಭೂಮಿಯ ಮೇಲೆ ಮೂಡಿಸಿದ ಪರಿಣಾಮ ಮಾತ್ರ ಅಚ್ಚರಿಯನ್ನುಂಟು ಮಾಡುತ್ತದೆ.

೧. ಅದು ಹತ್ತಾರು ಯುವಕರು ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ರಂಗಭೂಮಿಯಲ್ಲಿ ಆಸಕ್ತಿ ಮೂಡಿಸಿತು. ಶಿಸ್ತಿನಿಂದ, ಅಚ್ಚುಕಟ್ಟಾಗಿ ಪ್ರದರ್ಶನ ನೀಡುವುದನನು ಕಲಿಸಿತು.

೨. ತನ್ನ ಮಿತಿಯಲ್ಲಿ ಪೋಷಾಕನ್ನು ಮತ್ತು ಅತ್ಯುತ್ತಮ ಮಟ್ಟದ ಮೇಕಪ್ ಬಳಸಲು ತೊಡಗಿತು.

೩. ಕನಿಷ್ಠ ಅಗತ್ಯಗಳಾದ ಒಂದು ನೀಲಿತೆರೆ, ವಿಂಗ್ಸ್, ಫುಟ್ ಲೈಟ್ಸ್, ಸ್ವಿಚ್ ಬೋರ್ಡ್, ತಂತಿಗಳು, ಹಗ್ಗಗಳನ್ನು ಹೊಂದಿತ್ತು.

೪. ಪೇಟೆ ಶಾಲೆಯ ಆವರಣದಲ್ಲಿ ನಾಟಕ ಆಡಬೇಕಾದರೆ ಆಸ್ಪತ್ರೆಯ ವಸತಿ

ಗೃಹಗಳಿಂದ ವಿಶೇಷವಾಗಿ ಮಹಿಳಾ ವೈದ್ಯರ ಮನೆಯಿಂದ ವಿದ್ಯುತ್ ಸಂಪರ್ಕ ಪಡೆಯಬೇಕಿತ್ತು. ಅಷ್ಟು ಉದ್ದದ ಸುಮಾರು ೧೦೦ ಮೀಟರ್ ವೈರನ್ನು ಅದು ಹೊಂದಿತ್ತು.

ಇಲ್ಲಿ ಅಭಿನಯಿಸಿದ ಕಲಾವಿದರು, ಮುಂದೆ ರಂಗಾಸಕ್ತಿಯನ್ನು ಮುಂದುವರೆಸಿಕೊಂಡು ಬಂದರು. ಹಲವಾರು ಉತ್ತಮ ಹೆಸರನ್ನು ಗಳಿಸಿದರು. **ಸಿ.ಆರ್.ಕೃಷ್ಣಮೂರ್ತಿ**ಯವರು ಆರಂಭದಲ್ಲಿ ಶಿವಮೊಗ್ಗದಲ್ಲಿ ನಂತರ ಬಿ.ವಿ.ಕಾರಂತರ ಬೆನಕ ತಂಡದಲ್ಲಿ ಅತ್ಯಂತ ಸಕ್ರಿಯವಾಗಿ ಕೆಲಸ ನಿರ್ವಹಿಸಿದರು. ಕ್ರಿಸ್ಟೋಫರ್ ಮಾರ್ಲೋನ ನಾಟಕದ ಅನುವಾದ ಕೂಡಾ ಸಿದ್ಧಪಡಿಸಿದರು. ಇದು ಇನ್ನಿತರ ತಂಡಗಳ ಸ್ಥಾಪನೆಗೆ ಹಾದಿಯನ್ನು ನಿರ್ಮಿಸಿತು.

ಸುಮಾರು ೬೬–೬೭ರ ವರೆವಿಗೆ ಇದು ಸಕ್ರಿಯವಾಗಿದ್ದು ನಾಟಕ ಆಡುವುದನ್ನು ನಿಲ್ಲಿಸಿದರೂ, ಮುಂದಿನ ೧೦ ವರ್ಷಗಳಲ್ಲಿ ಆ ತಂಡದ ಸದಸ್ಯರು ವಿಶೇಷವಾಗಿ ಟಿ.ನಾಗರಾಜು, ಎಲ್ಲ ರೀತಿಯ ರಂಗಚಟುವಟಿಕೆಗಳಿಗೂ ನಿರಂತರ ಪ್ರೋತ್ಸಾಹ, ಮಾರ್ಗದರ್ಶನ, ನೆರವು ನೀಡುತ್ತಿದ್ದರು. ಇದರಿಂದಾಗಿ, ಒಟ್ಟಾರೆ ಇದು ಸುಮಾರು ಒಂದೂವರೆ, ಎರಡು ದಶಕಗಳ ಕಾಲ ಹವ್ಯಾಸಿ ರಂಗವನ್ನು ಬೆಳಗಿತು ಎಂದೇ ಹೇಳಬೇಕು.

## ಕನ್ನಡ ಗೆಳೆಯರ ಬಳಗ

ಕನ್ನಡ ಕಲಾ ಸಂಘ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿಯೇ ಇಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದ ಮು.ವಿಶ್ವೇಶ್ವರಯ್ಯ, ಹೆಚ್.ಜಿ.ಶ್ರೀನಿವಾಸಮೂರ್ತಿ ಗಳು ಈ ಸಂಘ ಸ್ಥಾಪಿಸಿದರು. **'ತ್ರಿಬ್ಬಲ್ ತಾಳಿ'** ಮುಂತಾದ ನಾಟಕ ಅಭಿನಯಿಸಿದರು. ಸ್ವಾತಂತ್ರ್ಯ ಹೋರಾಟಗಾರರಾದ ದಿ॥ ಸಿ.ಜಿ.ರಾಜಶೇಖರ್ ಇದಕ್ಕೆ ಬೆನ್ನಲುಬಾಗಿದ್ದರು.

## ಕನ್ನಡ ಕಲಾಭಿಮಾನಿಗಳ ಸಂಘ

ಕನ್ನಡ ಚಲನಚಿತ್ರ ನಟ ರಾಜಕುಮಾರ್ ರವರು ನೂರು ಚಿತ್ರ ಮುಗಿಸಿದ ಸಂದರ್ಭದಲ್ಲಿ ಅವರ ಸನ್ಮಾನದ ನೆಪದಲ್ಲಿ ಈ ಸಂಸ್ಥೆ ಹುಟ್ಟಿತು. ಮುಂದಿನ ಐದಾರು ವರ್ಷ ಕಾಲ ಬೇರೆ – ಬೇರೆ ಸಮಾರಂಭ, ರಾಜ್ಯೋತ್ಸವ ಸಮಾರಂಭದ ನೆಪದಲ್ಲಿ ನಾಟಕಗಳನ್ನು ಆಡಿಸುತ್ತಿತ್ತು. **'ಲಕ್ಷಂ ಭಕ್ಷ್ಯಾಮಿ'** (ಕೆ.ಗುಂಡಣ್ಣ) ಇತ್ಯಾದಿ ನಾಟಕಗಳನ್ನು ಅದು ಪ್ರದರ್ಶಿಸಿತು.

## ಕನ್ನಡ ಸಾಹಿತ್ಯ ಸಂಘ

ಇಲ್ಲಿಯ ಜೆ.ಎಸ್.ಎಸ್. ಕಾಲೇಜಿನಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳು, ದಿ॥

ಎನ್.ಶ್ರೀನಿವಾಸನ್, ಬಿ.ಜಿ.ಕೆ. ಸಿಂಗ್, ನಾಗಭೂಷಣಶರ್ಮ ಸಿ.ಎಸ್., ಸಿ.ಆರ್.ಶ್ರೀನಿವಾಸ್, ಟಿ.ಸುಬ್ಬರಾಮಯ್ಯ ಇವರ ನೇತೃತ್ವದಲ್ಲಿ ಕಾಲೇಜಿನಿಂದ ಹೊರಗೆ ಈ ಸಂಘಟನೆ ಮಾಡಿದರು. ಇದರ ಪ್ರಮುಖರೂ ಆಗಿದ್ದ ಎನ್.ಶ್ರೀನಿವಾಸರಾವ್, ಪದ್ಯ ಮತ್ತು ನಾಟಕಗಳ ರಚನೆಯನ್ನು ಮಾಡುತ್ತಿದ್ದರು. ಅವರ **'ಮುದ್ಕನ್‌ಮಧ್ವೆ'** ನಾಟಕ ಅಭಿನಯಿಸಲ್ಪಟ್ಟಿತ್ತು. ಇದರ ಜತೆಗೆ **ಖೋಟಾಪೈಸಾ** ಇತ್ಯಾದಿ ನಾಟಕ ಕೂಡಾ ಆಡಿದರು.  ಕೆಲವು ಕಾಲದ ನಂತರ ಎನ್. ಶ್ರೀನಿವಾಸ ರಾವ್ ತಮ್ಮ ನಾಟಕ ಪ್ರಕಟಿಸಿದರು.

## ಜೆ.ಎಸ್.ಎಸ್.ಕಾಲೇಜು

೧೯೬೭ರಲ್ಲಿ ಇಲ್ಲಿ ಜೆ.ಎಸ್.ಎಸ್.ಕಾಲೇಜು ಅಸ್ತಿತ್ವಕ್ಕೆ ಬಂದಿತು. ಕಾಲೇಜು ಅಸ್ತಿತ್ವಕ್ಕೆ ಬಂದ ನಂತರ ಇಲ್ಲಿ ನಾಟಕ ಚಟುವಟಿಕೆ ಪ್ರಾರಂಭವಾಯಿತು. ನಗೆ, ನಾಟಕಗಳ ಜೊತೆಗೆ ಗಂಭೀರವಾದ ನಾಟಕಗಳ ಪ್ರಯೋಗ ಆಯಿತು ಎಂಬುದು ಗಮನಾರ್ಹವಾದ ಸಂಗತಿ. ಆರಂಭದಲ್ಲಿ ಹಿರಿಯ ವಿಮರ್ಶಕರಾದ ಶ್ರೀ. **ಎ.ಎಸ್.ಜಯರಾಂ,** ಉಪನ್ಯಾಸರಾಗಿದ್ದ ಶ್ರೀ **ಚಂದ್ರಪ್ಪ,** ಶ್ರೀ **ಚಂದ್ರಶೇಖರಯ್ಯ** ಮತ್ತು ಆ ನಂತರದಲ್ಲಿ ಶ್ರೀ **ಟಿ.ಜಿ.ಬಸವಾರಾಧ್ಯ** ನಾಟಕಗಳಲ್ಲಿ ಆಸಕ್ತಿ ತೋರಿಸಿದ್ದರು. ಕೆಲವು ಕಾಲ ಇಲ್ಲಿ ಕಾಲೇಜಿನ ಪ್ರಾಂಶುಪಾಲರಾಗಿದ್ದ **ವಿದ್ವಾನ್ ಕೆ.ಎಂ. ರೇವಣ್ಣಸಿದ್ದಯ್ಯ** ಅವರು ಸಂಸ್ಕೃತ ಸಾಹಿತ್ಯದ ಪ್ರಾಧ್ಯಾಪಕರಾಗಿದ್ದ ಕಾರಣ ಕಾಲೇಜಿನಲ್ಲಿ ರಂಗಚಟುವಟಿಕೆಗೆ ಹೆಚ್ಚಿನ ಗಮನ ನೀಡಿದರು. ಅವರ ಅವಧಿಯಲ್ಲಿ ಒಂದು ಚಿಕ್ಕವೇದಿಕೆ ಅದಕ್ಕೆ ತೆರೆ ಇತ್ಯಾದಿಗಳಿಗೆ ಪೈಪುಗಳು ನಿರ್ಮಾಣವಾಯಿತು. ಇಲ್ಲಿ ಅಭಿನಯಿಸಿದ ನಾಟಕಗಳು.

| | | | | |
|---|---|---|---|---|
| ೧. | ಹೋಂರೂಲು | ಕೈಲಾಸಂ | ಎ.ಎಸ್.ಜಯರಾಂ | ಡಿ.ಕೆ.ವಿಶ್ವನಾಥ,ಎಸ್.ಶಾರದಾ |
| ೨. | ಕಂಬಳಿನಾಗಿದೇವ | ವಿದ್ವಾನ್ ಶಿವಲಿಂಗಯ | ಚಂದ್ರಪ್ಪ | ಚಂದ್ರಪ್ಪ ಸ್ವಾಮಿ ಇತ್ಯಾದಿಗಳು |
| ೩. | ರಿಮೆಂಬರ್ ಸೀಸರ್ | ಚಂದ್ರಶೇಖರಯ್ಯ | ದಿ॥ ಡಿ.ಕೆ.ವಿಶ್ವನಾಥ್ | ಎ.ಡಿ.ಸಿಲ್ವ |
| ೪. | ಪ್ರೇಮ ಪಕ್ಷಿ | ಕೆ.ಗುಂಡಣ್ಣ | ಚಂದ್ರಶೇಖರಯ್ಯ | ದಿ॥ ಡಿ.ಕೆ.ವಿಶ್ವನಾಥ್, ಎಸ್.ಶಾರದಾ, ಪಿ.ಶೀಲಾ, ಇತ್ಯಾದಿಗಳು |
| ೫. | ಅಮ್ಮಾವ್ರಗಂಡ | ಕೈಲಾಸಂ | ಟಿ.ಜಿ.ಬಸವರಾಧ್ಯ | ಕೆ.ವೆಂಕಟರಾಜು, ದಿ॥ ಡಿ.ಕೆ.ವಿಶ್ವನಾಥ ನಾಗಲಕ್ಷ್ಮಿ, ಎಸ್.ಸರಸ್ವತಿ, ಅಬ್ರಹಾಂ ಡಿ ಸಿಲ್ವ |
| ೬. | ಸಂದೋಪಸುಂದರು | ಪರ್ವತವಾಣಿ | | ದಿ॥ ಡಿ.ಕೆ.ವಿಶ್ವನಾಥ, ಕೆ.ವೆಂಕಟರಾಜು, ಟಿ.ಸುಬ್ಬರಾಮಯ್ಯ, |

| | | | |
|---|---|---|---|
| | | | ಎಸ್.ಶಾರದಾ, ಎಸ್.ಸರಸ್ವತಿ, ನಾಗಲಕ್ಷ್ಮಿ, ಏ.ಡಿ.ಸಿಲ್ವ ಇತ್ಯಾದಿ |
| ೭. ಗಂಡು ಗೊಡಲಿ | ಚಂದ್ರಪ್ಪ | | ಏ.ಡಿ.ಸಿಲ್ವ, ಶಿವನಂಜಯ್ಯ, ಬಂಗಾರನಾಯಕ, ದಿ॥ ನಳಿನ ವಿಮಲ ಕುಮಾರಿ ಇತ್ಯಾದಿ |
| ೮. ಲೇಡಿಸ್ ಓನ್ಲಿ | ಎ.ಎಸ್.ಮೂರ್ತಿ | | ಏ.ಡಿ.ಸಿಲ್ವ, ಶಿವನಂಜಯ್ಯ, ಬಂಗಾರನಾಯಕ ಇತ್ಯಾದಿ |
| ೯. ಶುದ್ಧ ಶೋಂಭೇರಿ | ಎ.ಎಸ್.ಮೂರ್ತಿ | | ಕೆ.ವೆಂಕಟರಾಜು, ಎನ್.ಶ್ರೀನಿವಾಸರಾವ್, ಟಿ.ಸುಬ್ಬರಾಮಯ್ಯ, ಜಿ.ಎಸ್.ಎಲ್. ಅಯ್ಯರ್ ನಳಿನ ವಿಮಲ ಕುಮಾರಿ ಇತ್ಯಾದಿ |
| ೧೦. ಟಿ.ಪ್ರಸನ್ನನಗೃಹಸ್ಥಾಶ್ರಮ | ಪಿ.ಲಂಕೇಶ್ | ಕೆ.ವೆಂಕಟರಾಜು | ಕೆ.ವೆಂಕಟರಾಜು, ಕೆ.ರಾಧ ನಳಿನ ವಿಮಲ ಕುಮಾರಿ, ಕೆ.ಆರ್. ನರಸಿಂಹಸ್ವಾಮಿ ಡಿ.ಕೆ.ಶಂಕರರಾವ್ ಇತ್ಯಾದಿ |
| ೧೧. ಅಳಿಯದೇವರು | ದಾಶರಥಿ ದೀಕ್ಷಿತ್ | | ವಿ.ಎನ್.ಲಕ್ಷ್ಮಿನರಸಿಂಹನ್, ಟಿ.ವಾಸನ್ ಇತ್ಯಾದಿ |
| ೧೨. ಅಕ್ಕ-ಪಕ್ಕ | ನವರತ್ನರಾಂ | | ಮಲೆಯೂರು ಗುರುಸ್ವಾಮಿ, ಎಲ್.ತಿಪ್ಪೇಸ್ವಾಮಿ, ಎ.ಎಂ.ಬಸವರಾಜು, ಕೆ.ವೆಂಕಟರಾಜು, ಟಿ.ವಾಸನ್, ಇತ್ಯಾದಿ |
| ೧೩. ಕುಂಟಾ, ಕುಂಟಾ, ಕುರವತ್ತಿ | ಚಂದ್ರಶೇಖರ ಪಾಟೀಲ | | ಲಕ್ಷ್ಮಣಯ್ಯರ್, ಕೆ.ಪಿ.ಶಿವಮೂರ್ತಿ ಇತ್ಯಾದಿ |
| ೧೪. ಜಲಗಾರ | ಕುವೆಂಪು | ಕೆ.ವೆಂಕಟರಾಜು ಚಂದ್ರಶೇಖರ್ | ಟಿ.ವಾಸನ್, ಕೆ.ಪಿ.ಶಿವಮೂರ್ತಿ ದೇವಯ್ಯ ಹರವೆ, ಅಶ್ವಥ, ಲಕ್ಷಮಣಯ್ಯರ್ ಇತ್ಯಾದಿ |

೧೯೬೭ ರಿಂದ ೧೯೭೩ರ ವರೆವಿಗೆ ದೊಡ್ಡಪ್ರಮಾಣದಲ್ಲಿ ಶಿಸ್ತಿನ ರಂಗಚಟುವಟಿಕೆ ನಡೆಯುತ್ತಿತ್ತು. ೧೯೭೩ರ ನಂತರ ರಂಗಚಟುವಟಿಕೆ ಕಡಿಮೆಯಾಗುತ್ತ ಬಂದಿದ್ದು ವಿಷಾದದ ಸಂಗತಿ. ಕಾಲೇಜು ರಂಗಭೂಮಿ ಚೆನ್ನಾಗಿದ್ದರೆ ಪ್ರಾಯಶಃ ಚಾಮರಾಜನಗರದಲ್ಲಿ ಹವ್ಯಾಸಿ ರಂಗ ಚಟುವಟಿಕೆ ಚೆನ್ನಾಗಿ ಇರುತ್ತಿತ್ತೇನೋ!

## ಈಗಲೂ ಚಟುವಟಿಕೆಯಿಂದಿರುವ ಹವ್ಯಾಸಿ ರಂಗ ತಂಡಗಳು

### ಶಾಂತಲಾ ಕಲಾವಿದರು (೧೯೭೩)

ಪ್ರಾಯಶಃ ಚಾಮರಾಜನಗರದ ಮೊತ್ತ ಮೊದಲ ಪೂರ್ಣಪ್ರಮಾಣದ ಹವ್ಯಾಸಿ ರಂಗ ತಂಡ ಎಂದು ಕರೆಯಬಹುದಾದ ಸಂಸ್ಥೆ. ಈವರೆಗೆ ಮೇಲೆ ವಿವರಿಸಲಾದ ಸಂಸ್ಥೆಗಳು ವಾರ್ಷಿಕೋತ್ಸವ, ರಾಜ್ಯೋತ್ಸವ ಇತ್ಯಾದಿ ಸಂದರ್ಭಗಳಲ್ಲಿ ನಾಟಕ ಅಭಿನಯಿಸುವ ಪರಿಪಾಠ ಇಟ್ಟುಕೊಂಡಿದ್ದವು. ಆದರೆ ನಾಟಕವನ್ನೇ ಆಡಲು ಹುಟ್ಟಿಕೊಂಡ ತಂಡ. ಬಹಳ ಕಡಿಮೆ ಸಂಖ್ಯೆಯಲ್ಲಿ ನಾಟಕೇತರ ಚಟುವಟಿಕೆ ಹಮ್ಮಿಕೊಳ್ಳಲಾಗಿದೆ. ಈಗ ಅನಿವಾರ್ಯವಾಗಿ ಟ್ರಸ್ಟ್ ಮಾಡಿ ಪದಾಧಿಕಾರಿಗಳನ್ನು ನೇಮಕಮಾಡಲಾಗಿದೆ.

ಈ ತಂಡ ತಾನು ನಾಟಕ ಮಾಡುವುದರ ಜೊತೆಗೆ ನಾಡಿನ ಪ್ರಮುಖ ತಂಡಗಳನ್ನು ಆಹ್ವಾನಿಸಿ ನಾಟಕ ಮಾಡಿಸಿದೆ. **ನೀನಾಸಮ್ ತಿರುಗಾಟ** (೫ ಬಾರಿ) **ಪ್ರೊಥಿಯೂ ತಿಪಟೂರು** (೨ಬಾರಿ) **ನೀನಾಸಮ್ ಮರು ತಿರುಗಾಟ** (೨ಬಾರಿ) **ಚಿಣ್ಣ-ಬಣ್ಣ** (೧ ಬಾರಿ) **ನೀನಾಸಮ್ ಪ್ರಯಾಣ** (೨ಬಾರಿ) **ಭಾರತೀಯ ರಂಗ ಶಿಕ್ಷಣ ಸಂಸ್ಥೆ, ರಂಗಾಯಣ** (೧ ಬಾರಿ) **ಆಟಮಾಟ, ಜನಮನದಾಟ** ಇತ್ಯಾದಿ ರಂಗತಂಡಗಳನ್ನು ಆಹ್ವಾನಿಸಿದೆ.

ಈ ತಂಡಕ್ಕೆ ಹೊರಗಿನಿಂದ ನಿರ್ದೇಶಕರುಗಳು ಬಂದು ನಾಟಕ ಮಾಡಿಸಿದ್ದಾರೆ. ನಾ.ಶ್ರೀನಿವಾಸ (**ಉದ್ಧವ, ತದ್ರೂಪಿ, ತಲೆಬಾಗದ ಜನ**) ವಿನೋದ್ ಅಂಬೇಕರ್ (**ಪುಷ್ಪರಾಣಿ**) ಕೃಷ್ಣಮೂರ್ತಿ ಕವತ್ತಾರ್ (**ಮಾನಿಷಾದ**) ಪ್ರಮೋದ್ ಶಿಗ್ಗಾಂವ್, ಮಹಾವೀರ್ ಜೈನ್ (**ಬಾಲೋತ್ಸವ**) ಪಿ.ಗಂಗಾಧರಸ್ವಾಮಿ (**ಅರಹಂತ**) ಇತ್ಯಾದಿ

ಇತ್ತೀಚಿನ ವರ್ಷಗಳಲ್ಲಿ (೧೯೯೮ ರಿಂದ ಈಚೆಗೆ ಪ್ರದರ್ಶಿತ ನಾಕಗಳ ಒಂದಕ್ಕಿಂತ ಹೆಚ್ಚು ಪ್ರದರ್ಶನ ನಡೆದಿವೆ. ಇದಕ್ಕೆ ಮುನ್ನ ಹೊಸ ನಾಟಕದ ಒಂದೇ ಪ್ರಯೋಗ ನಡೆಯುತ್ತಿತ್ತು.

ಈ ತಂಡದಿಂದ **ಚಂದ್ರಶೇಖರಚಾರ್ ಹೆಗ್ಗೋಠಾರ, ಚಿತ್ರಾ ವಿ., ವಿನಯ್ ಬಿ.ಎಸ್., ಅಜಿತ್ ಕೆ., ಮಧುಸೂದನ್ ವಿ.ಡಿ., ಶಂಕರಬಾಬು (ಸತ್ಯ)** ರಾಜು, **ಶಿಲ್ಪ** - ರಂಗಶಿಕ್ಷಣದ ಪದವೀಧರರಾಗಿದ್ದಾರೆ. ಇದಲ್ಲದೇ ಈ ತಂಡದ **ಬರ್ಟಿ ಒಲಿವೇರಾ,** ರುಸ್ತುಂಭರೂಚಾ ನಿರ್ದೇಶಿಸಿದ ಅಭಿನಯ ಕಮ್ಮಟದಲ್ಲಿ ಭಾಗವಹಿಸಿದ್ದಾರೆ. ಇಲ್ಲಿಯ ಚಿತ್ರಾ, ಶ್ರೀನಿವಾಸ ವಿ., ಮಧು, ಅಜಿತ್, ರಾಜು ಹಾಗೂ ಚಂದ್ರಶೇಖರ್ ರಂಗಾಯಣ ಭಾರತೀಯ ರಂಗ ಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆದಿದ್ದಾರೆ.

ಈ ತಂಡದ **ಕೆ.ವೆಂಕಟರಾಜು (ತಲೆಬಾಗದ ಜನ) ವಿನಯ್ ಬಿ.ಎಸ್. (ಅಶ್ವಘೋಷ)** ನಾಟಕ ಬರೆದು ಪ್ರಕಟಿಸಿದ್ದಾರೆ. **ಎನ್.ಚಂದ್ರಶೇಖರ್, ಮೋಕ್ಷಗುಂಡಂ ವಿಶ್ವೇಶ್ವರಯ್ಯನವರನ್ನು** ಕುರಿತಂತೆ ಹಾಗೂ ನಂಜುಂಡೇಶ್ವರನನ್ನು ಕುರಿತಂತೆ ನಾಟಕ ಬರೆದಿದ್ದಾರೆ. ಆಡಿಸಿದ್ದಾರೆ.

ಆ ಮಾಧ್ಯಮಕ್ಕಾಗಿಯೇ ಹುಟ್ಟಿದ ಸಂಸ್ಥೆ ಇದು. ಆಗ ಜೆ.ಎಸ್.ಎಸ್. ಕಾಲೇಜಿನಿಂದ ಹೊರ ಬಂದ ರಂಗಾಸಕ್ತರು ಕಟ್ಟಿಕೊಂಡ ತಂಡ. ಆರಮಭದಲ್ಲಿ ಇದನ್ನು ಶಾಂತಲಾ ಹವ್ಯಾಸಿ ಕಲಾವಿದರು ಎಂದು ಕರೆಯಲಾಗುತ್ತಿತ್ತು. ಈಚೆಗೆ ಇದನ್ನು ಹ್ರಸ್ವಗೊಳಿಸಿ ಶಾಂತಲಾ ಕಲಾವಿದರು ಎಂದು ಕರೆಯಲಾಗುತ್ತಿದೆ. ೧೯೭೩ರಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜುಲೈ ನಲ್ಲಿ ನಾಟಕ ಸ್ಪರ್ಧೆ ನಡೆಸಿತು. ಈ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸುವ ಸಲುವಾಗಿ ನಾಟಕ **'ಬದುಕ ಮನ್ನಿಸು ಪ್ರಭುವೇ'!** (ರಚನೆ : ಟಿ.ಎಸ್.ಸೀತಾರಾಂ, ನಿರ್ದೇಶನ ಚಂದ್ರಶೇಖರ್) ಅಭ್ಯಾಸ ಮಾಡಲಾಯಿತು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ತಂಡ ಎಂದೇ ಕರೆಯಲಾಗಿತ್ತು. ಆ ನಂತರ ಕಲಾವಿದರಲ್ಲಿ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ೧೦.೧೦೭೩ರಂದು **'ಬದುಕು ಮನ್ನಿಸು ಪ್ರಭುವೇ'!** ಮತ್ತು ಲಂಕೇಶರ **'ಗಿಳಿಯು ಪಂಜರದೊಳಿಲ್ಲ'!** – ಈ ಎರಡು ನಾಟಕಗಳೊಂದಿಗೆ ಈ ತಂಡ ಅಸ್ತಿತ್ವಕ್ಕೆ ಬಂದಿತ್ತು ಎಂಬುದು ವಿಶೇಷ. ಈ ನಾಟಕಕ್ಕೆ ಪ್ರವೇಶ ಧನ ರೂ. ೧.೦೦ ಇಡಲಾಗಿತ್ತು. ಯಾವುದೇ ಔಪಚಾರಿಕವಾದ ಉದ್ಘಾಟನೆ ವೇದಿಕೆಯ ಸಮಾರಂಭ ಇಲ್ಲದೇ ಈ ತಂಡ ಅಸ್ತಿತ್ವಕ್ಕೆ ಬಂದಿತು.

ಅಲ್ಲಿಂದ (೧೦.೧೦.೭೩) ಈವರೆವಿಗೂ ಈ ತಂಡ ರಂಗಭೂಮಿಯ ಕೆಲಸ ಮಾಡಿಕೊಂಡೇ ಬರುತ್ತಿದೆ. ಈಗ ಎರಡು ಮತ್ತು ಮೂರನೆಯ ತಲೆಮಾರಿನ ಮಂದಿ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಕೆಲವೊಂದು ವರ್ಷದಲ್ಲಿ ಹೆಚ್ಚಾಗಿ ಕೆಲವೊಂದು ವರ್ಷದಲ್ಲಿ ಕಡಿಮೆಯಾಗಿ ರಂಗಚಟುವಟಿಕೆ ನಡೆಯುತ್ತಿದೆ.

ಈ ತಂಡ ತನಗೆ ತಾನೇ ಅಲಿಖಿತ ನಿಯಮಗಳನ್ನು ಹಾಕಿಕೊಂಡಿತ್ತು. ನಾಟಕ ಮತ್ತು ರಂಗಭೂಮಿಯ ಚಟುವಟಿಕೆಗಷ್ಟೇ ತನ್ನನ್ನು ಸೀಮಿತಗೊಳಿಸಿ ನಾಟಕಕ್ಕೆ ಕಡ್ಡಾಯವಾಗಿ ಅತಿ ಕಡಿಮೆ ಮೊತ್ತದ್ದಾದರೂ ಪ್ರವೇಶ ಧನ ಇಡುವುದು ಪದಾಧಿಕಾರಿಗಳನ್ನು ನೇಮಕ ಮಾಡುವುದು ಬೇಡ. (ಈಗ ಇದು ಟ್ರಸ್ಟ್ ಆಗಿದೆ.) ನಾಟಕಕ್ಕೆ ಒಬ್ಬ ನಿರ್ದೇಶಕ ಮತ್ತು ಸಂಚಾಲಕ ಇರತಕ್ಕದ್ದು. ಕಾರ್ಯಕ್ರಮ ಮುಗಿದ ನಂತರ ಖರ್ಚು – ವೆಚ್ಚ ಮಂಡಿಸಿ ಅದನ್ನು ಹರಿದು ಹಾಕುವುದು. ಹೀಗೆ ಹಲವು ನಿಯಮ ಹಾಕಿಕೊಳ್ಳಲಾಗಿತ್ತು.

ಈ ತಂಡ ಗುರುನಂಜಶೆಟ್ಟರ ಛತ್ರದಿಂದ ಆರಂಭಿಸಿ, ವಿವಿಧೆಡೆ ಅಂದರೆ ಜೆ.ಎಸ್.ಎಸ್. ಹೈಸ್ಕೂಲ್, ಈಗಿನ ಜಿಲ್ಲಾ ಆಡಳಿತ ಭವನದ ಸಮೀಪ (ಕೈಲಾಸಂ ಬಯಲು ರಂಗ), ದೇಗುಲ ಮುದ್ರಣ ಆವರಣ (ರಂಗ ದೇಗುಲ), ರಿಪಬ್ಲಿಕ್ ಸಾಮಿಲ್ (ನಿಸರ್ಗ ರಂಗ) ಬಾಲಾರ ಪಟ್ಟಣ ಶಾಲಾ ಆವರಣ ಹೀಗೆ ಹಲವು ಕಡೆ ನಾಟಕ ಪ್ರದರ್ಶಿಸಿದೆ. ಈಗ ಸಾಮಾನ್ಯವಾಗಿ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಾಟಕ ಪ್ರದರ್ಶಿಸಿದೆ. ೨೦೦೭ರಲ್ಲಿ ಮೊಟ್ಟ ಮೊದಲ ಬಾರಿ ಸದಸ್ಯರು **'ಸದ್ಯಕ್ಕಿದು ಹುಚ್ಚರ ಸಂತೆ'** ನಾಟಕವನ್ನು ಈ ಸ್ಥಳದಲ್ಲಿ ಪ್ರದರ್ಶಿಸಲಾಯಿತು.

ಇಷ್ಟು ವರ್ಷಗಳಲ್ಲಿ ವೃತ್ತಿ ಪರತೆಯನ್ನು ಮೈಗೂಡಿಸಿಕೊಂಡಿದೆ.

### ಶಾಂತಲಾ ಕಲಾವಿದರು

| ಕ್ರ.ಸಂ. | ನಾಟಕ | ದಿನಾಂಕ | ಸ್ಥಳ | ನಿರ್ದೇಶಕ |
|---|---|---|---|---|
| ೦೧) | ಬದುಕ ಮನ್ನಿಸೊಪ್ರಭುವೆ<br>ಗಿಳಿಯ ಪಂಜರದೊಳಿಲ್ಲ | ೧೦.೧೦.೭೩<br>೧೦.೧೦.೭೩ | ಗುರುನಂಜಶೆಟ್ಟರ ಛತ್ರ | ಕೆ.ವೆಂಕಟರಾಜು<br>ಎನ್.ಚಂದ್ರಶೇಖರ |
| ೦೨) | ಮುಖಗಳು<br>ಪೋಲಿಕಿಟ್ಟಿ | ೦೩.೦೨.೭೪<br>೦೩.೦೨.೭೪ | ನಂದಿನಿಕಲಾಕ್ಷೇತ್ರ | ಚಂದ್ರಶೇಖರ<br>ಕೆ.ವಂಕಟರಾಜು |
| ೦೩) | ಗಂಡುಗೊಡಲಿ<br>ಎಲ್ಲರಂಥವನಲ್ಲ ನನಗಂಡ | ೧೫.೧೨.೮೦<br>೧೦.೧೦.೭೪ | ಮಂಡ್ಯ<br>ಗುರುನಂಜಶೆಟ್ಟರ ಛತ್ರ | ಎ.ಡಿ.ಸಿಲ್ವಾ<br>ಎನ್.ಚಂದ್ರಶೇಖರ |
| ೦೪) | ಯಮಳ ಪ್ರಶ್ನೆ | ೧೫.೦೯.೭೬ | ಸರ್ಕಾರಿ ಕಿರಿಯ ಕಾಲೇಜು | ಎನ್.ಚಂದ್ರಶೇಖರ |
| ೦೫) | ಹರಾಮ್‌ಲಾಲ್ | ೨೧.೦೮.೮೩ | ರೋಟರಿ ಭವನ ಹಾಗೂ ಚಾಮರಾಜೇಶ್ವರ ಉದ್ಯಾನವನ | ಕೆ.ವೆಂಕಟರಾಜು |
| ೦೬) | ಕುದುರೆಮೊತಿ | ೧೯೮೫ | ಸಂತ ಜೋಸೆಫರ ಶಾಲೆ ಚಾಮರಾಜನಗರ, ನಂಜನಗೂಡು ಮತ್ತು ನರಸೀಪುರ | ಕೆ.ವೆಂಕಟರಾಜು |
| ೦೭) | ಜೋಕುಮಾರಸ್ವಾಮಿ | ೦೬.೦೬.೮೬ | ಕುಮಾರೇಶ್ವರ ನಾಟ್ಯ ಸಂಘ ಥಿಯೇಟರ್ | ಉಷಾ ವೇಣು ಗೋಪಾಲ್ |
| ೦೮) | ಉದ್ಭವ | ೩೦.೧೧.೮೮ | ಜೆ.ಎಸ್.ಎಸ್. ಪ್ರೌಢಶಾಲೆ | ನಾ.ಶ್ರೀನಿವಾಸ್ |
| ೦೯) | ಪುಷ್ಪರಾಣಿ | ೧೯೯೦ ಆಗಸ್ಟ್ | ಬಾಲರ ಪಟ್ಟಣ | ವಿನೋದ್‌ಅಂಬೇಡ್ಕರ್ |

| | | | | |
|---|---|---|---|---|
| ೧೦) | ಮಾನಿಷಾದ | ೧೯೯೨ ಜೂನ್ | ಕಿ.ಫಾ.ಆ. ಶಾಲೆ ಸಂತೇಮರಹಳ್ಳಿ ಆಲೂರು | ಕೃಷ್ಣಮೂರ್ತಿಕವ್ವಾರ್ |
| ೧೧) | ಬಾಲೋತ್ಸವ ನಾಟಕೋತ್ಸವ | ೧೯೯೦ | ರಂಗದೇಗುಲ | ಪ್ರಮೋದ ಶಿಗ್ಗಾಂವ್ ಮಹಾವೀರ ಜೈನ್ |
| ೧೨) | ತದ್ರೂಪಿ | | ರಂಗದೇಗುಲ | ನಾ.ಶ್ರೀನಿವಾಸ್ |
| ೧೩) | ಕರಿಮಾಯಿ ಬೆಟ್ಟಕ್ಕೆ ಚಳಿಯಾದರೆ | ಮೇ ೧೯೯೨ | ನಿಸರ್ಗರಂಗ (ಮಾನಪ್ಪನವರ ರಿಪಬ್ಲಿಕ್ ಸಾಮಿಲ್) | ರಮೇಶ್‌ಪಂಡಿತ್ ಚಂದ್ರಶೇಖರಚಾರ್ ಹೆಗ್ಗೋಠಾರ |
| ೧೪) | ತಲೆಬಾಗದ ಜನ | ೧೯೯೮ | ನಿಸರ್ಗರಂಗ | ನಾ.ಶ್ರೀನಿವಾಸ್ |
| ೧೫) | ಅಳಿಯದೇವರು | ೧೯೯೭ | ಶಿಕ್ಷಕರ ಭವನ | ಗೋವಿಂದರಾಜಸ್ವಾಮಿ |
| ೧೬) | ಹೂ ಹುಡುಗಿ | ೨೦೦೦ | ರಂಗದೇಗುಲ | ಚಂದ್ರಶೇಖರಚಾರ್ ಹೆಗ್ಗೋಠಾರ |
| ೧೭) | ಗಿಳಿಯ ಪಂಜರ ದೊಳಿಲ್ಲ | ೨೦೦೦ | ಶಿಕ್ಷಕರ ಭವನ | ಬರ್ಟಿ ಒಲಿವೆರಾ |
| ೧೮) | ಪೋಲಿಕಿಟ್ಟಿ | ೨೦೦೦ | ರಂಗದೇಗುಲ | ಕೆ.ವೆಂಕಟರಾಜು |
| ೧೯) | ನೇಣಿನ ನೆರಳಲ್ಲೇ! | | ರೋಟರಿ ಭವನ ರಂಗದೇಗುಲ | ನಾ.ಶ್ರೀನಿವಾಸ್ |
| ೨೦) | ಗಗ್ಗಯ್ಯನಗಡಿಬಿಡಿ | | ರಂಗದೇಗುಲ | ಕೆ.ವೆಂಕಟರಾಜು |
| ೨೧) | ಅರಹಂತ | ೨೦೦೧ ಫೆಬ್ರವರಿ ೧೬ | ರಂಗದೇಗುಲ | ಪಿ.ಗಂಗಾಧರಸ್ವಾಮಿ |
| ೨೨) | ಸದ್ದಕ್ಕಿದು ಹುಚ್ಚರ ಸಂತೆ | ೨೦೦೭ | ಜೆ.ಹೆಚ್.ಪಟೇಲ್ ಸಭಾಂಗಣ | ಬಿ.ಎಸ್.ವಿನಯ್ |
| ೨೩) | ಧರ್ಮಾಕ್ರಸಿ | | ಹಳೆ ಸಿಂಡಿಕೇಟ್ ಬ್ಯಾಂಕ್ | ಬಿ.ಎಸ್.ವಿನಯ್ |
| ೨೪) | ಬಿದ್ದೂರಿನ ಬಿಗ್‌ಬೆನ್ | | 'ನೆಲೆ'ಚಾ.ನಗರ | ಸಂತೋಷ ಗುಡ್ಡಿಯಂಗಡಿ |
| ೨೫) | ಉದ್ಭವ | | ಜೆ.ಹೆಚ್.ಪಟೇಲ್ ಸಭಾಂಗಣ | ಬಿ.ಎಸ್.ವಿನಯ್ |
| ೨೬) | ಕ್ರಮ ವಿಕ್ರಮ | ೧೦.೧೦.೨೦೧೧ | ಜೆ.ಹೆಚ್.ಪಟೇಲ್ ಸಭಾಂಗಣ | ಬಿ.ಎಸ್.ವಿನಯ್ |
| ೨೭) | ಸೇವಂತಿ ಪ್ರಸಂಗ | | ಜೆ.ಹಚ್.ಪಟೇಲ್ ಸಭಾಂಗಣ | ಚಂದ್ರಶೇಖರಾಚಾರ್ |

## ಭಾಗವಹಿಸಿದ ನಟರುಗಳು

ಎನ್.ಚಂದ್ರಶೇಖರ್, ಎ.ಡಿ.ಸಿಲ್ವಾ, ಟಿ.ವಾಸನ್, ಆರ್.ಎಸ್. ಕುಮಾರಾರಾಧ್ಯ, ಶ್ರೀಪತಿ (ದುರ್ಗಾಭವನ್), ಕೆ.ಪಿ.ಶಿವಮೂರ್ತಿ, ರಾಮನಾಥ ಋಗ್ವೇದಿ, ಸಿ.ಆರ್.ಸುಂದರರಾಜ್, ಆರ್.ಪುಟ್ಟಮಲ್ಲಪ್ಪ, ಬಂಗಾರನಾಯ್ಕ, ಮಲ್ಲಿಕಾರ್ಜುನ (ಮಲ್ಲಪ್ಪ) ಕೆ.ವೆಂಕಟರಾಜು, ಕೆ.ರಾಧಾ, ಎಸ್.ಅನಂತಮೂರ್ತಿ, ಶ್ರೀನಿವಾಸರಂಗನ್, ರಾಮಸ್ವಾಮಿ, ರಾಘವೇಂದ್ರರಾವ್, ಶ್ರೀಕಂಠಸ್ವಾಮಿ, ಮಂಜುನಾಥ, ಜಿ.ಎಸ್.ಲಕ್ಷ್ಮಣಅಯ್ಯರ್, ವಿಜಯೇಂದ್ರರಾವ್, ಸುಧಾಮಣಿ, ಎನ್.ಬಾಲಸುಬ್ರಹ್ಮಣ್ಯ, ಸಿ.ವಿಮಹೇಶ್, ಸುನೀತ, ಶ್ರೀನಿವಾಸ (ಮೆಸ್), ಜೀಮಾರಳ್ಳಿ ಗುರುಸಿದ್ದಪ್ಪ, ಅಶೋಕ, ಸೈಮನ್ ಡಿ.ಸಿಲ್ವಾ, ಚಂದ್ರಶೇಖರ್ (ಮೈಸೂರು ಮಿನರಲ್ಸ್) ಸಿ.ವಿ.ನಾಗರಾಜಶಾಸ್ತ್ರಿ, ಪ್ರಕಾಶ್‌ಬೆಲ್ಲದ್, ಬರ್ಟಿಒಲಿವೇರಾ, ಅರ್ಚಿಬೋಲ್ಡ್ ಡಿ.ಸಿಲ್ವಾ, ರಾಮೇಗೌಡ, ಎನ್.ಶಂಕರ್, ಮಂಗಳಗೌರಿ, ದೇವಕುಮಾರ್, ಪಂಕಜಾ ರವಿಶಂಕರ್, ತೇಜಸ್ವಿನಿ, (ಮೈಸೂರು) ವೀಣಾ (ಮೈಸೂರು) ಎಲ್.ಸುರೇಶ, ಮಹೇಶ್ (ರಾಜಾರಾಂ) ಸುರೇಶ (ಬೆನಕ) ಡಿ.ಆನಂದಮೂರ್ತಿ, ಪ್ರಭುಸ್ವಾಮಿ, ವಿ.ಶ್ರೀನಿವಾಸ್ (ಚೀನಿ) ಡಿ.ವೇಣುಗೋಪಾಲ್, ಚಂದ್ರಶೇಖರಾಚಾರ್ ಹೆಗ್ಗೋಠಾರ, ಗು.ಮಹೇಶ್, ಮಹದೇವಸ್ವಾಮಿ ಉತ್ತುವಳ್ಳಿ, ಲಕ್ಷ್ಮಿನಾರಾಯಣ್, ಸಿ.ಆರ್.ವೆಂಕಟರಾಮು, ನಳಿನಿ, ಅಪೂರ್ವ ಡಿ. ಸಿಲ್ವಾ, ಎಸ್.ರಾಮಚಂದ್ರ, ನಾಗೇಶ್, ಅರಿಫ್, ಸೆಬಾಸ್ಟಿಯನ್, ಸೋಮಶೇಖರ ಬಿಸಲ್ವಾಡಿ, ಮಾರ್ಗರೇಟ್, ವಿಜಯಸಿಂಹ, ಗೋರಖನಾಥ್ ಜಾದವ್, ರವೀಂದ್ರ, ಚಿತ್ರಾ ವಿ., ಅಜಿತ್ ಕೆ., ಮೈತ್ರಿ ಡಿ ಸಿಲ್ವಾ, ಅಜಯ್‌ಸಿಂಗ್, ಆನಂದವರ್ಧನ್, ಭೀಮೇಶ, ನಯನ, (ರಿಪಬ್ಲಿಕ್ ಸಾಮಿಲ್) ರೂಪಶ್ರೀ, ಜಯಪ್ರಕಾಶ್, ಬಿ.ಸಿ.ರಾಜು, ಗೋವಿಂದರಾಜಸ್ವಾಮಿ, ನಂಜುಂಡಸ್ವಾಮಿ, ಅ.ಅನಂತ್, ಅನಂತ್, (ವಿ.ಎಚ್.ಪಿ.ಶಾಲೆ) ಬನಶಂಕರ ಆರಾಧ್ಯ, ಮಲ್ಲಣ್ಣ, ರಾಜ್‌ಕುಮಾರ್ ಭಾವಸಾರ್, ಗಿರಿರಾಜ್, ನಟರಾಜ್ ಹರದನಹಳ್ಳಿ, ನಾಗಮಲ್ಲಪ್ಪ, ರಾಜಪ್ಪ, (ಚೇತನ ಕಲಾ ಬಳಗ), ರಂಗನಾಥ ವೈ.ಹಲ್ಕಿ, ಟಿ.ಜಿ.ಶ್ರೀನಿವಾಸ್, ಆಸ್ಮಾಬಾನು (ಮೂಡಬಿದರ) ಶೀಲಾ (ಗುಲಬರ್ಗ) ಫಾಲಲೋಚನ ಆರಾಧ್ಯ, ನಾಗಮಲ್ಲಪ್ಪ (ಕೃಷಿ) ಸದಾನಂದ, ಶೈಲಾ ಸದಾನಂದ, ಅರ್ನೆಸ್ ಡಿ. ಸಿಲ್ವಾ, ಬೀನಾ ಒಲಿವೇರಾ, ಲಯನ್ ಚೇತನ್ (ಅಶ್ವಿನಿ ಜ್ಯವೆಲರ್ಸ್), ಕೌಶಿಕ್, ಮಂಜುನಾಥ್, ನಿರ್ಮಲಾ, ಲೋಕೇಶ್, ಕಲ್ಕುಂಡ, ವೆಂಕಟರಾಜೇಶ್, ಶಂಕರ್‌ಬಾಬು (ಸತ್ಯ) ರಾಜೇಶ್ (ಹಿಂದೂ ಪತ್ರಿಕೆ) ಪದ್ಮಜಾ ಶಂಕರ್, ಆರ್.ದಿಲೀಪ್‌ಕುಮಾರ್, ನಾಗರಾಜು, ಎಚ್.ಬಿ.ವಿಶ್ವಕುಮಾರ್, ಮಧುಸೂದನ್, ಗಿರೀಶ್ (ಕಾವುದವಾಡಿ) ನಾಗರಾಜು (ನೇಮಿನಾಥ) ಮಧುಕುಮಾರ್, ಎಂ.ಚಂದ್ರಶೇಖರ್, ರಾಜಶೇಖರಮೂರ್ತಿ (ಹಂಸ) ಆರ್.ಎ.ನಾಗರಾಜು, ಸಿ.ಆರ್.ಶ್ರೀನಿವಾಸನ್, ಮಹದೇವಸ್ವಾಮಿ

(ರಾಮಸಮುದ್ರ) ಬಿ.ಎಸ್.ವಿನಯ್, ಪರಶಿವಮೂರ್ತಿ, ಮಂಜುನಾಥ ಕಾಚಕ್ಕಿ, ಹೇಮಾ ಹೆಬ್ಬಾರ್, ರಾಘವೇಂದ್ರ, ಪವನ್, ಅಕ್ಬರ್, ಉಲ್ಲಾಸ್, ಸುರೇಶ್ ರಾಮಸಮುದ್ರ, ಶಿವರಾಮು ವಕೀಲರು, ಮಹೇಶ್, ಶಿವಪುರ, ಸುಮಮೂರ್ತಿ, ಸಂಜನಾಶಂಕರ್, ಡಾ॥ ಗುರುಕಿರಣ್, ನಾಗಮಲ್ಲಪ್ಪ, ಸಿದ್ದಮಲ್ಲಪ್ಪ, ರೂಪಾ, ಶಿಲ್ಪ, ಮಸಗಾಪುರ, ಗೌತಮ, ತೋಂಟಾರಾಧ್ಯ, ಪ್ರತೀಪ್‌ಕುಮಾರ್, ಸನತ್ ಶ್ಯಾನುಭಾಗ್, ಹೃತಿಕ್, ಗುಪ್ತ, ರಾಘವೇಂದ್ರ, (ಕೀಬೋರ್ಡ್) ಮೋದರ್ಶನ್, ಶಿವುಕುಮಾರ್, ಕೀರ್ತಿಕುಮಾರ್, ಶ್ರೇಯಸ್, ನಾಗಾರ್ಜುನ, ಈ.ವಿನಯ್, ಪ್ರದೀಪ್, ಪಿ.ಮಹೇಶ್, ಶಿವಮೂರ್ತಿ, ಜನಾರ್ಧನ, ರಾಜು, ಹೆಚ್.ಎಂ.ಅಜಯ್. ಅರುಣ್ ಪಾಟೀಲ, ಸುರೇಶ್ (ಬೆನಕ), ಮಂಜು.

ಇದಲ್ಲದೆ ೧೯೮೮, ೧೯೮೯, ೧೯೯೦, ೧೯೯೧, ೧೯೯೪, ೨೦೦೬ ರಲ್ಲಿ ೬ ಬಾರಿ **ನೀನಾಸಂ ತಿರುಗಾಟ.**೨ ಬಾರಿ **ಮರು ತಿರುಗಾಟ**೨ ಬಾರಿ **ಪ್ರಯಾಣ** ನೀನಾಸಮ್‌ನ **'ನಾನು'** ಏಕ ವ್ಯಕ್ತಿ ಪ್ರದರ್ಶನ, **'ಪ್ರೊಥಿಯೂ'** ತಿಪಟೂರು ಎರಡು ಬಾರಿ ಪ್ರದರ್ಶನಗಳು, ಒಮ್ಮೆ**'ಚಿಣ್ಣ ಬಣ್ಣ', ಜನಮನದಾಟ, ಆಟ–ಮಾಟ,** ರಂಗಾಯಣದ ಪ್ರದರ್ಶನಗಳು.ನೀನಾಸಮ್ ನ **'ಶಾಲಾ ರಂಗ' ಯೋಜನೆಯಲ್ಲಿ ಎರಡು ಬಾರಿ** ಮಕ್ಕಳ **ರಂಗ ತರಬೇತಿ ಶಿಬಿರಗಳ ಆಯೋಜನೆ**,ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ತಂಡದ ೬ ಮಂದಿ ಹಾಗೂ ಸಾಣೇಹಳ್ಳಿಯ **ಶಿವಕುಮಾರ ರಂಗಶಿಕ್ಷಣ ಕೇಂದ್ರದಲ್ಲಿ** ಇಬ್ಬರು ತರಬೇತಿ ಹೊಂದಿರುತ್ತಾರೆ.ಕರ್ನಾಟಕ ಸರಕಾರ **'ಜನಾಧಿಕಾರ ಜನಾಂದೋಲನ ಜಾಥಾ'** ಯೋಜನೆಯಲ್ಲಿ ಯಳಂದೂರು ತಾಲ್ಲೂಕಿನಾದ್ಯಂತ ೨೨ ಗ್ರಾಮಗಳಲ್ಲಿ ಪ್ರದರ್ಶನ ನೀಡಲಾಗಿದೆ. ಈ ತಂಡದ ಕಲಾವಿದರು ರಾಷ್ಟ್ರಮಟ್ಟದಲ್ಲಿ ನಡೆಯುವ ಯುವಜನೋತ್ಸವದಲ್ಲಿ ಮೂರು ಬಾರಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ.

## ರಂಗ ತರಂಗ (೧೯೯೩)

೧೩.೦೨.೧೯೯೩ ರಲ್ಲಿ ಈ ತಂಡ ಅಸ್ತಿತ್ವಕ್ಕೆ ಬಂದಿತು. ಶ್ರೀ ಸೋಮಶೇಖರ ಬಿಸಲ್ವಾಡಿ, ನಾಗೇಶ್ ಸೊಸ್ಲೆ, ಅಂಬಳೆ ಸಿದ್ದರಾಜು ಇವರುಗಳು ಈ ಸಂಸ್ಥೆಯ ಹಿಂದಿನ ರೂವಾರಿಗಳು. ಈ ಸಂಸ್ಥೆಯ ಆರಂಭದಲ್ಲಿ ಸಿ.ಎಂ.ನರಸಿಂಹಮೂರ್ತಿಯವರು ಇದ್ದು, ಇದೀಗ 'ರಂಗವಾಹಿನಿ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಅದೇ ರೀತಿ ಶ್ರೀ ರಾಜಪ್ಪ ಈ ಸಂಸ್ಥೆಯಲ್ಲಿದ್ದು, ಚೇತನಾ ಬಳಗ ಎಂಬ ಸಂಸ್ಥೆ ಸ್ಥಾಪಿಸಿ ಎರಡೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಈಗಲೂ ಈ ತಂಡ ತುಂಬ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಈವರೆಗೆ ಈ ತಂಡ **ಕೆರೆಗೆ ಹಾರ, ಹುಡುಕಾಟ, ಹೆಬ್ಬೆರಳು, ಇದಿಮುಂಡೆ ಮಗಳು, ತ್ಯಾಗಿ, ಅಲ್ಲೆ ಇದ್ದವರು, ಮಾದಾರಿಮಾದಯ್ಯ, ಮಹಿಮಾಪುರ, ತುಘಲಕ್, ಶೂದ್ರತಪಸ್ವಿ, ನಮ್ಮ**

**ನಮ್ಮೊಳಗೆ, ನೆಲದ ಜೋಗುಳ ಮತ್ತು ಸಂಕ್ರಮಣದ ಅಲೆಗಳು** ನಾಟಕಗಳನ್ನು ಮಾಡಿಸಿದೆ.

ಖ್ಯಾತ ನಿರ್ದೇಶಕ ಹೆಚ್.ಎಸ್.ಉಮೇಶ್ ರವರು ನಿರ್ದೇಶಿಸಿದ ನಾಟಕಗಳ ನಾಟಕೋತ್ಸವ (೭. ೦೩. ೨೦೦೪) ಗಡಿನಾಡ ನಾಟಕೋತ್ಸವ ಇತ್ಯಾದಿಗಳನ್ನು ನಡೆಸಿದೆ. ಶ್ರೀ ಹೆಚ್.ಎಸ್. ಉಮೇಶ್ ಅವರಿಗೆ ಒಂದು ಸುಂದರವಾದ ಕಿರಿದಾದ ಅಭಿನಂದನಾ ಗ್ರಂಥ ಹೊರತಂದಿದೆ. ಅಲ್ಲದೆ ಉಮೇಶ್ **ಮಹಿಮಾಪುರ, ತುಘಲಖ್** ನಾಟಕವನ್ನು ನಿರ್ದೇಶಿಸಿದ್ದಾರೆ.

| | | | | | |
|---|---|---|---|---|---|
| ೧. | ಕೆರೆಗೆ ಹಾರ | ೧೩.೦೨.೯೩. | ಸೋಮಶೇಖರ ಬಿಸಲ್ವಾಡಿ ಉದ್ಘಾಟನೆ | ರಥದ ಬೀದಿ, ಚಾಮರಾಜನಗರ | ಸಿದ್ದರಾಜು ಅಂಬಳೆ,<br>ಮಹಾಲಿಂಗಗಿರಿ,<br>ಚಿದಾನಂದ<br>ಮಾದಾಪುರ,<br>ಎಲ್.ರವೀಂದ್ರ,<br>ಎಸ್.ನಟರಾಜು,<br>ಸಿ.ಕೆ.ಜಯಲಕ್ಷ್ಮಿ,<br>ಸಿ.ಕೆ.ಶ್ರೀಲಕ್ಷ್ಮಿ<br>ಜಯಮಾಲಾ,<br>ಕೃಪಾನಿಧಿ,<br>ಎಂ.ಮಾದನಾಯ್ಕ,<br>ಎಲ್.ಸುರೇಶ್,<br>ಯಮುನಾ,<br>ಸುಜಾತ,ಕೆಲ್ಲಂಬಳ್ಳಿ<br>ರಾಮಣ್ಣ,ಮಲ್ಲಣ್ಣ,<br>ರಂಗನಾಥ,<br>ಮೈ.ಹಳ್ಳಿ |
| ೨. | ಹುಡುಗಾಟ | ೨೨.೧.೯೩. | ಸೋಮಶೇಖರ ಬಿಸಲ್ವಾಡಿ ಉದ್ಘಾಟನೆ | ರವೀಂದ್ರಕಲಾಕ್ಷೇತ್ರ ಮೂಡ್ಲುಪುರ | ಎಲ್.ರವೀಂದ್ರ,<br>ಎಸ್.ನಟರಾಜು,<br>ಸಿ.ಪಿ.ಪೂರ್ವ,<br>ಕೆ.ಪಿ.ವಿಜಯಕುಮಾರ್,<br>ದಿನೇಶ್,<br>ಎಲ್.ಮಾದನಾಯ್ಕ,<br>ಎಸ್.ನಟರಾಜು,<br>ಸಿ.ಕೆ.ಶ್ರೀಲಕ್ಷ್ಮಿ<br>ರವಿಚಂದ್ರಪ್ರಸಾದ್ |
| ೩. | ಹೆಬ್ಬೆರಳು | ೨೨.೧.೯೩. | | | ಸಿ.ಎಂ.ನರಸಿಂಹಮೂರ್ತಿ<br>ಹರದನಹಳ್ಳಿ<br>ಮಹಾಲಿಂಗಗಿರಿ, |

| | | | | |
|---|---|---|---|---|
| | | | | ಉಮೇಶ್.<br>ಎಂ.ಮಾದನಾಯ್ಕ,<br>ರಂಗನಾಥ ವೈ.ಹಲ್ಕಿ,<br>ರವಿಚಂದ್ರಪ್ರಸಾದ್. |
| ೪. ಇದಿಮುಂಡೆಮಗಳು | ೦೨.೧೦.೯೩ | ಸೋಮಶೇಖರ ಬಿಸಲ್ವಾಡಿ | ನಿಸರ್ಗರಂಗ ಚಾಮರಾಜನಗರ | ನಾಗೇಶ್‌ಸೊಸ್ಲೆ,<br>ಜಯಮಾಲ,<br>ನಾಗಮಣಿ,<br>ಮಂಜೇಶ್‌ಕುಮಾರ್,<br>ಕೃಪಾನಿಧಿ,ಎಲ್.ಸುರೇಶ್<br>ಎಂ.ಮಾದನಾಯ್ಕ,<br>ರಂಗನಾಥ ವೈ.ಹಲ್ಕಿ,<br>ರಾಜಮ್ಮ,ಎಂ.ನವೀನ್,<br>ಎಂ.ಕಾವ್ಯ,ಎಲ್.ರವೀಂದ್ರ,<br>ಎಸ್.ರಾಮಚಂದ್ರ,<br>ಎಸ್.ನಟರಾಜು |
| ೫. ತ್ಯಾಗಿ | ೧೧.೦೯.೯೪ | ಸೋಮಶೇಖರ ಬಿಸಲ್ವಾಡಿ, | ಚಾಮರಾಜನಗರ | ನಾಗಲಕ್ಷ್ಮಿ,ಪುಷ್ಪ,<br>ಮಹಾದೇವಯ್ಯ,<br>ರವೀಂದ್ರ, ಎಸ್.ನಟರಾಜ್ |
| ೬. ಅಲ್ಲಿಇದ್ದವರು | ೧೨.೦೩.೯೪ | ಸೋಮಶೇಖರ ಬಿಸಲ್ವಾಡಿ | ರೋಟರಿ ಭವನ ಚಾಮರಾಜನಗರ | ನಾಗೇಶ್‌ಸೊಸ್ಲೆ,ರಮೇಶ್,<br>ಉಮೇಶ್,<br>ಎಂ.ಎನ್.ಕೃಷ್ಣಸ್ವಾಮಿ,<br>ಬಂಗಾರಸ್ವಾಮಿ,<br>ಮಹಾಲಿಂಗಸ್ವಾಮಿಗಿರ್ಗಿ. |
| ೭. ಮದಾರಿಮಾದಯ್ಯ | ೧೧.೦೪.೯೮ | ಸೋಮಶೇಖರ ಬಿಸಲ್ವಾಡಿ | ನಿಸರ್ಗರಂಗ | ಬಿ.ಬಸವರಾಜು,<br>ಬರ್ಟಿಒಲಿವೆರಾ,<br>ಸರಸ್ವತಿಹೊನ್ನಪ್ಪ<br>ಸಿ.ಎಂ.ನರಸಿಂಹಮೂರ್ತಿ,<br>ಸೋಮಸುಂದರ್<br>ಸಿ.ಕೆ.ಜಯಲಕ್ಷ್ಮಿ,<br>ಸಿ.ಕೆ.ಶ್ರೀಲಕ್ಷ್ಮಿ,ಶಿವು<br>ಸೂರಾಪುರ,<br>ಎಸ್.ನಟರಾಜು,<br>ಎಲ್.ರವೀಂದ್ರ,<br>ಮಾದನಾಯ್ಕ,<br>ರಂಗನಾಥ ವೈ.ಹಲ್ಕಿ,<br>ಮಹಾಲಿಂಗಗಿರ್ಗಿ, |

| | | | | |
|---|---|---|---|---|
| | | | | ನಾಗೇಶು<br>ರವಿಚಂದ್ರಪ್ರಸಾದ್,<br>ರಂಗಸ್ವಾಮಿ,ಅಂಬಳೆ<br>ಸಿದ್ದರಾಜು,ಶಿವಣ್ಣ,ಶ್ರೀಧರ,<br>ರಾಮಣ್ಣ ಕೆಲ್ಲಂಬಳ್ಳಿ, |
| ೮. ಹೆಬ್ಬೆಟ್ಟು- | | ಸೋಮಶೇಖರ ಬಿಸಲ್ವಾಡಿ | ಉಮ್ಮತ್ತೂರು | ಉಮ್ಮತ್ತೂರುಬಸವರಾಜು,<br>ನಾಗಮಣಿ,ಶಿವಣ್ಣ,<br>ಬಸವರಾಜು,<br>ಹ.ಕಾ.ಸಿದ್ದರಾಜು,<br>ಎಸ್.ನಟರಾಜ್,<br>ಎಲ್.ರವೀಂದ್ರ, |
| ೯. ಸಂಕ್ರಮಣದಅಲೆಗಳು | ೨೭.೧೦.೯೭ | ಸೋಮಶೇಖರ | ಶಿಕ್ಷಕರ ಭವನ,<br>ಚಾಮರಾಜನಗರ | ಅಂಬಳೆಸಿದ್ದರಾಜು,<br>ಬಂಗಾರಸ್ವಾಮಿ,<br>ಸಿ.ಕೆ.ಜಯಲಕ್ಷ್ಮಿ<br>ಸಿ.ಕೆ.ಲಕ್ಷ್ಮಿ,<br>ಎಸ್.ನಟರಾಜು,<br>ಎಸ್.ರವೀಂದ್ರ, ರಾಮಣ್ಣ,<br>ನವೋದಯ ಶಾಲೆ<br>ಮಹಾಲಿಂಗಗಿರಿ,<br>ಸೋಮಸುಂದರ್,<br>ಎಂ.ಎನ್.ಕೃಷ್ಣಮೂರ್ತಿ |
| ೧೦. ಮಹಿಮಾಪುರ | ೯.೬.೨೦೦ | ಹೆಚ್.ಎಸ್.ಉಮೇಶ್ | ರಂಗ ದೇಗುಲ<br>ಚಾಮರಾಜನಗರ | ಎಸ್.ನಟರಾಜು,<br>ಎಲ್.ರವೀಂದ್ರ, ಮಲ್ಲಣ್ಣ,<br>ನಾಗೇಶು,<br>ಎಂ.ಮಾದನಾಯ್ಕ,<br>ಶಿವಕುಮಾರ್ ಕಣ್ಣೇಗಾಲ,<br>ಶಿವು ಸೂರಾಪುರ,<br>ಅಂಬಳೆಸಿದ್ದರಾಜು,<br>ಹಾ.ಕ.ಸಿದ್ದರಾಜು<br>ಮಹೇಶ್, ಕಲೆ ನಟರಾಜು,<br>ನಿರ್ಮಲ, ಮಾದೇಶ್,<br>ಎಂ.ಮಹೇಶ್, ರಾಣಿ |
| ೧೧. ತುಗಲಕ್ | ೧೭.೬.೨೦೦೦<br>೧೮.೬.೨೦೦೦<br>(೩. ಪ್ರದರ್ಶನಗಳು) | ಹೆಚ್.ಎಸ್.ಉಮೇಶ್ | ರಂಗ ದೇಗುಲ<br>ಜಗನ್ಮೋಹನ<br>ಅರಮನೆ | ಎಸ್.ನಟರಾಜು,<br>ಸಿ.ಕೆ.ಶ್ರೀಲಕ್ಷ್ಮಿ,<br>ಶಿವಕುಮಾರ್ಕಣ್ಣೇಗಾಲ<br>ಅಂಬಳೆಸಿದ್ದರಾಜು,<br>ಕಲೆನಟರಾಜು,<br>ಬಿ.ಸಿ.ರಾಜು,<br>ಮಲ್ಲಣ್ಣ, |

| | | | | |
|---|---|---|---|---|
| | | | | ಮಹಾಲಿಂಗಗಿರ್ಗಿ, ಶಿವು<br>ಸೂರಾಪುರ,<br>ನಾಗೇಶು, ಮಹೇಶ್,<br>ರಾಮಣ್ಣ ಕೆಲ್ಲಂಬಳ್ಳಿ,<br>ಎಲ್.ರವೀಂದ್ರ,<br>ಎಂ.ಮಾದನಾಯ್ಕ,<br>ನಿರ್ಮಲ,<br>ಮಹೇಶ್,<br>ರಾಜಮೂರ್ತಿ,ರಾಮಣ್ಣ<br>ವಿ.ಛತ್ರ, |
| ೧೨. ನಮ್ಮನಮ್ಮೊಳಗೆ | ೨.೬.೨೦೦೨ | ನಾಗೇಶ್ ಸೊಸ್ಲೆ | ರಂಗ ದೇಗುಲ<br>ಜಗನ್ಮೋಹನ<br>ಅರಮನೆ | ಶಂಕರಬಾಬು, ರಾಜು,<br>ಬಿ.ರಾಜೇಶ್, ನಾಗೇಶು,<br>ಸುಜಾತಾ,ಮಾದನಾಯ್ಕ,<br>ಕಲೆ ನಟರಾಜು,<br>ಚಂದ್ರಶೇಖರ್, ಅಜಿತ್,<br>ಮಹೇಶ್‌ಕುಮಾರ್,<br>ಸುರೇಂದ್ರ, ಮಲ್ಲಣ್ಣ,<br>ರಾಮಣ್ಣ ಕೆಲ್ಲಂಬಳ್ಳಿ. |
| ೧೩. ಶೂದ್ರತಪಸ್ವಿ | | ಕೆ.ವೆಂಕಟರಾಜು | ದೇವಾಲಯದ<br>ಮುಂಭಾಗ,ಸುರೇಂದ್ರ,<br>ಚಾಮರಾಜನಗರ. | ಮಂಜುನಾಥ ಕಾಚಕ್ಕಿ,<br>ಡಿ.ಸಿ.ಸುರೇಂದ್ರ, ಕಲೆ<br>ಕಲೆ ನಟರಾಜು, ಸುಜಾತ,<br>ವಿ.ಚಿತ್ರ,<br>ಹೆಚ್.ಎಂ.ಮಹೇಶ್‌ಕುಮಾರ್,<br>ಆಶಾ, ರಾಜು, ರಾಜಪ್ಪ,<br>ಮಲ್ಲಣ್ಣ |
| ೧೪. ನೆಲದ ಜೋಗುಳ | ೮.೨.೨೦೦೫<br>೧೦.೨.೨೦೦೫<br>೨೯.೯.೨೦೦೬ | ಸೋಮಶೇಖರ<br>ಬಿಸಲ್ವಾಡಿ | ಚಾಮರಾಜನಗರ | ಸುಜಾತ,<br>ಮಹಾಲಿಂಗಗಿರ್ಗಿ,<br>ಬಿ.ರಾಜಪ್ಪ,ಕಲೆನಟರಾಜು,<br>ಡಿ.ಸಿ.ಸುರೇಂದ್ರ,<br>ಹೆಚ್.ಎಂ.ಮಹೇಶ್‌ಕುಮಾರ್,<br>ಮಂಜುನಾಥಕಾಚಕ್ಕಿ,<br>ಡಿ.ಪಿ.ರಾಜು,<br>ಮಹಾದೇವ<br>ಯಡಿಯೂರು, ಮಲ್ಲಣ್ಣ. |
| ೧೫. ಏಕಲವ್ಯ | ೬.೬.೨೦೦೫ | ಸೋಮಶೇಖರ<br>ಬಿಸಲ್ವಾಡಿ | ಚಾಮರಾಜನಗರ | ನಾಗೇಶ್‌ಸೊಸ್ಲೆ,<br>ಶಿವಕುಮಾರ್<br>ಕೆಂಪನಪುರ, |

ಕಲೆ ನಟರಾಜ್, ಸುಜಾತ,
ಮಹೇಶ್. ಶಿವಕುಮಾರ್
ಕಣ್ಣೇಗಾಲ, ರಾಮಣ್ಣ
ಕೆಲ್ಲಂಬಳ್ಳಿ, ಮಹದೇವಪ್ಪ
ಯಡಿಯೂರು, ಮಲ್ಲಣ್ಣ,
ರಾಜು, ಪರಶಿವಮೂರ್ತಿ,
ನಂಜುಂಡಸ್ವಾಮಿ,
ಪ್ರಕಾಶ್,
ಮಹೇಶ್‌ಕುಮಾರ್.

೧೯೯೫ರಲ್ಲಿ ನಾಟಕೋತ್ಸವ ೨೩, ೨೭, ೨೮-೧೦-೧೯೯೭ ಗಡಿನಾಡ ನಾಟಕೋತ್ಸವ (೩ ನಾಟಕ), ೨೭, ೨೮, ೨೯-೦೪-೨೦೦೧ ಹೆಚ್.ಎನ್. ಉಮೇಶ್ ನಿರ್ದೇಶನದ ನಾಟಕಗಳ ನಾಟಕೋತ್ಸವ, ೭-೮-೨೦೦೪ ದಲಿತ ನಾಟಕೋತ್ಸವ ವಿಚಾರ ಸಂಕಿರಣ, (೩ನಾಟಕಗಳು) ಗಳನ್ನು ಆಯೋಜಿಸಿದೆ. ಇದಲ್ಲದೆ ಬಿದಿ ನಾಟಕಗಳನ್ನು ಪ್ರದರ್ಶಿಸಿದೆ. (ಕಳೆದ ವರ್ಷದಿಂದ, ೧೮೧೫ ಪ್ರದರ್ಶನ)

## ರಂಗವಾಹಿನಿ

ಚಾಮರಾಜನಗರದಲ್ಲಿ ರಂಗಚಟುವಟಿಕೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಹವ್ಯಾಸಿ ಸಂಸ್ಥೆ. ಇದು ೧೯೯೯ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸಿ.ಎಂ.ನರಸಿಂಹಮೂರ್ತಿ ಈ ತಂಡದ ಮುಖ್ಯಸ್ಥರಾಗಿದ್ದಾರೆ. ಇದಕ್ಕೆ ಮುಂಚೆ ಇವರು ಇಲಿಯ ಇನ್ನೊಂದು ತಂಡವಾದ 'ರಂಗತರಂಗ' ಸಂಸ್ಥೆಯಲ್ಲಿ ತೊಡಗಿಸಿಕೊಂಡಿದ್ದು, ಇದರ ಪದಾಧಿಕಾರಿಗಳೂ ಆಗಿದ್ದರು.

ಈವರೆವಿಗೆ, ನಾಲ್ಕು ರಂಗ ನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸಿದ್ದಾರೆ.

೧. **ಗೊರು-ಗೊರಕ-ಗೊರುಕನ**

೨. **ಪುಟ್ಟಮಾದ**

೩. **ಪೋಲಿಕಿಟ್ಟಿ**

೪. **ಮಂಟೇಸ್ವಾಮಿ ಕಥಾಪ್ರಸಂಗ**

ಮೊದಲೆರಡು ನಾಟಕ, ಕರ್ನಾಟಕ ನಾಟಕ ಅಕಾಡೆಮಿಯ ಸಹಕಾರದಿಂದ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನರಿಗಾಗಿ ನಡೆಸಿದ ಕಾರ್ಯಾಗಾರದಲ್ಲಿ ತಯಾರಾದ ನಾಟಕ. **'ಪೋಲಿಕಿಟ್ಟಿ'** - ಶಂಕರನಾಗ್ ಅವರ ಮೊದಲ ಪುಣ್ಯತಿಥಿಯ ಅಂಗವಾಗಿ ರಂಗಶಂಕರದ ನೆರವಿನಿಂದ ನಿರ್ಮಿಸಿದ ನಾಟಕ. **'ಮಂಟೇಸ್ವಾಮಿ ಕಥಾ ಪ್ರಸಂಗ'** ಬೆಂಗಳೂರಿನ ಆರ್.ಆರ್.ಸಿ. ಅನುದಾನದಲ್ಲಿ ನಡೆಸಿದ ಕಾರ್ಯಾಗಾರದಲ್ಲಿ ಸಿದ್ಧವಾದ ನಾಟಕ.

ಇದಲ್ಲದೇ ಚಾಮರಾಜನಗರ ಜಿಲ್ಲೆಯಾದ್ಯಂತ ವಿವಿಧ ಅಭಿವೃದ್ಧಿ ಇಲಾಖೆಗಳಿಗಾಗಿ ಬೀದಿ ನಾಟಕಗಳನ್ನು ಮಾಡಿದ್ದಾರೆ. ಈಗಲೂ ಮಾಡುತ್ತಿದ್ದಾರೆ.ಮೈಸೂರಿನ ಅಬ್ದುಲ್‌ನಜೀರ್‌ಸಾಬ್ ಗ್ರಾಮೀಣ ತರಬೇತಿ ಸಂಸ್ಥೆ ೨೦೦೫ ರಲ್ಲಿ ಹಮ್ಮಿಕೊಂಡಿದ್ದ **'ಜನಾಧಿಕಾರ ಜಾಥಾ'** ದ ಅಂಗವಾಗಿ ಗುಂಡ್ಲುಪೇಟೆ ತಾಲ್ಲೂಕಿನ ಸುಮಾರು ೭೦ ಗ್ರಾಮಗಳಲ್ಲಿ ನಿರಂತರವಾಗಿ ಬೀದಿ ನಾಟಕ ಮಾಡಿದ್ದಾರೆ.

ಇದಲ್ಲದೇ ಈ ಹತ್ತು ವರ್ಷಗಳಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಿಗಾಗಿ ಬೀದಿ ನಾಟಕಗಳನ್ನು ಜಿಲ್ಲೆಯ ಎಲ್ಲ ಕಡೆ ನಡೆಸಿದೆ. ರಂಗ ಚಟುವಟಿಕೆಗಳ ಜೊತೆಗೆ ಸುಗಮ ಸಂಗೀತ, ಜಾನಪದ ಕಾರ್ಯಕ್ರಮಗಳ ಜೊತೆ ಇದು ತನ್ನನ್ನು ಗುರುತಿಸಿ ಕೊಂಡಿದೆ. ಶಿವ ಸಂಚಾರ ಸಾಣೇಹಳ್ಳಿ, ನಟನ ಮೈಸೂರು ಈ ತಂಡದ ನಾಟಕಗಳನ್ನು ಚಾಮರಾಜನಗರದಲ್ಲಿ ವ್ಯವಸ್ಥೆ ಮಾಡಿ ಪ್ರಾಯೋಜಿಸಿದ್ದಾರೆ.

| | | | ಪ್ರದರ್ಶನದ ವಿವರ | | | |
|---|---|---|---|---|---|---|
| ಕ್ರ.ಸಂ. | ನಾಟಕ | ದಿನಾಂಕ | ಎಲ್ಲಿ | ರಚನೆ | ನಿರ್ದೇಶನ | ಷರಾ |
| ೧ | ಪುಟ್ಟಮಾದ | ೩೦.೦೩.೧೯೯೯ | ರಂಗದೇಗುಲ ಚಾಮರಾಜನಗರ | ತುಮಕೂರು ನಂಜುಂಡಸ್ವಾಮಿ | ಸುಬ್ರಹ್ಮಣ್ಯ | ನಾಟಕ ಅಕಾಡೆಮಿಯು ನಡೆಸಿದ ತರಬೇತಿಯ ನಾಟಕ ಪುಸ್ತಕವಾಗಿ ಹೊರಬಂದಿದೆ. ಬೆಂಗಳೂರಲ್ಲಿ ಪ್ರದರ್ಶಿಸಿದೆ |
| ೨ | ಗೊರು–ಗೊರುಕ–ಗೊರುಕನ | ೩೧.೦೩.೧೯೯೯ | ಬಿಳಿಗಿರಿರಂಗನ ಬೆಟ್ಟ ಬೆಂಗಳೂರು | ಗೋವಿಂದರಾಜ ಸ್ವಾಮಿ | ಗೋವಿಂದರಾಜ ಸ್ವಾಮಿ | ಬುಡಕಟ್ಟು ಜನರ ಕಾರ್ಯಾಗಾರದಲ್ಲಿ ರಚಿಸಿ,ನಿರ್ದೇಶಿಸಿದ ನಾಟಕ, ಪುಸ್ತಕ ಹೊರಬಂದಿದೆ. |
| ೩ | ಪೋಲಿಕಿಟ್ಟಿ | | ರಂಗದೇಗುಲ ಚಾಮರಾಜನಗರ | ಕೈಲಾಸಮ್ | ಕೆ.ವೆಂಕಟರಾಜು | ರಂಗಶಂಕರದ ನೆರವಿನಲ್ಲಿ ಶಂಕರನಾಗ್ ಪುಣ್ಯತಿಥಿಗಾಗಿ ಆಡಿದ ನಾಟಕ |
| ೪ | ಮಂಟೇಸ್ವಾಮಿ | ೨೬.೨.೨೦೧೦ | ಜಿ.ವಿ.ಎಸ್.ರೈಸ್ ಮಿಲ್ ಆವರಣ, ಚಾಮರಾಜನಗರ | ಡಾ॥ಹೆಚ್.ಎಸ್. ಶಿವಪ್ರಕಾಶ | ಮಾಲತೇಶ ಬಡಿಗೇರ | ಆರ್.ಆರ್.ಸಿ.ನೆರವು, ಈವರೆಗೆ ೩೦ ಪ್ರದರ್ಶನ ಕಂಡಿದೆ. |

## ಸಾಂಸ್ಕೃತಿಕ ಕಲಾ ಸಂಘ (ರಿ) ಗುಂಡ್ಲುಪೇಟೆ

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣದಲ್ಲಿ ಸಕ್ರಿಯವಾಗಿರುವ ರಂಗ ಸಂಘಟನೆ. ನವೆಂಬರ್ ೧೯೮೦ರಲ್ಲಿ ಈ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ. ಗುಂಡ್ಲುಪೇಟೆ, ಆಲತ್ತೂರು, ಕಬ್ಬಹಳ್ಳಿ, ಹಂಗಳ ಗಳಲ್ಲಿ ಇವರು ನಾಟಕ ಪ್ರದರ್ಶಿಸಿದ್ದಾರೆ. ಗುಂಡ್ಲುಪೇಟೆಯ ವಿವಿಧ ಬಡಾವಣೆಗಳಲ್ಲಿ ನಾಟಕ ಮಾಡಿದ ಖ್ಯಾತಿ ಇವರಿಗಿದೆ. ಗುಂಡ್ಲುಪೇಟೆಯ ಶ್ರೀ ಜವರೇಗೌಡರು ಬರೆದಿರುವ ಸುಮಾರು ೩೨ ನಾಟಕಗಳನ್ನು ಅಭಿನಯಿಸಿದ್ದಾರೆ. ಇದರ ಜತೆಗೆ, ಎನ್.ಎಸ್.ರಾವ್, ಬೇಲೂರು ಕೃಷ್ಣಮೂರ್ತಿ, ರಾಮಸಂಜೀವಯ್ಯ ಮತ್ತು ಕೆ.ಗುಂಡಣ್ಣ ಬರೆದಿರುವ ನಾಟಕ ಆಡಿದ್ದಾರೆ. ಇದಲ್ಲದೆ ಎನ್.ಎಸ್.ಜೋಶಿ, ಮಾಂಡ್ರೆ, ಬಿ.ಆರ್.ಅರಿಶಿನಗೋಡಿ ಯವರ ಹಲವಾರು ವೃತ್ತಿ ಕಂಪನಿಯವರು ಪ್ರದರ್ಶಿಸುವ ಪೂರ್ಣಾವಧಿ ನಾಟಕ ಪ್ರದರ್ಶಿಸಿದ್ದಾರೆ ಎನ್ನುವುದು ವಿಶೇಷ.

ಈ ತಂಡದಲ್ಲಿ ಶ್ರೀ ಬಿ.ಎಂ. ಸುರೇಶ, ಎಸ್.ಸುಬ್ರಹ್ಮಣ್ಯ, ದೊರೆಸ್ವಾಮಿ ನಾಯಕ, ಅಣ್ಣಪ್ಪ, ಗು.ಚಿ.ರಮೇಶ ಮತ್ತು ಚೆಲುವರಾಜು ರವರು ಈ ಎಲ್ಲ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷರಾಗಿರುವ ಶ್ರೀ ಜಿ.ಡಿ. ದೊಡ್ಡಯ್ಯನವರು ಇವರ ನೆರವಿಗೆ ಇರುವುದರ ಜೊತೆಗೆ ಅಭಿನಯಿಸಿದ್ದಾರೆ.

| ಕ್ರ. ಸಂ. | ಪ್ರದರ್ಶಿಸಿದ ನಾಟಕ | ದಿನಾಂಕ | ರಚನೆ | ನಿರ್ದೇಶನ | ಪ್ರದರ್ಶಿಸಿದ ಸ್ಥಳ | ಭಾಗವಹಿಸಿದ ನಟರು | ಭಾಗವಹಿಸಿದ ನೇಪಥ್ಯ ಕಲಾವಿದರು |
|---|---|---|---|---|---|---|---|
| ೧ | ಸೇಡಿನ ಕಿಡಿ | ೧೪.೧೧.೮೦ | ಜವರೇಗೌಡ | ಜವರೇಗೌಡ | ಆಲತ್ತೂರು, ಗುಂಡ್ಲುಪೇಟೆ ತಾ. | ಬಿ.ಎಂ. ಸುರೇಶ<br>ಎಸ್.ಸುಬ್ಬಣಿದೊರೆ ಸ್ವಾಮಿ<br>ನಾಯ್ಕಅಣ್ಣಪ್ಪಚಲುವ ರಾಜು<br>ಸಿ.ಟಿ. ರಮೇಶ<br>ಈ ಮೇಲ್ಕಂಡವರು ಎಲ<br>ನಾಟಕಗಳಲ್ಲೂ ಅಭಿನಯಿಸಿದ್ದಾರೆ. | ಮೇಕಪ್ ಕೆ.ವಿ. ವೆಂಕಟೇಶ್ ಮತ್ತು ಕಿರಣ್ ಗುಂಡ್ಲುಪೇಟೆ |
| ೨ | ದೈವ ಸಂಕಲ್ಪ | ೧೯.೯.೮೧ | ಜವರೇಗೌಡ | ಜವರೇಗೌಡ | ಪೇಟೆ ಬೀದಿ, ಗುಂಡ್ಲುಪೇಟೆ | | |
| ೩ | ಕಳ್ಳಟ್ಟಿ ಭೈರ | ೨೩.೩.೮೨ | ಜವರೇಗೌಡ | ಜವರೇಗೌಡ | ಅಂಬೇಡ್ಕರ್‌ವೃತ್ತ, ಗುಂಡ್ಲುಪೇಟೆ | | |
| ೪ | ಅಪರಾಧಿ | ೧೨.೧೧.೯೨ | ಜವರೇಗೌಡ | ಜವರೇಗೌಡ | ಸೋಮಹಳ್ಳಿ, ಗುಂಡ್ಲುಪೇಟೆ ತಾ. | | |
| ೫ | ವ್ಯಾನಿಟಿಬ್ಯಾಗ್ | ೨೬.೧೧.೮೩ | ಜವರೇಗೌಡ | ಜವರೇಗೌಡ | ಕುರುಬಗೇರಿ, ಗುಂಡ್ಲುಪೇಟೆ | | |
| ೬ | ರಕ್ತ ತಿಲಕ | ೧೩.೧೦.೮೪ | ಜವರೇಗೌಡ | ಜವರೇಗೌಡ | ವಿಜಯ ಚಿತ್ರಮಂದಿರ, ಗುಂಡ್ಲುಪೇಟೆ | | |
| ೭ | ಜೀವಬಲಿ | ೨.೧೧.೮೪ | ಜವರೇಗೌಡ | ಜವರೇಗೌಡ | ಕಲಾಮಂದಿರ, ಗುಂಡ್ಲುಪೇಟೆ | | |
| ೮ | ಕಾಮಾವತಾರ | ೨೬.೧.೮೫ | ಜವರೇಗೌಡ | ಜವರೇಗೌಡ | ಕಬ್ಬಳ್ಳಿ, ಗುಂಡ್ಲುಪೇಟೆ ತಾ. | | |
| ೯ | ವಿಷಜ್ವಾಲೆ | ೧೫.೮.೮೫ | ಎನ್.ಎಸ್.ರಾವ್ | ಜವರೇಗೌಡ | ಹಳೇಬಸ್‌ನಿಲ್ದಾಣ, ಗುಂಡ್ಲುಪೇಟೆ | | |
| ೧೦ | ದಿಕ್ಕೆಟ್ಟಬಾಳು | ೧೪.೯.೮೬ | ಜವರೇಗೌಡ | ಜವರೇಗೌಡ | ನಾಯಕರಬೀದಿ, ಗುಂಡ್ಲುಪೇಟೆ | | |
| ೧೧ | ಸಾಮ್ರಾಟ್ ಕೃಷ್ಣ | ೨೯.೧೧.೮೬ | ಜವರೇಗೌಡ | ಜವರೇಗೌಡ | ಹಿ.ಪ್ರಾ.ಶಾಲೆ,ಆವರಣ, | | |

| | | | | | | | |
|---|---|---|---|---|---|---|---|
| ೧೨ | ದೇವರಾಯ ಹೆಣ್ಣು ಬಾಳಿನ ಕಣ್ಣು | ೧.೯.೭೭ | ಜವರೇಗೌಡ | ಜವರೇಗೌಡ | ಗುಂಡ್ಲುಪೇಟೆ ಇಂಗಲವಾಡಿ, ಗುಂಡ್ಲುಪೇಟೆ ತಾ. | | |
| ೧೩ | ಕುಲದ್ರೋಹಿ | ೨೩.೧೦.೭೮ | ಜವರೇಗೌಡ | ಜವರೇಗೌಡ | ಚನ್ನಂಜಯ್ಯನಹುಂಡಿ, ಗುಂಡ್ಲುಪೇಟೆ ತಾ. | | |
| ೧೪ | ಕಾಮಾವತಾರ ೨ನೆ ಪ್ರದರ್ಶನ | ೬.೯.೭೯ | ಜವರೇಗೌಡ | ಜವರೇಗೌಡ | ಕಬ್ಬಳ್ಳಿ, ಗುಂಡ್ಲುಪೇಟೆ ತಾ. | | |
| ೧೫ | ನನ್ನ ಗಂಡ ಬಲುಭಂಡ | ೨೬.೧.೭೯ | ಜವರೇಗೌಡ | ಜವರೇಗೌಡ | ಗುರುಭವನ ಗುಂಡ್ಲುಪೇಟೆ | | |
| ೧೬ | ದೇಶ ಪ್ರೇಮ ಅರಿವು | ೨೬.೧.೯೮ | ಜವರೇಗೌಡ | ಜವರೇಗೌಡ | ಪುರಸಭಾ ಭವನ, ಗುಂಡ್ಲುಪೇಟೆ | | |
| ೧೭ | ನಿಮಗೂ | ೧೮.೩.೨೦೦೨ | ಜವರೇಗೌಡ | ಜವರೇಗೌಡ | ಕಲಾಮಂದಿರ, ಗುಂಡ್ಲುಪೇಟೆ | ಬಿ.ಎಂ. ಸುರೇಶ | ಮೇಕಪ್ ಕೆ.ವಿ. ವೆಂಕಟೇಶ್ ಮತ್ತು ಕಿರಣ್ ಗುಂಡ್ಲುಪೇಟೆ |
| ೧೮ | ಬೇರೆ ಅಪ್ಸರೆ ತ್ಯಾಗಿ | ೧೫.೭.೯೬ | ಬೇಲೂರು ಕೃಷ್ಣಮೂರ್ತಿ | ಜವರೇಗೌಡ | ಅರಳೀಕಟ್ಟೆ ಬೀದಿ, ಗುಂಡ್ಲುಪೇಟೆ | ಎಸ್.ಸುಬ್ರಮಣಿದೊರೆ ಸ್ವಾಮಿ ನಾಯ್ಕಅಣ್ಣಪ್ಪಚಲುವ ರಾಜು ಸಿ.ಟಿ. ರಮೇಶ | |
| ೧೯ | ರಣಚಂಡಿ | ೨೬.೧.೯೦ | ಜವರೇಗೌಡ | ಜವರೇಗೌಡ | ಕಲಾಮಂದಿರ, ಗುಂಡ್ಲುಪೇಟೆ | ಈ ಮೇಲ್ಕಂಡವರು ಎಲ | |
| ೨೦ | ಹರಿದ ಚಿತ್ರ | ೧೫.೮.೯೦ | ಜವರೇಗೌಡ | ಜವರೇಗೌಡ | ಗುರುಭವನ ಗುಂಡ್ಲುಪೇಟೆ | ನಾಟಕಗಳಲ್ಲೂ ಅಭಿನಯಿಸಿದ್ದಾರೆ. | |
| ೨೧ | ಮರಳು ಮಾಳಿಗೆ | ೨.೧೧.೯೯ | ಜವರೇಗೌಡ | ಜವರೇಗೌಡ | ಕುರುಬಗೇರಿ, ಗುಂಡ್ಲುಪೇಟೆ | | |
| ೨೨ | ಅಪರಾಧಿ ೨ನೆ ಪ್ರ. | ೧೫.೨.೯೧ | ಜವರೇಗೌಡ | ಜವರೇಗೌಡ | ಮುಖ್ಯ ರಸ್ತೆ, ಗುಂಡ್ಲುಪೇಟೆ | | |
| ೨೩ | ಬಾಳುಬಂಗಾರ | ೨೫.೬.೯೧ | ಜವರೇಗೌಡ | ಜವರೇಗೌಡ | ಆಲತ್ತೂರು ಗುಂಡ್ಲುಪೇಟೆ ತಾ. | | |
| ೨೪ | ವೀರಪುತ್ರ | ೬.೧೧.೯೧ | ಜವರೇಗೌಡ | ಜವರೇಗೌಡ | ಹಳೇ ಬಸ್ ನಿಲ್ದಾಣ, | | |

| | | | | | | | |
|---|---|---|---|---|---|---|---|
| ೨೫ | ಭೀಮನಗರ್ವ ಭಂಗ | ೨೬.೧.೯೨ | ಜವರೇಗೌಡ | ಜವರೇಗೌಡ | ಗುಂಡ್ಲುಪೇಟೆ ಅರಳೀಕಟ್ಟೆ ಬೀದಿ, ಗುಂಡ್ಲುಪೇಟೆ | | |
| ೨೬ | ಸಮಾಜಕ್ಕೆ ಸವಾಲು | ೧೮.೩.೯೨ | ಜವರೇಗೌಡ | ಜವರೇಗೌಡ | ಹಿ.ಪ್ರಾ.ಶಾಲೆ, ಆವರಣ, ಗುಂಡ್ಲುಪೇಟೆ | | |
| ೨೭ | ಮುದ್ದಿನ ತಂಗಿ | ೨೮.೯.೯೨ | ಜವರೇಗೌಡ | ಜವರೇಗೌಡ | ಶಿವಪುರ, ಗುಂಡ್ಲುಪೇಟೆ | | |
| ೨೮ | ನ್ಯಾಯ ಎಲ್ಲಿದೆ | ೧೫.೧.೯೩ | ಜವರೇಗೌಡ | ಜವರೇಗೌಡ | ಹಂಗಳ, ಗುಂಡ್ಲುಪೇಟೆ | | |
| ೨೯ | ಪ್ರೆಸಿಡೆಂಟ್ ಪಾಪಣ್ಣ | ೨.೧೧.೯೩ | ಜವರೇಗೌಡ | ಜವರೇಗೌಡ | ನಾಯಕರ ಬೀದಿ, ಗುಂಡ್ಲುಪೇಟೆ | | |
| ೩೦ | ಕಲಾವಿದ | ೫.೩.೯೪ | ಜವರೇಗೌಡ | ಜವರೇಗೌಡ | ಗುರುಭವನ, ಗುಂಡ್ಲುಪೇಟೆ | | |
| ೩೧ | ರತ್ನಮಾಂಗಲ್ಯ | ೧೦.೯.೯೫ | ಎನ್.ಎಸ್.ಜೋಶಿ | ಜವರೇಗೌಡ | ಚಿಕ್ಕಮಾಂಸದ ಅಂಗಡಿ, ಗುಂಡ್ಲುಪೇಟೆ | | |
| ೩೨ | ಗಂಡನ ಮನೆ | ೧೮.೮.೯೬ | ಕವಿರತ್ನ ಮಾಂತ್ರೆ | ಜವರೇಗೌಡ | ತೆರಕಣಾಂಬಿ, ಗುಂಡ್ಲುಪೇಟೆ ತಾ. | ಬಿ.ಎಂ. ಸುರೇಶ<br>ಎಸ್.ಸುಬ್ಬಣಿದೊರೆ ಸ್ವಾಮಿ<br>ನಾಯ್ಕಅಣ್ಣಪ್ಪಚಲುವ ರಾಜು<br>ಸಿ.ಟಿ. ರಮೇಶ<br>ಈ ಮೇಲ್ಕಂಡವರು ಎಲ<br>ನಾಟಕಗಳಲ್ಲೂ ಅಭಿನಯಿಸಿದ್ದಾರೆ. | ಮೇಕಪ್ ಕೆ.ವಿ. ವೆಂಕಟೇಶ್ ಮತ್ತು ಕಿರಣ್ ಗುಂಡ್ಲುಪೇಟೆ |
| ೩೩ | ಹುಚ್ಚುಬಿಡಿಸಿದ ಹೆಣ್ಣು | ೬.೧೧.೯೬ | ಎನ್.ಎಸ್.ಜೋಶಿ | ಜವರೇಗೌಡ | ಅಂಬೇಡ್ಕರ್‌ವೃತ್ತ, ಗುಂಡ್ಲುಪೇಟೆ | | |
| ೩೪ | ಬಸ್ ಕಂಡಕ್ಟರ್ | ೫.೪.೯೭ | ಬಿ.ಆರ್.ಅರಿಶಿಣ ಗೋಡಿ | ಜವರೇಗೌಡ | ಬೇಗೂರು, ಗುಂಡ್ಲುಪೇಟೆ | | |
| ೩೫ | ಆಕಾಂಕ್ಷೆ | ೧೮.೮.೯೭ | ಜವರೇಗೌಡ | ಜವರೇಗೌಡ | ಗುರುಭವನ, ಗುಂಡ್ಲುಪೇಟೆ | | |
| ೩೬ | ಲಜ್ಜೆಗೆಟ್ಟಬಾಳು ೨ನೆ ಪ್ರ. | ೨೬.೧.೯೮ | ಜವರೇಗೌಡ | ಜವರೇಗೌಡ | ಅರಳೀಕಟ್ಟೆ ಬೀದಿ, ಗುಂಡ್ಲುಪೇಟೆ | | |
| ೩೭ | ಸೇಡಿನ ಚಿತ್ತಾರ ೨ನೆ ಪ್ರ. | ೮.೧೧.೯೮ | ಜವರೇಗೌಡ | ಜವರೇಗೌಡ | ಕಲಾಮಂದಿರ, ಗುಂಡ್ಲುಪೇಟೆ | | |

| | | | | | | | |
|---|---|---|---|---|---|---|---|
| ೩೮ | ಗಂಡನ ಮನೆ ೨ನೆ ಪ್ರ | ೮.೩.೯೯ | ಕವಿರತ್ನ ಮಾಂಡ್ರೆ | ಜವರೇಗೌಡ | ನಾಯಕರ ಬೀದಿ, ಹೊಸೂರು | | |
| ೩೯ | ದಿಕ್ಕೆಟ್ಟಬಾಳು | ೨.೧೧.೯೯ | ಜವರೇಗೌಡ | ಜವರೇಗೌಡ | ವಾಲ್ಮೀಕಿ ವೃತ್ತ, ಗುಂಡ್ಲುಪೇಟೆ | | |
| ೪೦ | ಸೇಡಿನ ಕಿಡಿ | ೮.೨.೨೦೦ | ಜವರೇಗೌಡ | ಜವರೇಗೌಡ | ಮದಕರಿನಾಯಕ ವೃತ್ತ, ಗುಂಡ್ಲುಪೇಟೆ | | |
| ೪೧ | ಸಮಾಜ ದುರಂತ | ೧೫.೬.೨೦೦ | ರಾಮ ಸಂಜೀವಯ್ಯ | ಜವರೇಗೌಡ | ಕುರುಬಗೇರಿ, ಗುಂಡ್ಲುಪೇಟೆ | | |
| ೪೨ | ವಿಜಯನಗರ ಪತನ | ೪.೧೧.೨೦೦೧ | ಡಾ.ಗೋಪಾಲ ಕೃಷ್ಣ | ಜವರೇಗೌಡ | ಪುರಸಭೆ ಆವರಣ, ಗುಂಡ್ಲುಪೇಟೆ | | |
| ೪೩ | ಮದ್ವೆಬೇಕೆ | ೨೦.೮.೨೦೦೨ | ಎಸ್. ತ್ಯಾಗರಾಜು | ಜವರೇಗೌಡ | ಹೊಸೂರು ಗುಂಡ್ಲುಪೇಟೆ | | |
| ೪೪ | ಬಂಜೆಯ ತೊಟ್ಟಿಲು | ೫.೩.೨೦೦೩ | ಎನ್.ಎಸ್. ಜೋಶಿ | ಜವರೇಗೌಡ | ನಾಯಕರ ಬೀದಿ, ಹೊಸೂರು | | |
| ೪೫ | ಕಣ್ಣಿಗೆ ಮಣ್ಣು | ೧.೧೧.೨೦೦೩ | ಕೆ.ಗುಂಡಣ್ಣ | ಜವರೇಗೌಡ | ಕಲಾಮಂದಿರ, ಗುಂಡ್ಲುಪೇಟೆ | ಬಿ.ಎಂ. ಸುರೇಶ<br>ಎಸ್.ಸುಬ್ಬಣ್ಣಿದೊರೆ ಸ್ವಾಮಿ<br>ನಾಯ್ಕಅಣ್ಣಪ್ಪಚಲುವ ರಾಜು<br>ಸಿ.ಟಿ. ರಮೇಶ<br>ಈ ಮೇಲ್ಕಂಡವರು ಎಲ<br>ನಾಟಕಗಳಲ್ಲೂ ಅಭಿನಯಿಸಿದ್ದಾರೆ. | ಮೇಕಪ್ ಕೆ.ವಿ. ವೆಂಕಟೇಶ್<br>ಮತ್ತು ಕಿರಣ್ ಗುಂಡ್ಲುಪೇಟೆ |
| ೪೬ | ದೀಪಾವಳಿ | ೨೦.೮.೨೦೦೪ | ಎಚ್.ಎಸ್. ಹೊಗಾರ | ಜವರೇಗೌಡ | ಗುರುಭವನ, ಗುಂಡ್ಲುಪೇಟೆ | | |
| ೪೭ | ಲಜ್ಜೆಗೆಟ್ಟಬಾಳು ೩ನೆ ಪ್ರ | ೧.೧೧.೨೦೦೫ | ಜವರೇಗೌಡ | ಜವರೇಗೌಡ | ಕುರುಬಗೇರಿ, ಗುಂಡ್ಲುಪೇಟೆ | | |
| ೪೮ | ಪ್ರಚಂಡ | ೧೬.೮.೨೦೦೬ | ಜವರೇಗೌಡ | ಜವರೇಗೌಡ | ದ.ರಾ.ಬೇಂದ್ರೇನಗರ, ಗುಂಡ್ಲುಪೇಟೆ | | |
| ೪೯ | ಕುಲದ್ರೋಹಿ ೨ನೆ ಪ್ರ | ೯.೯.೦೭ | ಜವರೇಗೌಡ | ಜವರೇಗೌಡ | ವಾಲ್ಮೀಕಿ ವೃತ್ತ, ಗುಂಡ್ಲುಪೇಟೆ | | |
| ೫೦ | ವೀರಪುತ್ರ | ೨.೧೧.೦೩ | ಜವರೇಗೌಡ | ಜವರೇಗೌಡ | ಗುರುಭವನ, | | |

| | | | | | | | |
|---|---|---|---|---|---|---|---|
| ೫೧ | ೨ನೆ ಪ್ರ. ಕಿತ್ತೂರ ಕೇಸರಿ | ೧೫.೮.೦೮ | ಜವರೇಗೌಡ | ಜವರೇಗೌಡ | ಗುಂಡ್ಲುಪೇಟೆ ಗುರುಭವನ, | | |
| ೫೨ | ಲಜ್ಜೆಗೆಟ್ಟಬಾಳು | ೮.೧೧.೦೮ | ಜವರೇಗೌಡ | ಜವರೇಗೌಡ | ಗುಂಡ್ಲುಪೇಟೆ ಶಿಕ್ಷಕರ ಭವನ, | | |
| ೫೩ | ತ್ಯಾಗಿ ೨ನೆ ಪ್ರ | ೧೭.೯.೦೯ | ಬೇಲೂರು ಕೃಷ್ಣಮೂರ್ತಿ | ಜವರೇಗೌಡ | ಗುಂಡ್ಲುಪೇಟೆ ನಾಯಕರ ಬೀದಿ, ಹೊಸೂರು | | |
| ೫೪ | ಹುಲಿಮಗಳು ೨ನೆ ಪ್ರ. | ೩೦.೧೨.೧೦ | ಬೇಲೂರು ಕೃಷ್ಣಮೂರ್ತಿ | ಜವರೇಗೌಡ | ಗುರುಭವನ,ಗುಂಡ್ಲುಪೇಟೆ | | |

**ಸಾಂಸ್ಕೃತಿಕ ಕಲಾ ವೇದಿಕೆ, ಸೋಮಹಳ್ಳಿ.**

ಸೋಮಹಳ್ಳಿ ಗುಂಡ್ಲುಪೇಟೆ ತಾಲ್ಲೂಕಿನ ಒಂದು ಗ್ರಾಮ. ಕಳೆದ ೨೦೦೫ರಿಂದ ಸಾಂಸ್ಕೃತಿಕ ಕಲಾ ವೇದಿಕೆ ರಂಗ ಚಟುವಟಿಕೆಯಲ್ಲಿ ನಿರತವಾಗಿದೆ. ನಾಟಕಗಳನ್ನು ಪ್ರದರ್ಶಿಸುವುದರ ಜೊತೆಗೆ ಇತರೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಯುವ ಜನ ಸೇವಾ ಇಲಾಖೆಯ ಜೊತೆಗೂಡಿ ಕೆಲಸ ಮಾಡುತ್ತಿದೆ .ಶ್ರೀ ನಾಗರಾಜು ಈ ತಂಡದ ಮುಖ್ಯಸ್ಥರು ಹಾಗೂ ಯುವಜನ ಸೇವಾ ಪ್ರಶಸ್ತಿಯನ್ನು ಪಡೆದುಕೊಂಡವರಾಗಿದ್ದಾರೆ.

| | | ಪ್ರದರ್ಶನದ ವಿವರ | | | | | | |
|---|---|---|---|---|---|---|---|---|
| ಕ್ರ.ಸಂ. | ಪ್ರದರ್ಶಿಸಿದ ನಾಟಕ | ದಿನಾಂಕ | ರಚನೆ | ನಿರ್ದೇಶನ | ಪ್ರದರ್ಶಿಸಿದ ಸ್ಥಳ | ಭಾಗವಹಿಸಿದ ನಟರು | ಭಾಗವಹಿಸಿದ ನೇಪಥ್ಯ ಕಲಾವಿದರು | ಷರಾ ಈ ಅಂಕಣದಲಿ ಅಗತ್ಯವೆನಿಸಿದರೆ ಹೆಚ್ಚಿನ ವಿವರ ನೀಡಿರಿ. |
| ೧ | ರತ್ನಮಾಂಗಲ್ಯ | ೨೬.೩.೦೫ | - | ನಾರಾಯಣ | ಸೋಮಹಳ್ಳಿ | ೧೨ | ೪ | ರಂಗಭೂಮಿ ಮತ್ತು ರಂಗಭೂಮಿ ಮತ್ತು ನಾಟಕಗಳಲ್ಲಿ ಅನೇಕ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ನಾಟಕದ ಮೂಲಕ ಪ್ರದರ್ಶಿಸಲಾಗಿದೆ. ಗಟ್ಟಿಕಸ ನಿರ್ವಹಣೇ ಮಾಹಿತಿ ಹಕ್ಕು ಇವುಗಳ ಬಗ್ಗೆ ವಿಚಾರ ಸಂಕಿರಣಗಳನ್ನು ಮಾಡಲಾಗಿದೆ. |
| ೨ | ಪರಿವರ್ತನೆ | ೧.೪.೦೮ ರಿಂದ ೬.೪.೦೮ | ಸಾಂಸ್ಕೃತಿಕ ಕಲಾ ವೇದಿಕೆ | ನಾಗರಾಜ್ ಎಸ್.ಬಿ. | ಕಲ್ಲಹಳ್ಳಿ ಬನ್ನಿತಾಳಮರ | ೧೨ | ೨ | |
| ೩ | ಹೆಣ್ಣು ಸಮಾಜದ ಕಣ್ಣು | ೧.೫.೦೯ | - | ನಾಗರಾಜ್ ಎಸ್.ಬಿ. | ಹಿರೀಕಾಟೀ ಬಲಚಲವಾಡಿ | ೧೨ | ೨ | |
| ೪ | ಕಂಬನಿ | ೩೦.೩.೦೭ ಸ್ವಾಮಿ ಆರ್ | - | ನಾರಾಯಣ | ಸೋಮಹಳ್ಳಿ | ೧೨ | ೪ | |

## ಸಿಂಧು ಸಾಂಸ್ಕೃತಿಕ ವೇದಿಕೆ

ಚಾಮರಾಜನಗರ ತಾಲ್ಲೂಕು ಸಂತೇಮರಹಳ್ಳಿ ಗ್ರಾಮದಲ್ಲಿ ಈ ತಂಡ ಸುಮಾರು ೨೦೦೬ ರಿಂದ ಕಾರ್ಯ ನಿರ್ವಹಿಸುತ್ತಿದೆ. ಕಾವುದವಾಡಿಯ ಮಹದೇವಸ್ವಾಮಿ ನೇತೃತ್ವದಲ್ಲಿ ಈವರೆಗೆ ಕೆಲವು ಚಟುವಟಿಕೆಯನ್ನು ನಡೆಸಿದ್ದಾರೆ.

| | | | |
|---|---|---|---|
| ೧. | ೨೦೦೬ | ನೆಲ–ಜಲ | ಈ ನಾಟಕಗಳನ್ನು |
| ೨. | ೨೦೦೭ | ಕನಸಿನವರು | ಮಹದೇವಸ್ವಾಮಿ ನಿರ್ದೇಶಿಸಿದ್ದು |
| ೩. | ೨೦೦೭ | ಅತಿ ಮಾನವ | |
| ೪. | ೨೦೦೮ | ಮಳೆ ಹುಚ್ಚ | |
| ೫. | ೨೦೦೮ | ರಾಜಕುಮಾರಿ ಪರಿಣಯ | |
| ೬. | ೨೦೦೮ | ಬಣ್ಣದ ಚಿಟ್ಟೆ | |

## ರಂಗಸಿರಿ

ಚಾಮರಾಜನಗರಕ್ಕೆ ಸಮೀಪದ ಸಂತೇಮರಹಳ್ಳಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ರಂಗ ಸಂಘಟನೆ. ಶ್ರೀ ಗೋವಿಂದರಾಜು (ಗೋಪಾಲ್) ರವರ ಉತ್ಸಾಹೀ ನಾಯಕತ್ವದಲ್ಲಿ ಈವರೆಗೆ **'ಪೆದ್ದಗುಂಡನ ಫಜೀತಿ'** (ನಿ. ಪದ್ಮನಾಭ್) ಹಾಗೂ **'ಮಂಟೇಸ್ವಾಮಿ ಕಥಾ ಪ್ರಸಂಗ'** (ನಿ. ಅಪೂರ್ವ ಡಿ ಸಿಲ್ವ ಹಾಗೂ ರೇಣುಕಾರಾಧ್ಯ) ನಾಟಕಗಳನ್ನು ರಂಗಕ್ಕೆ ತಂದಿದ್ದಾರೆ.

## ರಂಗಜಂಗಮ

೨೦೦೪ರಲ್ಲಿ ಅಪೂರ್ವ ಡಿ ಸಿಲ್ವಾ ಅವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದ ಸಂಘಟನೆ ಈವರೆಗೆ ಅವರು ಎರಡು ನಾಟಕಗಳ ಹಲವಾರು ಪ್ರಯೋಗಗಳನ್ನು ಮಾಡಿದ್ದಾರೆ. ಈ ತಂಡ ಇದರ ಜೊತೆಗೆ ಜನಜಾಗೃತಿ ಬೀದಿ ನಾಟಕಗಳನ್ನು ಮಾಡಿರುತ್ತಾರೆ.

| ಕ್ರ.ಸಂ. | ಪ್ರದರ್ಶಿಸಿದ ನಾಟಕ | ದಿನಾಂಕ | ನಿರ್ದೇಶನ | ಭಾಗವಹಿಸಿದ ನಟರು |
|---|---|---|---|---|
| ೦೧ | ಗುಣಮುಖ | ೨೦೦೪ | ಅಪೂರ್ವ ಡಿಸಿಲ್ವಾ | ಮಹೇಶ್‌ಪಿ. ನೇಮಿರಾಜು, ಶಿವಮೂರ್ತಿ |

| | | | | |
|---|---|---|---|---|
| ೦೨ | **ಅಲಮನಬಯಲಾಟ** | ೨೦೦೮ | ಅಪೂರ್ವ ಡಿ ಸಿಲಾ | ಪರಶಿವಮೂರ್ತಿ, ಚಂದ್ರಬಾಬು, ರಂಗಪ್ಪ, ಆರೋಗ್ಯಸ್ವಾಮಿ, ಲಕ್ಷ್ಮಣ ಸಿದ್ದರಾಜು, ನಾಗೇಂದ್ರ, ನಾಗರಾಜು, ಕೆ.ಮಹೇಶ, ಜನಾರ್ಧನ, ಎಸ್.ಮಂಜು ಗಾಳಿಪುರ,ಸ್ವಾಮಿ, ರೂಪಾ, ಶಿಲ್ಪ,ಸುಮತಿ, ಹೇಮಾ ಹೆಬ್ಬಾರ್, ರಾಜಪ್ಪ ಮಹೇಶ, ಮಲ್ಲೇಶ, ಕೆಂಪರಾಜು, ರೂಬಿನ್ ಸಂಜಯ್, ಮಹೇಶ್ (ಸ್ಫೂರ್ತಿ) ಸುರೇಸ್, ನೇತ್ರಾವತಿ. |

## ದೀನಬಂಧು

ಇದಲ್ಲದೇ "ದೀನಬಂಧು" – ಸಂಸ್ಥೆ ಕೂಡಾ ಕೆಲವು ವರ್ಷಗಳಿಂದ ರಂಗಚಟುವಟಿಕೆ ನಡೆಸಿಕೊಂಡು ಬರುತ್ತಿದೆ.

ಆರಂಭದ ಕೆಲವು ವರ್ಷಗಳಲ್ಲಿ ಪ್ರತಿವರ್ಷ ನಾ. **ಶ್ರೀನಿವಾಸ್**, ಇಲ್ಲಿಯ ಮಕ್ಕಳಿಗೆ ರಂಗತರಬೇತಿ ಶಿಬಿರ ನಡೆಸುತ್ತಿದ್ದರು.

ಈಚಿನ ವರ್ಷಗಳಲ್ಲಿ ಹೆಸರಾಂತ ರಂಗ ನಿರ್ದೇಶಕರಾದ **ಬಿ.ಜಯಶ್ರೀ** ಬಿಡುವು ಮಾಡಿಕೊಂಡು, ಮಕ್ಕಳ ಶಿಬಿರ ನಡೆಸುತ್ತಿದ್ದರು. **"ಧಾಂ ಧೂಂ ಸುಂಟರಗಾಳಿ" "ಹೂವಿ"**, ಅವರು ಸಿದ್ಧಪಡಿಸಿದ ನಾಟಕಗಳು.

ಈಚೆಗೆ ರಂಗಾಯಣ ರಾಮು ಇಲ್ಲಿಯ ಮಕ್ಕಳಿಗೆ ತರಬೇತಿ ನೀಡಿ ಅಜ್ಜಿಕತೆ ನಾಟಕ ಮಾಡಿಸಿದರು. ಈ ನಾಟಕ ಚಾಮರಾಜನಗರ, ಮೈಸೂರು ಮತ್ತು ಶಿವಮೊಗ್ಗಗಳಲ್ಲಿ ಪ್ರದರ್ಶನ ಕಂಡು, ಮೆಚ್ಚುಗೆ ಗಳಿಸಿದೆ.

## ಜಿಲ್ಲಾ ಕಲಾವಿದರ ಸಂಘ

ಇತ್ತೀಚೆಗೆ ನಿವೃತ್ತ ಶಿಕ್ಷಕರು ರಂಗಕರ್ಮಿಗಳೂ ಆದ ಶ್ರೀ. ಘಟಂ ಕೃಷ್ಣರವರ ನೇತೃತ್ವದಲ್ಲಿ ಚಾಮರಾಜನಗರ ಜಿಲ್ಲಾ ಕಲಾವಿದರ ಸಂಘ ಅಸ್ತಿತ್ವಕ್ಕೆ ಬಂದಿದೆ. ವೃತ್ತಿ ಕಂಪೆನಿಯಲ್ಲಿದ್ದು ಈಗ ನಿವೃತ್ತರಾಗಿರುವ ಕಲಾವಿದರು, ಗ್ರಾಮೀಣ ರಂಗಭೂಮಿಯ ಕಲಾವಿದರು, ಹಾರ್ಮೋನಿಯಂ ಮಾಸ್ತರು, ಹವ್ಯಾಸಿ ತಂಡದವರು, ಎಲ್ಲರೂ ಸೇರಿರುವ ಸಂಸ್ಥೆಯಿದು.

## ಉಪಸಂಹಾರ

ಈ ಅನೇಕ ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಜಿಲ್ಲೆಯಲ್ಲಿ ಅಷ್ಟಿಷ್ಟು ರಂಗಚಟುವಟಿಕೆಗಳು ನಡೆಯುತ್ತಿರುವುದು ಗಮನಾರ್ಹವಾಗಿದೆ. ಪ್ರಸ್ತುತ ಚಾಮರಾಜನಗರದಲ್ಲಿ ಅದು ಜಿಲ್ಲಾ ಕೇಂದ್ರವಾಗಿದ್ದರೂ, ಸೂಕ್ತವಾದ ರಂಗಮಂದಿರ ಇಲ್ಲವಾಗಿದೆ. ಈಗ 'ಜಿಲ್ಲಾ ರಂಗ ಮಂದಿರ' ಯೋಜನೆಯಲ್ಲಿ ರಂಗಮಂದಿರವೊಂದು ನಿರ್ಮಾಣ ಹಂತದಲ್ಲಿದೆ. ಪ್ರಾಯಶಃ ಮುಂದಿನ ದಿನಗಳಲ್ಲಿ ಉತ್ತಮ ಬೆಳವಣಿಗೆಯನ್ನು ನಿರೀಕ್ಷಿಸಬಹುದಾಗಿದೆ.

# ಚಾಮರಾಜನಗರ ಜಿಲ್ಲೆಯ ನಾಟಕಕಾರರು

**ಈ ಜಿಲ್ಲೆಯಲ್ಲಿ ಮಹತ್ವದ ವಿಶಿಷ್ಟ ಬಗೆಯ ನಾಟಕಕಾರರು ಇರುವುದು ಗಮನಾರ್ಹವಾಗಿದೆ.**

## ೧) ಸಂಸ

ಇವರ ಮೂಲ ಹೆಸರು ಎ.ಎನ್.ವೆಂಕಟಾದ್ರಿ ಅಯ್ಯರ್. ಕನ್ನಡದ ಹೆಮ್ಮೆಯ ಮತ್ತು ಪ್ರತಿಭಾನ್ವಿತ ನಾಟಕಕಾರರು ಇವರು. ಮೂಲತಃ ಯಳಂದೂರು ತಾಲ್ಲೂಕು ಅಗರ ಗ್ರಾಮದವರು. ಮೈಸೂರು ಅರಸು ಮನೆತನಕ್ಕೆ ಸಂಬಂಧಿಸಿದಂತೆ ೩೦ಕ್ಕೂ ಅಧಿಕ ಸಂಖ್ಯೆಯ ನಾಟಕಗಳನ್ನು ಬರೆದಿರುವುದಾಗಿ ತಿಳಿದುಬಂದಿದೆ. ಆದರೆ ಈಗ ೦೬ನಾಟಕಗಳು ಮಾತ್ರ ಲಭ್ಯವಿದೆ.

**'ವಿಗಡ ವಿಕ್ರಮರಾಯ' 'ಬೆಟ್ಟದ ಅರಸು''ವಿಜಯಾನಾರಸಿಂಹ' 'ಬಿರುದಂತೆಂಬರ ಗಂಡ' 'ಮಂತ್ರಶಕ್ತಿ'** ಇದಲ್ಲದೆ **'ಸಂಸಪದಂ'** ಎಂಬ ಕಾವ್ಯ **'ಕೌಶಲ'** ಎಂಬ ಕಾದಂಬರಿಯನ್ನು ಬರೆದುದ್ದಾಗಿ ತಿಳಿದು ಬಂದಿದೆ. ಕಳೆದ ಆರು ದಶಕಗಳಿಂದ ಇವರ ನಾಟಕಗಳನ್ನು ವಿವಿಧ ತಂಡಗಳವರು ಆಗಾಗ್ಗೆ ಪ್ರದರ್ಶಿಸಿದ್ದಾರೆ. ವಿಕ್ಷಿಪ್ತ ವ್ಯಕ್ತಿತ್ವದ ಸಂಸರು ೧೯೩೯ರಲ್ಲಿ ಮೈಸೂರಿನ ಸದ್ವಿದ್ಯಾ ಪಾಠ ಶಾಲೆಯ ಒಂದುಕೋಣೆಯಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಇವರ ಬದುಕನ್ನು ಆಧರಿಸಿ ಪಿ.ಲಂಕೇಶರು **'ಪೋಲೀಸರಿದ್ದಾರೆ ಎಚ್ಚರಿಕೆ'** ಎಂಬ ನಾಟಕವನ್ನು ಮತ್ತು ಶ್ರೀರಂ. ನಾಗರಾಜ ಅವರು **'ನೀಗಿಕೊಂಡ ಸಂಸ'** ಎಂಬ ನಾಟಕವನ್ನು ಬರೆದಿದ್ದು, ರಂಗಭೂಮಿಯಲ್ಲಿ ಯಶಸ್ವಿಯಾಗಿದೆ.

## ೨) ಲಿಂಗರಾಜೇ ಅರಸು

ಇವರು ಕೊಳ್ಳೇಗಾಲ ತಾಲ್ಲೂಕಿನ ಹೊಂಡರಬಾಳು ಗ್ರಾಮದವರು. ಈ ಭಾಗದಲ್ಲಿ ಗ್ರಾಮೀಣ ಹವ್ಯಾಸಿಗಳು ಅಭ್ಯಾಸಕ್ಕೆ ತೆಗೆದುಕೊಳ್ಳುವ ಸರಿಸುಮಾರು ಎಲ್ಲ ನಾಟಕಗಳನ್ನು ಇವರು ಬರೆದಿದ್ದಾರೆ. ಪ್ರಮುಖವಾಗಿ **'ದಕ್ಷಯಜ್ಞ' 'ಕುರುಕ್ಷೇತ್ರ' 'ತ್ರಿಜನ್ಮ ಮೋಕ್ಷ' 'ರಾಜಸೂಯಯಾಗ'** ಇವರನಾಟಕಗಳು. ಅವರ **'ತ್ರಿಜನ್ಮಮೋಕ್ಷ'** ನಾಟಕವು ಒಂದು ರೀತಿಯಲ್ಲಿ ಪ್ರಹ್ಲಾದ ಚರಿತ್ರೆ, ರಾಮಾಯಣ,ಇತ್ಯಾದಿಗಳನ್ನು ಪೋಣಿಸಿದ **'ಕೊಲಾಜ್'** ಆಗಿದೆ. ಸಾವಿರಾರು ಪ್ರಯೋಗಗಳಾಗಿರುವ ಈ ನಾಟಕಕಾರರ ವಿವರಗಳು ಹೆಚ್ಚಾಗಿ ಲಭ್ಯವಿಲ್ಲ.

## ೩) ಡಾ|| ಲಿಂಗಣ್ಣಿ

ಚಾಮರಾಜನಗರ ತಾಲ್ಲೂಕು ಜ್ಯೋತಿಗೌಡನಪುರ ಗ್ರಾಮದವರು. ಇವರು ಸಹ ಹೊಂಡರಬಾಳು ಲಿಂಗರಾಜೇ ಅರಸು ಅವರಂತೇಯೇ ಪೌರಾಣಿಕ ವಸ್ತುಗಳನ್ನುಳ್ಳ

ಅನೇಕ ನಾಟಕಗಳನ್ನು ಬರೆದಿದ್ದಾರೆ. ಹಾಗೂ ಅವು ಗ್ರಾಮೀಣ ಹವ್ಯಾಸಿ ತಂಡಗಳಿಂದ ಯಶಸ್ವಿಯಾಗಿ ಪ್ರದರ್ಶಿತಗೊಂಡಿವೆ.

## ೪) ಎಸ್. ರಾಮನಾಥ

ಇವರು ಜಿಲ್ಲೆಯ ಕೊಳ್ಳೇಗಾಲ ಪಟ್ಟಣದವರು.ಎಂ.ಎಸ್ಸಿ. ಪದವೀಧರರು. ೧೯೮೮ ರಿಂದ ಮೈಸೂರಿನ 'ರಂಗಾಯಣ'ದಲ್ಲಿ ಕಲಾವಿದರಾಗಿದ್ದಾರೆ. ಮಹತ್ವದ ನಾಟಕರಾರರೂ ಕೂಡಾ. **'ಅಶ್ವಪರ್ವ''ಅರಹಂತ' 'ಪುಗಳೇಂದ್ರಿ ಪ್ರಹಸನ' 'ಕಮಲಿನಿ ಕಾಮಿಡಿ ಕಲ್ಯಾಣ' 'ಕಸ್ತೂರಾ ಬಾ' 'ಮಾಯಾಮುರಳಿ'** ಇವರ ಪ್ರಮುಖ ನಾಟಕಗಳು. **'ಟೀ ಹೌಸ್'** ಚೀನಿ ನಾಟಕದ ಅನುವಾದವಾಗಿದೆ. ಇದಲ್ಲದೆ ಕೆಲವು ಮಕ್ಕಳ ನಾಟಕಗಳನ್ನು ಹಾಗೂ **'ರಂಗಾಟಗಳು'**ಎಂಬ ಕೈಪಿಡಿಯನ್ನು ರಚಿಸಿದ್ದಾರೆ.

## ೫) ಡಾ॥ ಕೆ.ಪ್ರಭುಶಂಕರ್

ಇವರು ಚಾಮರಾಜನಗರದವರು. ಕನ್ನಡ ಪ್ರಾಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗಿ ನಿವೃತ್ತರಾಗಿದ್ದಾರೆ. ಕನ್ನಡದ ಬಹುಮಹತ್ವದ ವಿಮರ್ಶಕರು. ಬುದ್ಧನ ಬದುಕನ್ನು ಆಧರಿಸಿದಂತೆ ಅವರು ನಾಲ್ಕು ನಾಟಕಗಳನ್ನು ಬರೆದಿದ್ದಾರೆ. **'ಅಂಗುಲಿಮಾಲ' 'ಆಮ್ರಪಾಲಿ'** ಮುಂತಾದ ಈ ನಾಲ್ಕು ನಾಟಕಗಳನ್ನು **'ಬುದ್ಧ ನಾಟಕ ಚಕ್ರ'** ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ೫೦-೬೦ ರ ದಶಕದಲ್ಲಿ **'ಅಂಗುಲಿಮಾಲ'** ಹವ್ಯಾಸಿ ರಂಗಭೂಮಿಯ ಜನಪ್ರಿಯ ನಾಟಕವಾಗಿತ್ತು. ಇತ್ತೀಚೆಗೆ **'ಆಮ್ರಪಾಲಿ'** ಪ್ರದರ್ಶನ ಕಂಡಿದೆ. ಇವು ಈವರೆಗೆ ಹಲವಾರು ಸಲ ಪಠ್ಯಗಳೂ ಆಗಿವೆ.

## ೬) ಕೆ.ಜವರೇಗೌಡ

ಇವರು ಗುಂಡ್ಲುಪೇಟೆಯವರು. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಾಗಿ ನಿವೃತ್ತರಾಗಿದ್ದಾರೆ. ಇವರು ಸುಮಾರು ೩೨ ನಾಟಕಗಳನ್ನು ಬರೆದಿದ್ದಾರೆ. **'ದೇಶ ಪ್ರೇಮ' 'ವಿದ್ಯಾಮಹತ್ವ' 'ಸಾಮ್ರಾಟ್ ಕೃಷ್ಣದೇವರಾಯ' 'ಕಸ್ತೂರಿ ಕೇಸರಿ' 'ಹರಿದ ಬೆತ್ತ' 'ದಿಕ್ಕೆಟ್ಟ ಬಾಳು' 'ದಯಾಮಯಿ ಶ್ರೀ ಅಯ್ಯಪ್ಪ' 'ಕಾಮಾವತಾರ' 'ಮರಳುಮಾಳಿಗೆ' 'ಅಪರಾಧ' 'ಆಕಾಂಕ್ಷೆ' 'ಬಾಳುಬಂಗಾರ' 'ವೀರಪುತ್ರ' 'ಭೀಮನ ಗರ್ವಭಂಗ' 'ನಿಮಗೂ ಬೇಕೆ ಅಪ್ಸರೆ' 'ಶಾಂತಮೂರ್ತಿ' 'ಲಾಟರಿಗಂಡ' 'ತಾಳಿಭಾಗ್ಯ' 'ಮುದ್ದಿನ ತಂಗಿ' 'ಕತ್ತಲಿನಿಂದ ಬೆಳಕಿಗೆ' 'ಅಪ್ಪ-ಅಮ್ಮ' 'ಲಕ್ಷ್ಮಿ ಕಟಾಕ್ಷ' 'ನ್ಯಾಯ ಎಲ್ಲಿದೆ' 'ಪ್ರೆಸಿಡೆಂಟ್ ಪಾಪಣ್ಣ' 'ಲಾಟರಿ ಅವತಾರ' 'ಕಲಾವಿದ'** ಮತ್ತು **'ಅರಿವು'** ಇವರು ಬರೆದ ನಾಟಕಗಳು. ಈ ನಾಟಕಗಳು ರಂಗದ ಮೇಲೆ ಪ್ರದರ್ಶನ ಕಂಡಿವೆ. ಹಾಗೂ ಬಹುತೇಕ ನಾಟಕಗಳು ಪ್ರಕಟವಾಗಿದೆ ಎಂಬುದು ಗಮನಾರ್ಹ.

## ೭) ಕೆ.ವೆಂಕಟರಾಜು

ಇವರು ಚಾಮರಾಜನಗರದವರು. ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. **'ತಲೆ ಬಾಗದ ಜನ'** ನಾಟಕವು ಹಲವಾರು ಪ್ರದರ್ಶನ ಕಂಡಿವೆ. ಕಳೆದ ೩೦ ವರ್ಷಗಳಿಗೂ ಹೆಚ್ಚು ಕಾಲದಿಂದ ಚಾಮರಾಜನಗರದಲ್ಲಿ **'ಶಾಂತಲಾ ಕಲಾವಿದರು'** ಎಂಬ ಹವ್ಯಾಸಿ ತಂಡದೊಡನೆ ಕೆಲಸ ಮಾಡುತ್ತಿದ್ದಾರೆ. ೨೦೦೭ರಲ್ಲಿ **'ನಾಟಕ ಅಕಾಡೆಮಿ'** ಪ್ರಶಸ್ತಿಯನ್ನು ಪಡೆದಿರುತ್ತಾರೆ. ಪ್ರೊಫೆಸರ್ ಸಯ್ಯದ್ ಮಂಜೂರ್ ರವರ ಜೊತೆ ಕಿಷನ್ ಚಂದರ್ ಅವರ "ದರ್‌ವಾಜಾಖೋಲ್‌ದೋ" ನಾಟಕವನ್ನು ಅನುವಾದಿಸಿದ್ದಾರೆ. ಅಲ್ಲದೇ ಸುರ್ಗಿಗುಡ್ಡ ಎಂಬ ನಾಟಕ ಬರೆದಿದ್ದು, ಪ್ರದರ್ಶನ/ಮುದ್ರಣ ಕಾಣಬೇಕಿದೆ.

## ೮) ಬಿ.ಎಸ್.ವಿನಯ್

ಇವರು ಚಾಮರಾಜನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಹಿಂದಿ ಶಿಕ್ಷಕರಾಗಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಹಾಗೂ ನೀನಾಸಂ ರಂಗ ಶಿಕ್ಷಣ ಕೇಂದ್ರದ ಪದವೀಧರರು. ಇವರ **'ಅಶ್ವಘೋಷ'** ನಾಟಕ ಇದೀಗ ಪ್ರಕಟಗೊಂಡಿದೆ.

## ೯) ನಾ.ದೇ.ನರಸಿಂಹಮೂರ್ತಿ

ಚಾಮರಾಜನಗರ ತಾಲ್ಲೂಕಿನ ನಾಗವಳ್ಳಿ ಗ್ರಾಮದ ದೇವಯ್ಯನವರ ಮಗ ಇವರು. ಅದ್ಭುತ ಪ್ರತಿಭಾವಂತ ನಟ, ಗಾಯಕರಾಗಿದ್ದ ಇವರು, ವೃತ್ತಿ ನಾಟಕ ಕಂಪನಿಗಳ ಪ್ರಸಿದ್ಧ ನಾಟಕಕಾರರು. ಇವರ **'ಎಚ್ಚರ ತಂಗಿ ಎಚ್ಚರ' 'ಪೋಲಿಸನ ಮಗಳು'** ನಾಟಕಗಳನ್ನು ಅನೇಕ ಕಂಪನಿಗಳು ಸಾವಿರಾರು ಪ್ರದರ್ಶನವನ್ನು ಮಾಡಿವೆ. ಗುಲ್ಬರ್ಗದಲ್ಲಿ ಇವರನ್ನು ಆನೆಯ ಮೇಲೆ ಕೂಡಿಸಿ ಮೆರವಣಿಗೆ ಮಾಡಲಾಗಿದೆ. ಇವರ ಪತ್ನಿ ಪ್ರೇಮಾ ಕೂಡಾ ಗಾಯಕಿ ಹಾಗೂ ಕಲಾವಿದೆ.

## ೧೦) ಸೋಮಶೇಖರ ಬಿಸಲ್ವಾಡಿ

ಚಾಮರಾಜನಗರದ **'ಶ್ರೀರಾಮಚಂದ್ರ ಉಪಾಧ್ಯಾಯರ ಪ್ರಶಿಕ್ಷಣ ಸಂಸ್ಥೆ'** ಯಲ್ಲಿ ಇವರು ಪ್ರಶಿಕ್ಷಕರಾಗಿದ್ದಾರೆ. ಇವರು ಕವಿ, ಕತೆಗಾರ ಹಾಗೂ ಅಂಬೇಡ್ಕರ್ ಜೀವನ ಚರಿತ್ರೆಯನ್ನು ಬರೆದಿದ್ದಾರೆ. **'ಸಂಕ್ರಮಣದ ಅಲೆಗಳು'** ಎಂಬ ಇವರ ಅಪ್ರಕಟಿತ ನಾಟಕ ಅವರೇ 'ರಂಗತರಂಗ'ತಂಡಕ್ಕೆ ನಿರ್ದೇಶಿಸಿದ್ದಾರೆ.

## ೧೧) ನಾಗೇಶ್ ಸೋಸ್ಲೆ

ಇವರು ರಾಮಚಂದ್ರ ಉಪಾಧ್ಯಾಯ ಪ್ರಶಿಕ್ಷಣ ಸಂಸ್ಥೆಯಲ್ಲಿ ಪ್ರಶಿಕ್ಷಕರಾಗಿದ್ದಾರೆ. ಕವಿ, ಚಿತ್ರಗಾರರೂ ಆಗಿದ್ದಾರೆ. "ನಮ್ಮ ನಮ್ಮೊಳಗೆ" ಎಂಬ ನಾಟಕವನ್ನು ಬರೆದು, ಅವರೇ ನಿರ್ದೇಶಿಸಿದ್ದಾರೆ.

***********

# ಚಾಮರಾಜನಗರ ಜಿಲ್ಲೆಯಲ್ಲಿನ ವೃತ್ತಿ ರಂಗಭೂಮಿ ಕಲಾವಿದರು

ಕನ್ನಡ ವೃತ್ತಿ ರಂಗಭೂಮಿಯ ಬಹುದೊಡ್ಡ ಕಲಾವಿದರೂ ಮತ್ತು ಆ ಮೂಲಕ ಚಲನಚಿತ್ರ ರಂಗದ ಅನಭಿಷಿಕ್ತ ಚಕ್ರವರ್ತಿಯಾದ ಡಾ॥ ರಾಜ್‌ಕುಮಾರ್ ಹಾಗೂ ಅವರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಈ ಜಿಲ್ಲೆಯವರು ಎಂಬುದು ನಮ್ಮ ಹೆಮ್ಮೆ.

ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಅನೇಕ ಕಂಪನಿಗಳಲ್ಲಿ ಕೆಲಸ ಮಾಡಿದ ಬಹುದೊಡ್ಡ ನಟರು. ಅವರು ಕಂಸ, ರೇಚರ್, ಹಿರಣ್ಯಕಶ್ಯಪ ಮೊದಲಾದ ರಾಕ್ಷಸ ಪಾತ್ರಗಳಿಗೆ ಹೆಸರಾದವರು. ಅವರು ಕಂಪನಿಯ ರಜಾ ವೇಳೆಯಲ್ಲಿ ಚಾಮರಾಜನಗರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಗ್ರಾಮೀಣ ಹವ್ಯಾಸಿಗಳಿಗೆ ನಾಟಕಗಳನ್ನು ಕಲಿಸುತ್ತಿದ್ದುದೂ ಉಂಟು. ಬಾಲಕ ಎಸ್.ಪಿ.ಮುತ್ತುರಾಜ್ (ರಾಜ್‌ಕುಮಾರ್) ರವರೂ ಜೊತೆಯಲ್ಲಿ ಇದ್ದುದನ್ನು ಈಗಲೂ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಡಾ॥ ರಾಜ್‌ಕುಮಾರ್ ರವರು ಗುಬ್ಬಿ ಕಂಪನಿ, **'ಶೇಷಕಮಲ ನಾಟಕ ಮಂಡಲಿ'** ಹಾಗೂ **'ಎಂ.ವಿ.ಸುಬ್ಬಯ್ಯನಾಯ್ಡು'** ರವರ ಕಂಪನಿಗಳಲ್ಲಿ ಕೆಲಸ ಮಾಡಿದರು. ಅವರು ಚಲನಚಿತ್ರ ರಂಗಕ್ಕೆ ಆಯ್ಕೆಯಾಗುವ ಸ್ವಲ್ಪ ಮುಂಚೆ ಎಂ.ವಿ.ಸುಬ್ಬಯ್ಯನಾಯ್ಡು ಅವರ ಕಂಪನಿಯಲ್ಲಿಯೇ ಕೆಲಸ ಮಾಡುತ್ತಿದ್ದರು. ಅವರು ಚಲನಚಿತ್ರರಂಗದಲ್ಲಿ ಹೆಸರು ಗಳಿಸಿದ ನಂತರವೂ ಒಂದು ತಂಡ ಕಟ್ಟಿಕೊಂಡು **'ಬೇಡರಕಣ್ಣಪ್ಪ' 'ಎಚ್ಚಮನಾಯಕ' 'ಸಾಹುಕಾರ'** ನಾಟಕಗಳನ್ನು ಪ್ರದರ್ಶಿಸುತ್ತಾ ಕರ್ನಾಟಕದ ಎಲ್ಲ ಪ್ರಮುಖ ಊರುಗಳಲ್ಲಿ ಪ್ರದರ್ಶಿಸಿದರು. ಅದರ ಫಲವಾಗಿಯೇ ರಾಜ್‌ಕುಮಾರ್, ಜಿ.ವಿ.ಅಯ್ಯರ್, ನರಸಿಂಹರಾಜು ಮತ್ತು ಬಾಲಕೃಷ್ಣ ಸೇರಿ **'ರಣಧೀರ ಕಂಠೀರವ'** ಚಿತ್ರವನ್ನು ನಿರ್ಮಿಸಿದ್ದೂ ಉಂಟು.

೧೯೭೩ರಲ್ಲಿ ರಾಜ್‌ಕುಮಾರ್ ರವರು ಖ್ಯಾತಿಯ ಉತ್ತುಂಗವನ್ನು ಏರಿದ ನಂತರವೂ ಮತ್ತೊಮ್ಮೆ ನಾಟಕವನ್ನು ಅಭಿನಯಿಸುವ ಒಂದು ಪ್ರಯತ್ನ ಮಾಡಿದರು. ಆ ಸಮಯದಲ್ಲಿ ಯಳಂದೂರಿನಲ್ಲಿ **ಎಚ್ಚಮ ನಾಯಕ** ದ ಪ್ರದರ್ಶನ ನಡೆಯಿತು. ಆದರೆ, ಅವರ ಜನಪ್ರಿಯತೆಯ ದೆಸೆಯಿಂದ ಪ್ರೇಕ್ಷಕರನ್ನು ನಿಯಂತ್ರಿಸುವುದು ಕಷ್ಟಸಾಧ್ಯವಾದ ಕಾರಣ ಮುಂದೆ ಆ ಪ್ರಯತ್ನ ಮಾಡಲು ಹೋಗಲಿಲ್ಲ. ಪ್ರಾಯಶಃ ಈ ಪ್ರಯತ್ನ ಯಶಸ್ವಿಯಾಗಿದಲ್ಲಿ ವೃತ್ತಿರಂಗಭೂಮಿಯ ಸ್ವರೂಪವೇ ಬದಲಾಗುತ್ತಿತ್ತೇನೋ.

## ೧೧) ಸಿ.ವಿ.ರಾಮಾಶಾಸ್ತ್ರಿ

ಇವರು **'ಕರ್ನಾಟಕ ಕಾದಂಬರೀ ಸಂಗ್ರಹ'** ಪತ್ರಿಕೆಯ ಸಂಪಾದಕರಾಗಿದ್ದ ಸಿ.ವೆಂಕರಮಣಶಾಸ್ತ್ರಿಗಳ ಮಕ್ಕಳು. ಇವರು ತಮ್ಮ ರಂಗಭೂಮಿ ವೃತ್ತಿ ಜೀವನವನ್ನು **'ಚಾಮುಂಡೇಶ್ವರಿ ಕರ್ನಾಟಕ ಸಭಾ'** ದಿಂದ ಆರಂಭಿಸಿದರು. ಆ ಕಂಪನಿಯ ಪ್ರಸಿದ್ಧ ನಾಟಕವಾದ **'ದಾನಶೂರ ಕರ್ಣ'** ದಲ್ಲಿ ಹೆಸರಾಂತ ನಟ ಕೊಟ್ಟೂರಪ್ಪನವರೊಂದಿಗೆ **ಕುಂತಿ** ಪಾತ್ರದಲ್ಲಿ ಅಭಿನಯಿಸಿದ್ದರು. ಇದು ಅವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟಿತು. ಆ ನಂತರದ ದಿನಗಳಲ್ಲಿ **'ಶೇಷಕಮಲ ನಾಟಕ ಮಂಡಲಿ' 'ಗುಬ್ಬಿ ಕಂಪನಿ' ಜಮಖಂಡಿ ಕಂಪನಿ'** ಇತ್ಯಾದಿಗಳಲ್ಲಿ ಅಭಿನಯಿಸುತ್ತಿದ್ದರು.

**'ದಾನಶೂರ ಕರ್ಣ' ದ ಕುಂತಿ, 'ರಾಮಾಯಣ'ದ ಲಕ್ಷ್ಮಣ, 'ಎಚ್ಚಮನಾಯಕ'** ದಲ್ಲಿ ಶಾಸ್ತ್ರಿ ಹಾಗೂ **'ಉಸ್ಮಾನ್ ಸದಾರಮೆ'**ಯ ಕಲಹಂಸ ಇವರಿಗೆ ಹೆಸರು ತಂದು ಕೊಟ್ಟ ಪಾತ್ರಗಳು.

ಅವರು ವೃತ್ತಿ ಕಂಪನಿಯನ್ನು ಬಿಟ್ಟು ಚಾಮರಾಜನಗರದಲ್ಲಿ ಮುದ್ರಣಾಲಯದಲ್ಲಿ ತೊಡಗಿಕೊಂಡ ಸಂದರ್ಭದಲ್ಲಿಯೂ ವಿವಿಧ ಕಂಪನಿಗಳಿಗೆ ಅತಿಥಿ ನಟರಾಗಿ ಹೋಗುತ್ತಿದ್ದುದೂ ಉಂಟು.

## ೨) ಶಂಭುಲಿಂಗಪ್ಪ

ಇವರು ಚಾಮರಾಜನಗರದವರು. ಶಿಕ್ಷಕರಾಗಬೇಕೆಂದು ಬಯಸಿ, ಎಸ್ಸೆಲ್ಸಿ ನಂತರ ಟಿ.ಸಿ.ಎಚ್. ಮಾಡಿದರು. ಆದರೆ ಅವರು ವೃತ್ತಿರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕೆಲವು ಕಾಲ ಅವರು **'ಹಿರಣಯ್ಯ ಮಿತ್ರ ಮಂಡಲಿ'** ಯಲ್ಲಿ ಕೆಲಸ ಮಾಡಿದ್ದೂ ಉಂಟು. ಅಲ್ಲದೇ ಮೈಸೂರಿನ **'ಶ್ರೀರಂಗ ಮಿತ್ರ ಮಂಡಲಿ'** ಎಂಬ ಒಂದು ಅರೆ ವೃತ್ತಿ ಕಂಪನಿಯಲ್ಲಿ ಕಲಾವಿದರಾಗಿದ್ದರು. ಈ ಕಂಪನಿ ಪ್ರದರ್ಶಿಸಿದ **'ಮುದುಕಾವತಾರ'** ದಲ್ಲಿ ಅಭಿನಯಿಸಿದ್ದೂ ಉಂಟು. ಚಾಮರಾಜನಗರಕ್ಕೆ ಬಂದ ಎಲ್ಲ ವೃತ್ತಿ ಕಂಪನಿಗಳಿಗೂ ಸಂಪೂರ್ಣ ಸಹಾಕರ ನೀಡುತ್ತಾ ಅವರೊಡನೆ ಒಂದಾಗಿ ಭಾಗವಹಿಸುತ್ತಿದ್ದರು.

## ೩) ಆಲೂರು ನಾಗರಾಜ್

ಸುಮಾರು ೭೦ವರ್ಷದ ಇವರು, ಚಾಮರಾಜನಗರ ಸಮೀಪದ ಆಲೂರು ಗ್ರಾಮದವರು. ಪಿ.ಯು.ಸಿ.ವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಆಲೂರು ಗ್ರಾಮದಲ್ಲಿ ಅಲ್ಲಿಯ ಗ್ರಾಮೀಣ ಹವ್ಯಾಸಿಗಳು ಅಭಿನಯಿಸುತ್ತಿದ್ದ ನಾಟಕಗಳಲ್ಲಿ ಭಾಗವಹಿಸುವ ಮೂಲಕ ಇವರು ರಂಗಭೂಮಿಯಲ್ಲಿ ಆಸಕ್ತಿ ಬೆಳಸಿಕೊಂಡರು. ಈ ಆಸಕ್ತಿ ಅವರನ್ನು

ವೃತ್ತಿ ಕಂಪನಿಗಳತ್ತ ಎಳೆದು ತಂದಿತು. ಚಾಮರಾಜನಗರದಲ್ಲಿ ಮೊಕ್ಕಾಂ ಮಾಡಿದ **'ಕೆ.ಬಿ.ಆರ್.ನಾಟಕ ಕಂಪನಿ'** ಯನ್ನು ಸೇರುವ ಮೂಲಕ ವೃತ್ತಿ ಕಂಪನಿಗೆ ಪಾದಾರ್ಪಣೆ ಮಾಡಿದರು.

ಉತ್ತರ ಕರ್ನಾಟಕದ ಬಹುತೇಕ ಕಂಪನಿಗಳಲ್ಲಿ ಇವರು ಕೆಲಸ ಮಾಡಿದ್ದಾರೆ.

**'ಶಾರದಾ ಸಂಗೀತ ನಾಟಕ ಮಂಡಲಿ' ಗೋಕಾಕ್, 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ' ಕಮತಗಿ, 'ಸಂಗಮೇಶ್ವರ ನಾಟಕ ಸಂಘ' ಆಶಾಪುರ, 'ಶ್ರೀ ಗರುಕುಮಾರೇಶ್ವರ ನಾಟಕ ಸಂಘ' ಹಾನಗಲ್ 'ಶ್ರೀ ಸಂಗಮೇಶ್ವರ ನಾಟಕ ಸಂಘ' ಗುಡಗೇರಿ ಹಾಗೂ 'ಗುಬ್ಬಿ ಕಂಪನಿ'** ಗಳಲ್ಲಿ ಕೆಲಸ ಮಾಡಿದ್ದಾರೆ. ತಮ್ಮ ಬಿಡುವಿನ ವೇಳೆಯಲ್ಲಿ ಆಲೂರಿನ ಹವ್ಯಾಸಿಗಳಿಗೆ **'ಎಚ್ಚಮ ನಾಯಕ' 'ಭೂಕೈಲಾಸ' 'ಕಂಬಳಿ ನಾಗಿದೇವ'** ಇತ್ಯಾದಿ ನಾಟಕಗಳನ್ನು ನಿರ್ದೇಶಿಸಿದ್ದಾರೆ.

## ೪) ಪಂಕಜಾ ರವಿಶಂಕರ್

ಕರ್ನಾಟಕದಾದ್ಯಂತ ಹೆಸರು ಮಾಡಿರುವ ಇವರು ಚಾಮರಾಜನಗರದವರು. ಶ್ರೀ ಲಿಂಗಣ್ಣ ನವರ ಪುತ್ರಿ, ಶಾಲಾ ದಿನಗಳಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ನಾಟಕದಲ್ಲಿ ಆಸಕ್ತಿ ತಳೆದರು. ಚಾಮರಾಜನಗರದಲ್ಲಿ ಆಗ ಸಕ್ರಿಯವಾಗಿದ್ದ **'ನರಹರಿ ಮಿತ್ರ ಮಂಡಲಿ'** ಯಲ್ಲಿ ನರಹರಿಯವರ ಜೊತೆ **'ಶ್ರೀ ರಾಘವೇಂದ್ರ ಮಹಿಮೆ' 'ಅಣ್ಣ-ತಂಗಿ'** ಇತ್ಯಾದಿ ನಾಟಕಗಳಲ್ಲಿ ಅಭಿನಯಿಸಿದರು. ಆಗ ಇವರಿಗೆ ನ. ನರಹರಿ, ನಾ.ದೇ. ನರಸಿಂಹಮೂರ್ತಿ, ಎ.ಎಸ್.ಗುಂಡಪ್ಪ (ತಬಲಾ ಕಲಾವಿದರು) ಹಾಗೂ ವೆಂಕಟೇಶ ಬಾಬು ಪ್ರೋತ್ಸಾಹಿಸಿದರು.

ಈ ಮೂಲಕ ಅವರು **'ಕುಮಾರೇಶ್ವರ ನಾಟ್ಯ ಸಂಘ'**ಕ್ಕೆ ಪಾದಾರ್ಪಣೆ ಮಾಡಿದರು. ಆ ನಂತರದ ದಿನಗಳಲ್ಲಿ **'ಗುಬ್ಬಿ ಕಂಪನಿ' 'ಚಿಂದೋಡಿ ಕಂಪನಿ'** ಯಲ್ಲಿಯೂ ಕೆಲಸ ಮಾಡಿದರು. ಬಿಡುವಿನ ವೇಳೆಯಲ್ಲಿ ಗ್ರಾಮೀಣ ಹವ್ಯಾಸಿ ತಂಡಗಳಲ್ಲಿ ಅತಿಥಿ ನಟಿಯಾಗಿ ಕೆಲಸ ಮಾಡಿದರು.

ಇತ್ತೀಚಿನ ದಿವಸಗಳಲ್ಲಿ ಮಹಿಳೆಯರದ್ದೇ ಆದ **'ಮಾತೃಶ್ರೀ ಕಲಾ ತಂಡ'** ಕಟ್ಟಿಕೊಂಡು ಕರ್ನಾಟಕದಾದ್ಯಂತ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳನ್ನು ಅಭಿನಯಿಸಿದ್ದಾರೆ.

**'ಗೌಡ್ರಗದ್ದಲ'** ದ ಗೌಡ, ದುರ್ಯೋಧನ, ರಾವಣ, ಕಂಸ ಇತ್ಯಾದಿ ಪಾತ್ರಗಳು ಅವರಿಗೆ ಅಪಾರ ಜನಪ್ರಿಯತೆ ತಂದುಕೊಟ್ಟಿದೆ.

ಒಂದು ಅವಧಿಗೆ ಅವರು **'ಕರ್ನಾಟಕ ನಾಟಕ ಅಕಾಡೆಮಿ'** ಯ ಸದಸ್ಯರೂ ಆಗಿದ್ದರು. ಇವರು ಕನ್ನಡದ ಸಿನಿಮಾ ಹಾಗು ಕಿರುತೆರೆಗಳಲ್ಲಿ ಅಭಿನಯಿಸಿದ್ದಾರೆ.

## ೫) ನ. ನರಹರಿ

ಇತ್ತೀಚೆಗಷ್ಟೆ ನಿಧನರಾದ ನ. ನರಹರಿ ಉತ್ತರ ಕರ್ನಾಟಕದ ಬಹುತೇಕ ಕಂಪನಿಗಳಲ್ಲಿ ಕಲಾವಿದರಾಗಿ ಕೆಲಸ ಮಾಡಿದ ನಟ. ತಮ್ಮ ವಿದ್ಯಾಭ್ಯಾಸದ ನಂತರ ಕಂಪನಿ ನಾಟಕಗಳ ಕಡೆ ಒಲಿದು, ಅನೇಕ ಕಂಪನಿಗಳನ್ನು ಸೇರಿದರು. ವೃತ್ತಿ ಕಂಪನಿಯ ನಾಟಕಗಳಲ್ಲಿ ವಿವಿಧ ರೀತಿಯ ಪಾತ್ರಗಳನ್ನು ಅಭಿನಯಿಸಿದ್ದಾರೆ. ಆ ಸಂದರ್ಭದಲ್ಲಿ ಕೆಲವು ಸಮಯ ಇವರ ಮತ್ತು ನಾಗಮಂಗಲ ಕಿಟ್ಟಿಯವರ ಹಾಸ್ಯಜೋಡಿ ಪ್ರಸಿದ್ಧವಾಗಿತ್ತು.

ಅವರ ಬಿಡುವಿನ ವೇಳೆಯಲ್ಲಿ **'ನರಹರಿ ಮಿತ್ರ ಮಂಡಲಿ'** ಸ್ಥಾಪಿಸಿ ಅನೇಕ ನಾಟಕಗಳನ್ನು ಚಾಮರಾಜನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪ್ರದರ್ಶನ ಮಾಡಿದರು.

## ೬) ಸುಂದರ ಕೃಷ್ಣ ಅರಸು

ಇಲ್ಲಿಗೆ ಸಮೀಪದ ಉತ್ತುವಳ್ಳಿ ಗ್ರಾಮದವರು. ತಮ್ಮ ಶಾಲಾ ಕಾಲೇಜು ದಿನಗಳಿಂದಲೇ ಅಪಾರ ಪ್ರತಿಭೆಯನ್ನು ವ್ಯಕ್ತಪಡಿಸಿದರು. ಮೈಸೂರಿನ ಬನುಮಯ್ಯ ಕಾಲೇಜಿನ ವಿದ್ಯಾರ್ಥಿಯಾದ ಇವರು ಕಾಲೇಜಿನ ತಂಡಕ್ಕೆ ಅಪಾರ ಹೆಸರನ್ನು ತಂದುಕೊಟ್ಟರು. ಆ ಕಾರಣದಲ್ಲಿಯೇ ಗಿರೀಶ ಕಾರ್ನಾಡರ **'ತುಘಲಕ್'** ನಾಟಕದಲ್ಲಿ ತುಘಲಕ್ ಆಗಿ ಅಭಿನಯಿಸಿದ್ದರು. (ಅವರು ಚಲನಚಿತ್ರ ರಂಗದಲ್ಲಿ ಹೆಸರು ಮಾಡಿದ ಎಷ್ಟೋ ವರ್ಷಗಳ ನಂತರದಲ್ಲಿ ಬಿಡುವು ಮಾಡಿಕೊಂಡು ತುಘಲಕ್ ನಾಟಕದ ಮರುಪ್ರದರ್ಶನದಲ್ಲಿ ಅಭಿನಯಿಸಿದ್ದರು.)

ವಿದ್ಯಾಭ್ಯಾಸ ನಂತರ, ಹವ್ಯಾಸಿ ರಂಗಭೂಮಿ ವೃತ್ತಿ ಕಂಪನಿಗಳಲ್ಲಿ ವೈವಿಧ್ಯಮಯವಾದ ಪಾತ್ರಗಳನ್ನು ನಿರ್ವಹಿಸಿದ್ದರು. ನಂತರದ ದಿವಸಗಳಲ್ಲಿ ಚಲನಚಿತ್ರರಂಗದಲ್ಲಿ ಧ್ವನಿದಾನ ಕಲಾವಿದರಾಗಿ (**'ಕಾಡು' 'ಕನ್ಯೇಶ್ವರ ರಾಮ'**) ಕೆಲಸ ಮಾಡಿದರು. ಸಹಾಯಕ ನಿರ್ದೇಶಕರಾಗಿ ಬಹು ವರ್ಷ ಕೆಲಸ ಮಾಡಿದ **ಇವರು** **'ಒಂದಾನೊಂದು ಕಾಲದಲ್ಲಿ'** ಚಿತ್ರದ ಮೂಲಕ ನಟರಾಗಿ ಪ್ರಸಿದ್ಧರಾದರು.

# ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು

೧) ಶ್ರೀ ಯಜಮಾನ್ ಹನುಮಯ್ಯ, ರಾಮಸಮುದ್ರ

೨) ಶ್ರೀ ದಿ॥ ಬಣ್ಣದ ಬಸವರಾಜಪ್ಪ
ಬಸವೇಶ್ವರ ಡ್ರಾಮಾ ಸೀನ್ಸ್
ಕೊಳ್ಳೇಗಾಲ

೩) ಶ್ರೀ ಘಟಂ ಕೃಷ್ಣ
ನಿವೃತ್ತ ಶಿಕ್ಷಕರು
ಹರದನಹಳ್ಳಿ, ಚಾಮರಾಜನಗರ ತಾಲ್ಲೂಕು & ಜಿಲ್ಲೆ.

೪) ಶ್ರೀ ನಾ.ದೇ. ನರಸಿಂಹಮೂರ್ತಿ
ನಾಗವಳ್ಳಿ, ಚಾಮರಾಜನಗರ ತಾಲ್ಲೂಕು & ಜಿಲ್ಲೆ.

೫) ವಿದ್ವಾನ್ ಎ.ಎಸ್. ಗುಂಡಪ್ಪ
ಮೃದಂಗವಾದಕರು
ಅಗರ ಗ್ರಾಮ, ಯಳಂದೂರು ತಾ॥ ಚಾಮರಾಜನಗರ ಜಿಲ್ಲೆ.

೬) ಶ್ರೀ ಸಿ.ಎಂ.ನರಸಿಂಹಮೂರ್ತಿ
ಮಾಜಿ ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ
ರಂಗವಾಹಿನಿ, ಚಾಮರಾಜನಗರ.

೭) ದಿ॥ ಕೆ.ಜವರೇಗೌಡರು
ನಿವೃತ್ತ ಶಿಕ್ಷಕರು
ಗುಂಡ್ಲುಪೇಟೆ

೮) ಶ್ರೀ ಕೆ.ವೆಂಕಟರಾಜು
ಶಾಂತಲಕಲಾವಿದರು
ಚಾಮರಾಜನಗರ.

# ಚಾಮರಾಜನಗರ ಜಿಲ್ಲೆಯ ಕೆಲವು ರಂಗಕರ್ಮಿಗಳು

## ೧) ಎಸ್.ನಾಗರಾಜ್ :

ಇವರು ಸ್ವಾತಂತ್ರ್ಯ ಚಳುವಳಿ **'ಚಲೋ ಮೈಸೂರು'** ಹಾಗೂ ತುರ್ತು ಪರಿಸ್ಥಿತಿಗಳನ್ನು ಪ್ರತಿಭಟಿಸಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ಆದರೆ ರಂಗಭೂಮಿಯಲ್ಲಿ ಅಪಾರ ಪ್ರೀತಿಯನ್ನು ಇಟ್ಟುಕೊಂಡಿದ್ದವರು. ೬೦-೭೦ ರ ದಶಕದಲ್ಲಿ **'ನಂದಿನಿ ಕಲಾ ಕ್ಷೇತ್ರ'** ಎಂಬ ತಾತ್ಕಾಲಿಕ ರಂಗ ಮಂದಿರವನ್ನು ನಿರ್ಮಿಸಿ, ವೃತ್ತಿ ಕಂಪನಿಗಳಿಗೆ, ಬಾಡಿಗೆಗೆ ಕೊಡುತ್ತಿದ್ದರು. ಅಲ್ಲದೇ ವೃತ್ತಿ ಕಂಪನಿಗಳ ನಾಟಕಗಳನ್ನು ಗುತ್ತಿಗೆ ಹಿಡಿದು ಪ್ರದರ್ಶನದ ವ್ಯವಸ್ಥೆ ಮಾಡುತ್ತಿದ್ದರು. ಕರ್ನಾಟಕದಾದ್ಯಂತ ಎಲ್ಲ ಕಂಪನಿಗಳಿಗೂ ಕಲಾವಿದರಿಗೂ, ಬಹುಬೇಕಾದ ವ್ಯಕ್ತಿಯಾಗಿದ್ದರು. ಭಾರೀ ಮಳೆಗೆ **'ನಂದಿನಿ ಕಲಾ ಕ್ಷೇತ್ರ'** ಕುಸಿದು ನಂತರ ಅವರು ಚೇತರಿಸಿಕೊಳ್ಳಲಾಗದೇ ರಂಗ ಚಟುವಟಿಕೆಯನ್ನು ನಿಲ್ಲಿಸಿದರು.

ಅವರಿಗೆ ಹೊಸದಾದ ಹಳೆಯದಾದ ಎಲ್ಲ ನಾಟಕಗಳ ಪರಿಚಯ ಇತ್ತು. ಕುವೆಂಪು ಅವರ **'ಸ್ಮಶಾನ ಕುರುಕ್ಷೇತ್ರ'** ಅವರ ಮೆಚ್ಚಿನ ನಾಟಕವಾಗಿತ್ತು.

## ೨) ಎಂ.ಎಸ್.ಮೂರ್ತಿ

ಮೂಲತಃ ಚಾಮರಾಜನಗರ ತಾಲ್ಲೂಕಿನ ಮುಕ್ಕಡಹಳ್ಳಿ ಗ್ರಾಮದವರು. ತಮ್ಮ ಯೌವ್ವನದ ದಿನಗಳಿಂದಲೂ ವೃತ್ತಿ ಕಂಪನಿಗಳ ಸಂಪರ್ಕಕ್ಕೆ ಬಂದರು. ಕಂಪನಿಗಳಿಗೆ ಸಹಕಾರ ನೀಡುವುದು. ತೊಂದರೆಗೊಳಗಾದಾಗ ಸಹಾಯ ಮಾಡುವುದು. ಮುಂತಾದ ಕೆಲಸಗಳನ್ನು ಸುಮಾರು ೫೦ ವರ್ಷಗಳ ಕಾಲ ಮಾಡಿಕೊಂಡು ಬಂದಿದ್ದಾರೆ. ಈಗ ಪತ್ರಿಕೆಯೊಂದರ ಸಂಪಾದಕರಾಗಿದ್ದಾರೆ. ಒಂದು ಚಲನಚಿತ್ರ ನಿರ್ಮಿಸುವ ವಿಫಲ ಪ್ರಯತ್ನವನ್ನು ಮಾಡಿದ್ದರು.

## ೩) ರಾ.ಶ್ರೀ.ಕುಮಾರಾರಾಧ್ಯ

ಸಮೀಪದ ರಾಮಸಮುದ್ರದವರು. 'ಶಾಂತಲಾ ಕಲಾವಿದರು' ಸಂಘಟನೆಯ ಜೊತೆ ಕೆಲಸ ಮಾಡುತ್ತಾ ಮಾಡುತ್ತಾ ವೃತ್ತಿ ರಂಗಭೂಮಿ ಪ್ರವೇಶಿಸಿದರು. ಉತ್ತರ ಕರ್ನಾಟಕದ ಅನೇಕ ಕಂಪನಿಗಳಲ್ಲಿ ಹಾಗೂ ಸ್ವಲ್ಪ ಕಾಲ ಗುಬ್ಬಿ ಕಂಪೆನಿಯಲ್ಲಿ ಅದರ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸಿದ್ದಾರೆ. ಈಗ ಚಾಮರಾಜನಗರದಲ್ಲಿದ್ದಾರೆ.

## ೪) ಎ.ಎಸ್.ಗುಂಡಪ್ಪ

ಯಳಂದೂರು ತಾಲ್ಲೂಕು ಅಂಬಳೆ ಗ್ರಾಮದವರಾದ ಇವರು ಹೆಸರಾಂತ ಮೃದಂಗ ವಾದಕರು. ಅನೇಕ ತಂಡಗಳಿಗೆ ತಬಲಾ ನುಡಿಸುವ ಮೂಲಕ ಹೆಚ್ಚಿನ ನೆರವು ನೀಡಿದ್ದಾರೆ.

## ೫) ವೆಂಕಟೇಶ ಬಾಬು

ಇವರು ಲಯವಾದ್ಯ ಕಲಾವಿದರು. ಅನೇಕ ವೃತ್ತಿ ಕಂಪನಿಗಳ ವಾದ್ಯ ಗೋಷ್ಠಿಗಳಲ್ಲಿ ನೆರವು ನೀಡಿದ್ದಾರೆ. ಸದ್ಯ ಚಾಮರಾಜನಗರದ ಹವ್ಯಾಸಿ ತಂಡವಾದ 'ರಂಗವಾಹಿನಿ'ಯೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ

## ೬) ಕೆ.ಪಿ.ಮಹದೇವಸ್ವಾಮಿ

ಶಾಲಾ ಕಾಲೇಜು ದಿವಸಗಳಿಂದಲೂ ರಂಗಭೂಮಿಯಲ್ಲಿ ಅಪಾರ ಆಸಕ್ತಿ ಕಳೆದವರು. ಆ ನಂತರ ರಾಜಕಾರಣದಲ್ಲಿ ತೊಡಗಿಸಿಕೊಂಡ ನಂತರವೂ ಅವರು ಗ್ರಾಮೀಣ ಹವ್ಯಾಸಿ ನಾಟಕ–ಅದರಲ್ಲಿಯೂ ವಿಶೇಷವಾಗಿ 'ದಕ್ಷಯಜ್ಞ' ನಾಟಕದಲ್ಲಿ ಪ್ರಮುಖ ಪಾತ್ರ ವಹಿಸಿದವರು. ಚಾಮರಾಜನಗರ ಹಾಗೂ ಇನ್ನು ಹಲವಾರು ಕಡೆ ಯಶಸ್ವಿಯಾಗಿ ಅಭಿನಯಿಸಿದ್ದಾರೆ.

## ೭) ಮಂಗಲ ಶಿವಣ್ಣ

ಕಳೆದ ೧೮ ವರ್ಷಗಳಿಂದ ಗ್ರಾಮೀಣ ಹವ್ಯಾಸಿ ರಂಗಭೂಮಿಯಲ್ಲಿ ನಿರ್ದೇಶಕರಾಗಿ ಹಾಗೂ ಹಾರ್ಮೋನಿಯಂ ಮಾಸ್ತರ್‌ರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಾಮರಾಜನಗರ, ರಾಮಸಮುದ್ರ, ಸಿದ್ದಯ್ಯನ ಪುರ, ಚಿಕ್ಕಹೊಮ್ಮ ಮುಂತಾದ ಗ್ರಾಮಗಳಲ್ಲಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ನಾಟಕ ಮಾಸ್ಟರ ರಾಗಿ ಕೆಲಸ ನಿರ್ವಹಿಸುತ್ತಿರುವ ಯುವಕರು.

## ೮) ಶಿವಣ್ಣ ರಾಮಸಮುದ್ರ

ಇವರು ರಾಮಸಮುದ್ರದವರು. ಸರ್ಕಾರಿ ನೌಕರಿಯಲ್ಲಿದ್ದು, ಈಗ ನಿವೃತ್ತರಾಗಿರುತ್ತಾರೆ. ಹಲವಾರು ಹವ್ಯಾಸಿ ತಂಡಗಳೊಡನೆ ಸಕ್ರಿಯರಾಗಿದ್ದು ಕೊಂಡು ಕೆಲಸ ಮಾಡುತ್ತಿದ್ದಾರೆ.

## ಗ್ರಾಮೀಣ ಹವ್ಯಾಸಿ ತಂಡಗಳಿಗೆ ಪೌರಾಣಿಕ / ಸಾಮಾಜಿಕ ನಾಟಕ ಕಲಿಸುತ್ತಿರುವ ನಾಟಕ ಮಾಸ್ತರುಗಳು (ನಿರ್ದೇಶಕರು)

| | | |
|---|---|---|
| ೧. | ಮಹದೇವಾಚಾರ್<br>ಕೆಲ್ಲಂಬಳ್ಳಿ,<br>ಚಾಮರಾಜನಗರ ತಾಲ್ಲೂಕು. | ೬೫ ವರ್ಷ |
| ೨. | ಎಸ್.ಈಶ್ವರಾಚಾರ್<br>ಯರಗನಹಳ್ಳಿ<br>ಚಾಮರಾಜನಗರ ತಾಲ್ಲೂಕು. | ೬೯ ವರ್ಷ |
| ೩. | ಎಸ್.ನಾಗಪ್ಪ<br>ಅಗ್ರಹಾರ<br>ಚಾಮರಾಜನಗರ ತಾಲ್ಲೂಕು. | ೬೩. ವರ್ಷ |
| ೪. | ಶ್ರೀ ರಾಮೇಗೌಡ<br>ಕಬ್ಬಹಳ್ಳಿ,<br>ಗುಂಡ್ಲುಪೇಟೆ ತಾಲ್ಲೂಕು. | ೭೨ ವರ್ಷ |
| ೫. | ಶ್ರೀ ಹೆಚ್.ಎಸ್.ನಾಗರಾಜು<br>ಹೆಗ್ಗೋಠಾರ,<br>ಚಾಮರಾಜನಗರ ತಾಲ್ಲೂಕು. | ೬೩ ವರ್ಷ |
| ೬. | ಶ್ರೀ ಬಿ.ಎಸ್.ಗುರುಸ್ವಾಮಾಚಾರ್<br>ಡ್ರಾಮಾ ಮಾಸ್ಟರ್,<br>ಬರಗಿ,<br>ಗುಂಡ್ಲುಪೇಟೆ ತಾಲ್ಲೂಕು. | ೬೯ ವರ್ಷ |
| ೭. | ಶ್ರೀ ಟಿ.ಕೆ.ಮರಿಯಾಚಾರ್<br>ತಮ್ಮಡಹಳ್ಳಿ,<br>ಚಾಮರಾಜನಗರ ತಾಲ್ಲೂಕು. | ೬೯ ವರ್ಷ |
| ೮. | ಶ್ರೀ ಎಂ.ಪಾಪಣ್ಣ<br>ಮೈಲಾಜಿಪುರ,<br>ಚಾಮರಾಜನಗರ ತಾಲ್ಲೂಕು. | ೬೩ ವರ್ಷ |

೯. ಶ್ರೀ ಕೃಷ್ಣಸ್ವಾಮಿ
ಶ್ಯಾನಾಡ್ರಹಳ್ಳಿ, ೭೩ ವರ್ಷ
ಗುಂಡ್ಲುಪೇಟೆ ತಾಲ್ಲೂಕು.

೧೦. ಶ್ರೀ ಮಹದೇವಪ್ಪ
ಕೊಡಗಾಪುರ, ೬೩ ವರ್ಷ
ಚಾಮರಾಜನಗರ ತಾಲ್ಲೂಕು.

೧೧. ಶ್ರೀ ಮಾದಪ್ಪ
ಚಿಕ್ಕಬೇಗೂರು ೭೩ ವರ್ಷ
ಗುಂಡ್ಲುಪೇಟೆ ತಾಲ್ಲೂಕು.

೧೨. ಶ್ರೀ ಮಂಚಹಳ್ಳಿ ನಾಗಲಿಂಗಾಚಾರ್
ಮಂಚಹಳ್ಳಿ ೭೩ ವರ್ಷ

೧೩. ಶ್ರೀ ಎ.ಎಸ್.ನಟರಾಜು
ಹೆಗ್ಗೋಠಾರ ೪೩ ವರ್ಷ
ಚಾಮರಾಜನಗರ ತಾಲ್ಲೂಕು.

೧೪. ಶ್ರೀ ಕೋದಂಡರಾಂ
ಮರಿಯಾಲ,
ಚಾಮರಾಜನಗರ ತಾಲ್ಲೂಕು.

೧೫. ಹೆಗ್ಗವಾಡಿ ಶಿವಕುಮಾರ್
ಹೆಗ್ಗವಾಡಿ, ೫೮ ವರ್ಷ
ಚಾಮರಾಜನಗರ ತಾಲ್ಲೂಕು.

೧೬. ಮಂಗಲ ಶಿವಣ್ಣ
ಮಂಗಲ,
ಚಾಮರಾಜನಗರ ತಾಲ್ಲೂಕು.

# ಗ್ರಾಮೀಣ ಹವ್ಯಾಸಿ ತಂಡಗಳಿಗೆ ಪೋಷಾಕು ಮೇಕಪ್, ದೀಪ, ಸ್ಟೇಜ್ ಇವುಗಳನ್ನು ಒದಗಿಸುತ್ತಿರುವ ಸಂಸ್ಥೆಗಳು

## ವೆಂಕಟೇಶ್ವರ ಡ್ರಾಮಾ ಸೀನರಿ, ಕೊಳ್ಳೇಗಾಲ.

ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮೀಣ ಹವ್ಯಾಸಿ ಕಲಾ ತಂಡಗಳಿಗೆ ಥಿಯೇಟರ್, ಮೇಕಪ್, ಡ್ರೆಸ್ ಇತ್ಯಾದಿ ಎಲ್ಲವನ್ನು ಒದಗಿಸುವ ಎರಡು ಸಂಸ್ಥೆಗಳಲ್ಲಿ ಇದು ಒಂದು. ಇದು ತುಂಬ ಹಳೆಯದೂ ಹೌದು.

೧೯೪೩ ರಲ್ಲಿ ದಿ॥ ಕೆ.ಕೆ.ವೆಂಕಟರಮಣಯ್ಯನವರು ಇದನ್ನು ಆರಂಭಿಸಿದರು. ಮೈಸೂರು ಅರಮನೆಯಲ್ಲಿ ವರ್ಣ ಕಲಾವಿದರಾಗಿದ್ದವರು (PAINTER). ಅವರು ನಿವೃತ್ತರಾದ ನಂತರ ಸ್ವಗ್ರಾಮಕ್ಕೆ ಮರಳಿ ಈ ಸಂಸ್ಥೆ ಸ್ಥಾಪಿಸಿದರು. ಕಳೆದ ೬೪ ವರ್ಷಗಳಿಂದ ನಿರಂತರವಾಗಿ ಈ ಕೆಲಸ ಮಾಡುತ್ತಿದೆ. ಇವರ ಮಗ ದಿ॥ **ಕೆ.ಪಿ.ರಂಗಸ್ವಾಮಿ** ಇದನ್ನು ರೂಢಿಸಿ ಮುಂದುರೆಸಿದ್ದರು. ಈಗ **ಕೆ.ಆರ್.ಶ್ರೀನಿವಾಸಯ್ಯ** ಇದನ್ನು ಮುಂದುವರೆಸುತ್ತಿದ್ದಾರೆ. ಈಗ ೫೨ ವರ್ಷದ ಇವರು ಉತ್ಸಾಹಿಗಳು. ಈ ವರ್ಷ ಕರ್ನಾಟಕ ನಾಟಕ ಅಕಾಡೆಮಿ ೨೫ ಸಾವಿರ ರೂಪಾಯಿಗಳ ನೆರವು ನೀಡಿ ಪ್ರೋತ್ಸಾಹ ನೀಡಿದೆ.

ಗ್ರಾಮಾಂತರಗಳಲ್ಲಿ ಇವರು ನಾಟಕ ಒಪ್ಪಿಕೊಂಡರೆ ಪೈಪುಗಳನ್ನು ಜೋಡಿಸಿ ಸ್ಟೇಜ್, ಅದಕ್ಕೆ ತಕ್ಕ ಪರದೆಗಳು, ಮೈಕ್ ವ್ಯವಸ್ಥೆ, ಆ ನಾಟಕಕ್ಕೆ ಅಗತ್ಯವಾದ ಪೋಷಾಕು ಮತ್ತು ಮೇಕಪ್ ಹೀಗೆ ಪ್ರತಿಯೊಂದನ್ನು ನಿರ್ವಹಿಸುತ್ತಾರೆ. ಇವರ ಬಳಿ ಸಾಗಾಣಿಕೆಗಾಗಿ ಸ್ವಂತ ಲಾರಿ ಇದೆ. ಈ ಕೆಲಸಗಳಿಗಾಗಿ ೧೦ ರಿಂದ ೧೫ ಜನ ಇದ್ದಾರೆ.

ನಾಟಕದ ದಿವಸ, ಮಧ್ಯಾಹ್ನ ೨ ಅಥವಾ ೩ ಗಂಟೆಗೆ ಇವರು ಸಕಲ ಸಾಮಾಗ್ರಿಯೊಡನೆ ತಲುಪುತ್ತಾರೆ. ೩ ರಿಂದ ೪ ಗಂಟೆ ರಂಗಮಂದಿರದ ಕೆಲಸ ಮಾಡುತ್ತಾರೆ. ರಾತ್ರಿ ೭–೮ ಗಂಟೆಯ ವೇಳೆಗೆ ಗ್ರೀನ್ ರೂಮಿನಲ್ಲಿ ಕುಳಿತು ಪೋಷಾಕು / ಮೇಕಪ್ ಕೆಲಸ ನಿರ್ವಹಿಸುತ್ತಾರೆ.

ಈ ಸಂಸ್ಥೆ **ಚಾಮರಾಜನಗರ, ಮೈಸೂರು, ಮಂಡ್ಯ, ಶ್ರೀರಂಗಪಟ್ಟಣ, ರಾಮನಗರ, ಸಂತೇಮರಹಳ್ಳಿ, ತೊರವಳ್ಳಿ, ಬಾಗಳಿ, ಬಾಣಹಳ್ಳಿ, ಮರಿಯಾಲ** ಇತ್ಯಾದಿ ಕಡೆಗಳಲ್ಲದೆ ತಮಿಳುನಾಡಿನ **ಊಟಿಗೂ** ಹೋಗುತ್ತಾರೆ ಎಂಬುದು ವಿಶೇಷ.

## ಸಿ.ರಾಮಯ್ಯ, ಕೊಳ್ಳೇಗಾಲ.

ಸುಮಾರು ೫೮ ವರ್ಷದ ಇವರು ಕಳೆದ ೪೦ ವರ್ಷದಿಂದ ನಾಟಕಗಳಿಗೆ ಮೇಕಪ್ ಮಾಡುತ್ತಿದ್ದಾರೆ. ವೆಂಕಟೇಶ್ವರ ಡ್ರಾಮಾ ಸೀನರಿ, ಕೊಳ್ಳೇಗಾಲದ ದಿ॥ ಕೆ.ಕೆ.

ವೆಂಕಟರಮಣಯ್ಯನವರಿಗಿಂತ ಇವರು ಈ ಕೌಶಲ್ಯ ಕಲಿತು ರೂಢಿಸಿಕೊಂಡಿದ್ದಾರೆ. ಅವರು ಇದರ ಬಂಧುಗಳೂ ಹೌದು. ಪೌರಾಣಿಕ ನಾಟಕಗಳು ರಾತ್ರಿ ಇಡೀ ನಡೆಯುವುದರಿಂದ ಬಿಳಿ, ಕೆಂಪು, ಹಳದಿ ಬಣ್ಣ ಕಲಸಿ ಬಣ್ಣ ಸಿದ್ಧಪಡಿಸಿಕೊಳ್ಳುತ್ತಾರೆ. ಬಣ್ಣ ಕಲೆಸಲು ಅವರು ಬೆಣ್ಣೆ ಅಥವಾ ಕೊಬ್ಬರಿ ಎಣ್ಣೆ ಬಳಸುತ್ತಾರೆ. ಪೌರಾಣಿಕ ನಾಟಕಗಳಲ್ಲಿ ಏನಿನ್ನವೆಂದರೂ ಸುಮಾರು ೧೮ ರಿಂದ ೨೨ ಜನರಿಗೆ ಮೇಕಪ್ ಮಾಡಿ ಸಿದ್ಧಪಡಿಸಬೇಕಾಗುತ್ತದೆ. ನಾಟಕದುದ್ದಕ್ಕು ಆಗಾಗ್ಗೆ ಮೇಕಪ್ ಸರಿಪಡಿಸುತ್ತಿರಬೇಕಾಗುತ್ತದೆ.

ಇವರು ಬಹುತೇಕ ವೆಂಕಟೇಶ್ವರ ಸೀನರಿ ಯವರ ಜೊತೆಯಲ್ಲಿಯೇ ಕೆಲಸ ಮಾಡುತ್ತಾರೆ.

## ಬಸವೇಶ್ವರ ಡ್ರಾಮಾ ಸೀನ್ಸ್, ಕೊಳ್ಳೇಗಾಲ.

ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮೀಣ ಹವ್ಯಾಸಿ ನಾಟಕದ ಎಲ್ಲ ಅಗತ್ಯಗಳನ್ನು ಪೂರೈಸುವ ಎರಡು ಸಂಸ್ಥೆಗಳಲ್ಲಿ ಇದು ಒಂದು. ಎರಡೂ ಕೊಳ್ಳೇಗಾಲ ಪಟ್ಟಣದಲ್ಲಿ ಇರುವುದು ವಿಶೇಷ.

ಈ ಸಂಸ್ಥೆ,ಸುಮಾರು ೧೯೮೫ರಲ್ಲಿ ಅಸ್ತಿತ್ವಕ್ಕೆ ಬಂದು **ಬಿ.ನಾಗಸುಂದರ್ ಈಗ ಇದರ ಮಾಲೀಕರು.** ಮೇಕಪ್ ಕಲಾವಿದರು. ಪೋಷಾಕುಗಳನ್ನು ಇವರೇ ತಯಾರಿಸುತ್ತಾರೆ. ಈ ಕೌಶಲ್ಯವನ್ನು ಅವರು ತಮ್ಮ ತಂದೆ ಶ್ರೀ ಬಣ್ಣದ ಬಸವರಾಜಪ್ಪ ನವರಿಂದ ಕಲಿತರು. ಅವರು ವೆಂಕಟೇಶ್ವರ ಡ್ರಾಮಾ ಸೀನರಿಯಲ್ಲಿ ಕೆಲಸ ಮಾಡುತ್ತಿದ್ದರು. ತಮ್ಮದೇ ಸಂಸ್ಥೆ ಆರಂಭಿಸಿದ ನಂತರವೂ ಅವರು ಇಲ್ಲಿ ಬರಲಿಲ್ಲ. ಆದರೆ ಕೌಶಲ್ಯದ ಮೊದಲ ಪಾಠಗಳನ್ನು ತಮ್ಮ ಮಗನಿಗೆ ಹೇಳಿಕೊಟ್ಟಿದ್ದಾರೆ. ೨೦೦೭ರಲ್ಲಿ ತಮ್ಮ ಎಂಭತ್ತರಡನೆಯ ವಯಸ್ಸಿನಲ್ಲಿ ತೀರಿಕೊಂಡಿದ್ದಾರೆ.

ಬಣ್ಣದ ಬಸವರಾಜಪ್ಪ ನವರ ತಂದೆ ಬಣ್ಣದ ಬಸಪ್ಪನವರು ಮೇಕಪ್ ಕಲಾವಿದರು. ಆದರೆ ಸಸ್ಯಮೂಲ ಹಾಗೂ ಕಾಗೆ ಬಂಗಾರ ಇತ್ಯಾದಿ ಬಳಸಿ ಮೇಕಪ್ ಮಾಡುತ್ತಿದ್ದರು. ಬಹುತೇಕ ಬಯಲಾಟ ಇತ್ಯಾದಿಗಳಿಗೆ ಅವರು ಮೇಕಪ್ ಮಾಡುತ್ತಿದ್ದಿರಬೇಕು. ಶ್ರೀ ನಾಗಸುಂದರಪ್ಪನವರು ಹೇಳುವ ಮಾತುಗಳ ಆಧಾರದ ಮೇಲೆ ಇವರು ೧೯೨೫ರಿಂದ ಈ ಕ್ಷೇತ್ರದಲ್ಲಿ ಸಕ್ರಿಯವಾಗಿದ್ದಿರಬಹುದೆಂದೂ ಮತ್ತು ಆಕಾಲದಲ್ಲಿ ಬಯಲಾಟ ಇತ್ಯಾದಿಗಳು ಹೆಚ್ಚು ರೂಢಿಯಲ್ಲಿತ್ತೆಂದೂ ಅಭಿಪ್ರಾಯಪಡಬಹುದಾಗಿದೆ.

ಈಗ ಇದನ್ನು ನಡೆಸುತ್ತಿರುವ ನಾಗಸುಂದರಪ್ಪ ಪ್ರೀತಿ ಹಾಗೂ ಶ್ರದ್ಧೆಯಿಂದ ಈ

ಕೆಲಸ ಮಾಡುತ್ತಿದ್ದಾರೆ. ಪ್ರತಿ ವರ್ಷ ಕನಿಷ್ಠ ೪೦ ರಿಂದ ೫೦ ನಾಟಕಕ್ಕೆ ಸಾಮಾಗ್ರಿ ನೀಡುತ್ತಾರೆ. ಕೆಲವೊಮ್ಮೆ ಅದು ೮೦ರ ತನಕವೂ ಹೋಗುವುದುಂಟು. ಆದರೆ ಇಂದಿನ ತುಟ್ಟಿಯ ಕಾಲದಲ್ಲಿ ಅದರಿಂದಲೇ ಜೀವನ ಸಾಗಿಸುವುದು ಕಠಿಣ. ಆದರೆ ಅಡುಗೆ ಕಾಯಕ ವಹಿಸಿಕೊಳ್ಳುವುದರಿಂದ ಜೀವನ ಸಾಗುತ್ತಿದೆ.

ಈ ಎರಡೂ ಸೀನರಿ ಕಂಪನಿಯವರೂ ಹೆಚ್ಚು ಕಡಿಮೆ ಒಂದೇ ಅಳತೆಯ ಸ್ಟೇಜ್ ನಿರ್ಮಿಸುತ್ತಾರೆ.

೪೦ ಅಡಿ x ೨೫' ಅಳತೆಯ ಸ್ಟೇಜ್ ನಿರ್ಮಿಸುತ್ತಾರೆ. ರಂಗಸ್ಥಳದ ಒಳಳತೆ ೨೦' x ೨೦' ಇರುತ್ತದೆ. ೪೦ ಅಡಿಯಲ್ಲಿ (೨೦' ಹೊರತುಪಡಿಸಿ) ಎರಡೂ ಪಕ್ಕದಲ್ಲಿ ೧೦ ಅಡಿಗಳ ಜಾಗ ಸಿಕ್ಕುತ್ತದೆ. ಹಿಂಬದಿಯಲ್ಲಿ ಕಲಾವಿದರು/ ತಂತ್ರಜ್ಞರು ಓಡಾಡಲು ೫' ಜಾಗ ಬಿಡುತ್ತಾರೆ. ರಂಗದ ಎರಡೂ ಪಕ್ಕದ ೧೦ ಅಡಿ ಅವಕಾಶದಲ್ಲಿ ಅಳತೆಯ ೩೪' x ೧೨' ಅಳತೆಯ ರಿಂಗ್ಸ್ ಜೋಡಿಸುತ್ತಾರೆ. ರಂಗಸ್ಥಳದ ಮುಂದಿನಿಂದ ಹಿಂಬದಿಯವರೆವಿಗೂ ೩ ಜೊತೆ ವಿಂಗ್ಸ್ ಹಾಕುತ್ತಾರೆ. ಪರದೆಗಳು ೧೩' ಎತ್ತರ ೧೬ ರಿಂದ ೨೦ ಅಗಲದ ಪರದೆ ಇರುತ್ತದೆ.

## ಕೆಲವು ಗ್ರಾಮೀಣ ಹವ್ಯಾಸಿ ತಂಡಗಳು

ಈ ಕೈಪಿಡಿ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಬಹಳ ವರ್ಷಗಳಿಂದ ನಿರಂತರ ರಂಗಚಟುವಟಿಕೆಯನ್ನು ನಡೆಸಿಕೊಂಡು ಬರುತ್ತಿರುವ ಕೆಲವು ಗ್ರಾಮೀಣ ತಂಡಗಳನ್ನು ಸಂದರ್ಶಿಸಲಾಯಿತು. ಚಾಮರಾಜನಗರ, ರಾಮಸಮುದ್ರ, ಸಂತೆಮರಳ್ಳಿ, ಮರಿಯಾಲ ಗ್ರಾಮಗಳ ತಂಡಗಳನ್ನು ಅವರ ತಾಲೀಮಿನ ಪ್ರಕ್ರಿಯೆಯಲ್ಲಿ ಭೇಟಿ ಮಾಡಲಾಯಿತು. ಅದರ ವಿವರಗಳು ಹೀಗಿವೆ: (ಇವಿಷ್ಟೆ ಅಲ್ಲದೇ ಚಾಮರಾಜನಗರ ಜಿಲ್ಲೆಯಲ್ಲಿ ಅನೇಕ ಗ್ರಾಮಗಳಲ್ಲಿ ಗ್ರಾಮೀಣ ಹವ್ಯಾಸಿ ತಂಡಗಳು ಕಾರ್ಯ ನಿರ್ವಹಿಸುತ್ತಿವೆ. ಅವರುಗಳು ವರ್ಷದಲ್ಲಿ ಕೆಲವು ಸಮಯ ಮಾತ್ರ ಸಂಘಟಿತರಾಗುವ ಕಾರಣ ಅವುಗಳ ವಿವರ ನೀಡಲು ಸಾಧ್ಯವಾಗಿಲ್ಲ.)

### ಶ್ರೀ ಮಹದೇಶ್ವರ ಕಲಾ ಸಂಘ, ಸಂತೇಮರಹಳ್ಳಿ.

ಸಂತೇಮರಹಳ್ಳಿ ಗ್ರಾಮ, ಚಾಮರಾಜನಗರ ತಾಲ್ಲೂಕಿನ ಒಂದು ಪ್ರಮುಖ ಗ್ರಾಮ. ಹೋಬಳಿ ಕೇಂದ್ರ ಇದು. ಪ್ರತ್ಯೇಕವಾದ ತಾಲ್ಲೂಕು ಆಗುವ ಸಾಧ್ಯತೆ ಇದೆ.

ಇಲ್ಲಿಯ ಶ್ರೀ ಮಹದೇಶ್ವರ ಕಲಾ ಸಂಘ - ೧೯೭೩ ರಿಂದ ಕೆಲಸ ಮಾಡುತ್ತಿದೆ.

**'ಸಂಗೀತ–ಸುಭದ್ರಾ ಪರಿಣಯ'** – ಈ ತಂಡದ ಮೊದಲ ನಾಟಕ. ದಿ॥ ತಿಪ್ಪಯ್ಯನವರು ಈ ನಾಟಕದ ಡ್ರಾಮಾ ಮಾಸ್ಟರ್. ಇವರು ಡಾ॥ ರಾಜಕುಮಾರ್ ಅವರ ಸಂಬಂಧಿ. ಚಾಮರಾಜನಗರದವರು. ಆನಂತರದ ವರ್ಷಗಳಲ್ಲಿ **'ಪ್ರಭುಲಿಂಗಲೀಲೆ' 'ಬೇಡರಕಣ್ಣಪ್ಪ' 'ಪ್ರಹ್ಲಾದ ಚರಿತ್ರೆ' 'ಕೃಷ್ಣಲೀಲೆ' 'ದಾನಶೂರಕರ್ಣ' 'ದಕ್ಷಯಜ್ಞ'** ನಾಟಕಗಳನ್ನು ತಯಾರಿಸಿ, ಪ್ರದರ್ಶಿಸಿದ್ದಾರೆ. ಈ ನಾಟಕಗಳು ಒಂದಕ್ಕಿಂತ ಹೆಚ್ಚಿನ ಪ್ರದರ್ಶನಗಳಾಗಿವೆ. **'ದಕ್ಷಯಜ್ಞ'** – ಇವರ ಇತ್ತೀಚಿನ ನಾಟಕ. **'ದಾನಶೂರ ಕರ್ಣ'** ನಾಟಕವನ್ನು ಪಿ.ವಜ್ರಪ್ಪ ನವರು ಕಲಿಸಿದ್ದಾರೆ. ಇತ್ತೀಚಿನ ನಾಟಕ ದಕ್ಷಯಜ್ಞವನ್ನು ಮೂಡಲ ಅಗ್ರಹಾರ ಗ್ರಾಮದ ನಾಗಪ್ಪ, ಮದ್ದಾಗರಲಿಂಗಯ್ಯನಹುಂಡಿ ಬಸವರಾಜು ಕಲಿಸಿದ್ದಾರೆ. ಉಳಿದಂತೆ, ಈ ತಂಡಕ್ಕೆ ನಾಟಕ ಕಲಿಸುತ್ತಿದ್ದವರು. ತಳಗವಾಡಿ ವೀರಭದ್ರಪ್ಪನವರು.

ಈ ತಂಡ, ಸಂತೇಮರಳ್ಳಿಯಲ್ಲದೇ ಮೈಸೂರು, ನರಸೀಪುರ, ಮಂಡ್ಯ, ಸಿದ್ದಗಂಗೆ, ನಂಜನಗೂಡು ಮತ್ತು ಬನ್ನೂರುಗಳಲ್ಲಿಯೂ ನಾಟಕ ಪ್ರದರ್ಶನ ನೀಡಿವೆ. ಈ ತಂಡದ ಕಲಾವಿದರಾದ ಎಂ.ಸಿದ್ದಪ್ಪ, ಎಂ.ಪಿ.ರಾಜು ಇತ್ಯಾದಿಗಳು. ಬೇರೆ – ಬೇರೆ ಕಡೆ ನಡೆದ ಬೇರೆ ತಂಡದ ನಾಟಕಗಳಲ್ಲಿ ಅಭಿನಯಿಸಿ ಬಂದಿದ್ದಾರೆ.

ತೀರಾ ಇತ್ತೀಚಿನವರೆಗೂ ಖಾಯಂ ಆಗಿ ಒಂದು ಮನೆಯನ್ನು ಬಾಡಿಗೆಗೆ ಹಿಡಿದು, ತಾಲೀಮಿನ ಮನೆ ಮಾಡಿಕೊಂಡಿದ್ದರು. ಊರಲ್ಲಿಯ ಗರಡಿಮನೆಯ ರೀತಿಯಲ್ಲಿ ಇದು ನಾಟಕ ಪ್ರಾಕ್ಟೀಸಿನ ಮನೆಯಾಗಿತ್ತು. ಈ ತಂಡದ ಕಲಾವಿದರು ವೀರಶೈವರು. ಆದರೆ ಈ ತಂಡದ ಪ್ರದರ್ಶನಗಳಿಗೆ ಗ್ರಾಮದ ಎಲ್ಲ ಜನ ಬಂದು ನೋಡುತ್ತಿದ್ದರು. ಆದರೆ ಸಂತೇಮರಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದ ಮತ್ತು ನಾಟಕದಲ್ಲಿ ಆಸಕ್ತಿ ಇದ್ದ ಬೇರೆ ಜಾತಿಯ ಕಲಾವಿದರೂ ಅಭಿನಯಿಸುತ್ತಿದ್ದರು. ಕೆಲವೊಮ್ಮೆ ವಿಶಿಷ್ಟ ಪಾತ್ರಗಳಿಗಾಗಿ ಬೇರೆ ಕಲಾವಿದರನ್ನು ಕರೆಯಿಸಿಕೊಳ್ಳುತ್ತಿದ್ದರು. ಆಗ ಜಾತಿಯ ಪ್ರಶ್ನೆ ಅಡ್ಡ ಬರುತ್ತಿರಲಿಲ್ಲ.

ಇವರ ನಾಟಕದ ಅಭ್ಯಾಸ ಏನಿಲ್ಲವೆಂದರೂ ೨–೩ ತಿಂಗಳುಗಳ ಸಮಯ ತೆಗೆದುಕೊಳ್ಳುತ್ತದೆ. ಸುಮಾರು ೨೫ ರಿಂದ ೩೫ ಸಾವಿರ ರೂಪಾಯಿ ಖರ್ಚು ಬೀಳುತ್ತಿತ್ತು. ಈಗ ನಾಟಕ ಸಿದ್ಧಪಡಿಸಬೇಕಾದರೆ ಕನಿಷ್ಠ ೭೦ ಸಾವಿರದಷ್ಟು ಖರ್ಚಾತಗಲುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ನಾಟಕದ ಸ್ಟೇಜ್, ಪೋಷಾಕು, ಬೆಳಕು ಮತ್ತು ಧ್ವನಿ ವ್ಯವಸ್ಥೆ, ಮೇಕಪ್, ಪರದೆಗಳು, ಡ್ರಾಮಾ ಮಾಸ್ಟರರ ಸಂಬಳ ಹಾಗೂ ಕಲಾವಿದೆಯರ ಸಂಭಾವನೆಗೆ ಹೆಚ್ಚಿನ ಹಣ ಖರ್ಚಾಗುತ್ತದೆ. ಪ್ರಸ್ತುತ ಈ ತಂಡದಲ್ಲಿ ಸಕ್ರಿಯವಾಗಿದ್ದವರ ಮಕ್ಕಳೂ / ಸಂಬಂಧಿಕರು ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದಾರೆ.

## ರಾಮಸಮುದ್ರದ ರಂಗಚಟುವಟಿಕೆ

ಈಗ ರಾಮಸಮುದ್ರ, ಚಾಮರಾಜನಗರದ್ದೆ ಭಾಗ. ಹಿಂದೆ ಚಾಮರಾಜನಗರಕ್ಕೆ ಅತಿ ಸಮೀಪದ ಒಂದು ಗ್ರಾಮವಾಗಿತ್ತು. ಪ್ರಸ್ತುತ ಇಲ್ಲಿ ನಾಯಕರ ಬೀದಿಯಲ್ಲಿ ಹಾಗೂ ಪರಿಶಿಷ್ಟ ಜಾತಿಯವರ ಬೀದಿಗಳಲ್ಲಿ ನಾಟಕ ಆಡುವ ಪರಿಪಾಠ ಇದೆ.

## ಮಂಟೇಸ್ವಾಮಿ ಕೃಪಾಪೋಷಿತ ನಾಟಕ ಮಂಡಲಿ, ರಾಮಸಮುದ್ರ (ನಾಯಕರ ಬೀದಿ)

ಒಂದು ಅಂದಾಜಿನ ಪ್ರಕಾರ, ೧೯೮೦ ರಿಂದ ನಾಯಕರ ಬೀದಿಯ ತಂಡ, ನಾಟಕಗಳನ್ನು ಉತ್ಸಾಹದಿಂದ ಪ್ರದರ್ಶಿಸುತ್ತಿದೆ. ೧೯೮೦ರಲ್ಲಿ ಕುರುಕ್ಷೇತ್ರ ನಾಟಕವನ್ನು ಪ್ರದರ್ಶಿಸಿದರು. ಚಾಮರಾಜನಗರದ ದಿ॥ ಟೈಲರ್ ಪುಟ್ಟಣ್ಣ, ಈ ನಾಟಕ ಕಲಿಸಿದ ಡ್ರಾಮಾ ಮಾಸ್ಟರ್. ಪುನಃ ೨೦೦೭ರಲ್ಲಿ ಅದೇ ಕುರುಕ್ಷೇತ್ರ ನಾಟಕ ಅಭಿನಯಿಸಿದರು. ಈಗ ಕಲಿಸಿದವರು. ಮರಿಯಾಲ ಗ್ರಾಮದ ಡ್ರಾಮಾ ಮಾಸ್ಟರ್ ಕೋದಂಡರಾಮ್ ಅವರು. ಈವರೆಗೆ **ಕುರುಕ್ಷೇತ್ರ, ರಾಜಸೂಯಯಾಗ, ತ್ರಿಜನ್ಮಮೋಕ್ಷ, ದಕ್ಷಯಜ್ಞ, ಅಣ್ಣ ತಂಗಿ** ಮುಂತಾದ ನಾಟಕ ಅಭಿನಯಿಸಿದ್ದಾರೆ.

ಆಷಾಢ ಮಾಸದಲ್ಲಿ ಈ ಬೀದಿಯಲ್ಲಿ **'ಬಯಲು ಸೇವೆ'** ಎಂಬ ಹಬ್ಬ ನಡೆಯುತ್ತದೆ. ಇದನ್ನು ಸಿದ್ದರಾಯನ ಸೇವೆ ಎಂದೂ ಕರೆಯುತ್ತಾರೆ. ಇದು ಸಿದ್ದಪ್ಪಾಜಿ ಉತ್ಸವ. ಈ ಹಬ್ಬಕ್ಕೆ ನೆಂಟರು, ಮಿತ್ರರು, ಸೇರುತ್ತಾರೆ. ಅಂದು ರಾತ್ರಿಯ ಇವರು ನಾಟಕ ಆಡುತ್ತಾರೆ.

ಸುಮಾರು ೧೨–೧೩ ವರ್ಷಗಳ ಹಿಂದೆ, ಬನ್ನೂರು ಗ್ರಾಮದ ತಂಡ ಕರೆಯಿಸಿ **'ಶನಿ ಪ್ರಭಾವ'** ಪ್ರದರ್ಶಿಸಿದರು. ಈ ನಾಟಕ ನಡೆದದ್ದು, ಶ್ರಾವಣದ ೩ನೆಯ ಶನಿವಾರ. ಶ್ರಾವಣ ಶನಿವಾರದಂದು ಶನಿಕತೆ ಓದಿಸುವ ಪರಿಪಾಠ ಇದ್ದು, ನಾಟಕ ಅದಕ್ಕಿಂತ ಪರಿಣಾಮಕಾರಿ ಎಂಬ ಉದ್ದೇಶದಿಂದ ಶನಿಪ್ರಬಾವ ನಾಟಕ ನೋಡಿದ್ದ ಹಿರಿಯರು, ಈ ನಾಟಕವನ್ನು ಆಹ್ವಾನಿಸಿದ್ದರು.

## ಮಂಟೇಲಿಂಗೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಮಂಡಲಿ (ಪರಿಶಿಷ್ಟ ಜಾತಿಯವರ ಬೀದಿ)

ಪ್ರಾಯಶಃ ಇದು ಬಹಳ ಪ್ರಾಚೀನವಾದ ತಂಡ ಎಂದು ಕಂಡುಬರುತ್ತದೆ. ಅಲ್ಲದೇ ನಿರಂತರತೆಯನ್ನು ಕಾಪಾಡಿಕೊಂಡು ಬಂದಿರುವ ಸಂಸ್ಥೆ.

೧೯೩೦ ಮತ್ತು ಅದಕ್ಕೂ ಹಿಂದಿನ ದಿನಗಳಿಂದ ಇಲ್ಲಿ ರಂಗಚಟುವಟಿಕೆಗಳು ನಡೆಯುತ್ತಿದೆ. ಪ್ರಾಯಶಃ ಆರಂಭದ ವರ್ಷಗಳಲ್ಲಿ ಈಗಿನಂತೆ ನಾಟಕಗಳನ್ನು

ಆಡುತ್ತಿರಲಿಲ್ಲ. ಆಗ **ಯಕ್ಷಗಾನ** ಅಥವಾ ಆ ರೀತಿಯ ವಿಶಿಷ್ಟವಾದ **ಬಯಲಾಟ** ಮಾಡಿದಂತೆ ಕಾಣುತ್ತದೆ. ಪ್ರಮುಖವಾಗಿ ಎರಡು ಬಯಲಾಟ ಪ್ರದರ್ಶಿಸಿರುವುದು ವಿಶೇಷ.

೧) **ಪಂಚವಟಿ ರಾಮಾಯಣ**

೨) **ಸ್ವರ್ಗಾರೋಹಣ ಪರ್ವ**

ಇದನ್ನು ರಾಮಸಮುದ್ರದವರೇ ಆದ **ಬಸವಯ್ಯನವರು** ಕಲಿಸಿದ್ದು, ಈ ಬಯಲಾಟಗಳಲ್ಲಿ ಪಾತ್ರ ಮಾಡಿದ ಒಬ್ಬಿಬ್ಬರು ದೊರೆಯಬಹುದು. ಅವರೂ ಸಾಕಷ್ಟು ವೃದ್ಧರು.

ಸುಮಾರು ೫೦–೬೦ ವರ್ಷಗಳಿಂದ ಈ ಬೀದಿಯಲ್ಲಿ ಒಂದು ವರ್ಷವೂ ತಪ್ಪಿಸದೇ ನಾಟಕ ಮಾಡಿಕೊಂಡು ಬರುತ್ತಿದ್ದಾರೆ. ಪ್ರತಿ ವರ್ಷ ಶಿವರಾತ್ರಿಯಂದು ನಾಟಕ ಮಾಡುತ್ತಿದ್ದಾರೆ. ಕೆಲವೊಮ್ಮೆ ಈ ಬೀದಿಯಲ್ಲಿ ಎರಡು ಗುಂಪುಗಳು ಏಕಕಾಲದಲ್ಲಿ ನಾಟಕ ಕಲಿಯಲು ಪ್ರಾರಂಭಿಸಿರುವುದೂ ಉಂಟು. ಅಂತಹ ಸಂದರ್ಭದಲ್ಲಿ ಮೊದಲು ತಾಲೀಮು ಆರಂಭಿಸಿದ ತಂಡ ಶಿವರಾತ್ರಿಯಲ್ಲಿಯೂ, ಆನಂತರ ಆರಂಭಿಸಿದ ತಂಡ ಉಗಾದಿಯಲ್ಲಿಯೂ ನಾಟಕ ಮಾಡುತ್ತಾರೆ. ಈ ಸಮಸ್ಯೆಯನ್ನು ಯಜಮಾನರುಗಳು ಪರಿಹರಿಸಿದ್ದಿದೆ. ಇಲ್ಲಿ ಏಕಕಾಲದಲ್ಲಿ ಎರಡು ನಾಟಕಗಳು ಮಾಡುವಷ್ಟು ಕಲಾವಿದರು ಇದ್ದಾರೆ.

**ಈ ವರೆಗೆ ಈ ತಂಡ ಅಭ್ಯಾಸ ಮಾಡಿ, ಪ್ರದರ್ಶಿಸಿದ ಪ್ರಮುಖ ನಾಟಕಗಳು ಮತ್ತು ನಾಟಕ ಕಲಿಸಿದವರು ಹೀಗಿದೆ.**

| | | |
|---|---|---|
| ಕುರುಕ್ಷೇತ್ರ | : | ೧) ಕೂಡ್ಲೂರು ರಾಚಯ್ಯ<br>೨) ಮಂಗಲದ ರಂಗಯ್ಯ।<br>೩) ರಂಗಯ್ಯನವರ ಮಗ ಶಿವಣ್ಣ |
| ಸಂಪೂರ್ಣ ರಾಮಾಯಣ | : | (ಹಲವಾರು ಬಾರಿ)<br>ಈಗ ಡ್ರಾಮಾ ಮಾಸ್ಟರ್<br>ಗಟ್ಟವಾಡಿ ಮಹದೇವಯ್ಯ |
| ಬಸವೇಶ್ವರ ವಿಜಯ | : | ಎಸ್.ನಂಜಯ್ಯ<br>ರಾಜಸೂಯಯಾಗ |
| ರಕ್ತ ರಾತ್ರಿ | : | ಹೆಜ್ಜಿಗೆ ನಾರಾಯಣಸ್ವಾಮಿ |
| ರಕ್ತ ಸಿಂಹಾಸನ | : | ಹೆಜ್ಜಿಗೆ ನಾರಾಯಣಸ್ವಾಮಿ |

| | | |
|---|---|---|
| ತ್ರಿಜನ್ಮ ಮೋಕ್ಷ | : | ಹೆಗ್ಗವಾಡಿ ಶಿವಶಂಕರ್ |
| ದೀಪಾವಳಿ | : | ನಾಗವಳ್ಳಿ ಮಹದೇವಯ್ಯ |
| ಮೂರುವರೆ ವಜ್ರ | : | ಕಾಗಲವಾಡಿ ಸಣ್ಣಯ್ಯ |

ಸುಮಾರು ೧೯೭೫ ರವರೆವಿಗೂ ಸ್ತ್ರೀಪಾತ್ರಗಳನ್ನು ಗಂಡಸರೇ ಮಾಡುತ್ತಿದುದು ವಿಶೇಷ.

ಸುಮಾರು ೧೦ ವರ್ಷದ ಹಿಂದೆ ಸುಮಾರು ೫ ರಿಂದ ೧೦ ಸಾವಿರ ರೂ ವೆಚ್ಚದಲ್ಲಿ ಇವರು ನಾಟಕ ಮಾಡುತ್ತಿದ್ದರು. ಎಲ್ಲ ಕಲಾವಿದರು ಸುಮಾರು ೨೫೦ ರೂಪಾಯಿ ವಂತಿಗೆ ನೀಡುತ್ತಿದ್ದರು. ೨೭೦ ಸಂಗ್ರಹಿಸಿ, ಮರಳಿ ತಲಾ ೨೦ ರೂಪಾಯಿ ನೀಡಿದ್ದು ಉಂಟು. ಒಮ್ಮೆ ೬೦೦ ರೂಪಾಯಿಗೆ ನಾಟಕ ಮಾಡಿದ್ದು ಇದೆ.

ಕಳೆದ ವರ್ಷ ಆಡಿದ ಸಂಪೂರ್ಣ ರಾಮಾಯಣ ನಾಟಕಕ್ಕೆ ಸುಮಾರು ೧ ಲಕ್ಷ ೨೦ ಸಾವಿರ ರೂಪಾಯಿ ಖರ್ಚು ಬಿದ್ದಿದೆಯೆಂದು ಈಗ ಅದು ಇನ್ನು ಹೆಚ್ಚಾಗಬಹುದು ಎಂದು ಅಭಿಪ್ರಾಯಪಡುತ್ತಾರೆ.

## ಮರಿಯಾಲ ಮತ್ತು ಮರಿಯಾಲದಹುಂಡಿ

ಮರಿಯಾಲ ಮತ್ತು ಮರಿಯಾಲದಹುಂಡಿ ಗ್ರಾಮಗಳು ಚಾಮರಾಜನಗರಕ್ಕೆ ಅತಿ ಸಮೀಪ ಇರುವ ಗ್ರಾಮಗಳು. ಆದರೆ ಗ್ರಾಮೀಣ ಸ್ವರೂಪವನ್ನು ಉಳಿಸಿಕೊಂಡಿವೆ.

ಈ ಗ್ರಾಮಗಳಲ್ಲಿ ಪ್ರತಿವರ್ಷ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ನಡೆಯುವ **'ಬಂಡಿಹಬ್ಬ'** ದಲ್ಲಿ ಈ ನಾಟಕ ನಡೆಯುತ್ತದೆ. ಚಾಮರಾಜನಗರ ತಾಲ್ಲೂಕಿನ ಕೆಸ್ತೂರು ಗ್ರಾಮದಲ್ಲಿ ಬಂಡಿ ಜಾತ್ರೆ ನಡೆಯುತ್ತಿದ್ದು, ಆ ದಿವಸ ಸುತ್ತಲಿನ ೧೬ ಹಳ್ಳಿಗಳಲ್ಲಿ ಬಂಡಿಹಬ್ಬ ಆಚರಿಸುತ್ತರೆ. ಬಂಡಿಹಬ್ಬ ನಡೆದು ಸರಿಯಾಗಿ ಒಂದು ವಾರದ ನಂತರ ಮರಿಜಾತ್ರೆ ನಡೆಯುತ್ತದೆ. ಕೆಲವೊಮ್ಮೆ ಆಗ ಕೂಡಾ ನಾಟಕ ನಡೆಯುತ್ತದೆ. ಈ ಬಂಡಿಹಬ್ಬವನ್ನು ಚಾಮರಾಜನಗರ ಮತ್ತು ಅದಕ್ಕೆ ಹೊಂದಿಕೊಂಡಂತಿರುವ ನಂನಜಗೂಡು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಈ ಹಬ್ಬ ನಡೆಯುತ್ತದೆ.

## ಮುರುಘರಾಜೇಂದ್ರ ಕೃಪಾಪೋಷಿತ ನಾಟಕ ಮಂಡಲಿ

ಈ ಗ್ರಾಮದಲ್ಲಿ ವೀರಶೈವರ ಸಂಖ್ಯೆ ಹೆಚ್ಚು, ವೀರಶೈವರಲ್ಲೇ, ಎರಡು ತಂಡ ರಚಿಸಿಕೊಂಡು, ಒಂದೇ ದಿವಸ ನಾಟಕ ಆಡಿದ ಉದಾಹರಣೆಗಳು ಸಾಕಷ್ಟುಸಲ ನಡೆದಿದೆ.

ಈ ತಂಡ, ಸುಮಾರು ೩೦ ಕ್ಕೂ ಹೆಚ್ಚಿನ ವರ್ಷದಿಂದ ನಡೆದುಕೊಂಡು ಬಂದಿದೆ.

**ಶಿವಜಲಂಧರ, ಶನಿಮಹಾತ್ಮೆ, ಶಿವಕುಮಾರ, ಕೃಷ್ಣಗಾರುಡಿ, ಕುರುಕ್ಷೇತ್ರ, ರಾಜಸೂಯ ಯಾಗ** ಇತ್ಯಾದಿ ಪೌರಾಣಿಕ ನಾಟಕ ಆಡಿದ್ದರೆ, ಈಚಿನ ವರ್ಷಗಳಲ್ಲಿ **ಚಿನ್ನದಗೊಂಬೆ, ತಾಳಿಕಟ್ಟಿದರೂ ಗಂಡನಲ್ಲ** ಮತ್ತು **ಮಡದಿಯಲ್ಲ ತಂಗಿ** ಇತ್ಯಾದಿ ಸಾಮಾಜಿಕ ನಾಟಕಗಳನ್ನು ಅಭಿನಯಿಸಿದ್ದಾರೆ.

## ದೊಡ್ಡಮ್ಮತಾಯಿ ಕೃಪಾಪೋಷಿತ ನಾಟಕ ಮಂಡಲಿ,
## ಲಿಂಗಾಯತರ ಬೀದಿ, ಮರಿಯಾಲ

ಈ ತಂಡವೂ ಸಹ, **ಸುಭದ್ರ ಪರಿಣಯ, ಪ್ರಭುಲಿಂಗಲೀಲೆ, ಶನಿಮಹಾತ್ಮೆ** ಮುಂತಾದ ಪೌರಾಣಿಕ ನಾಟಕ ಅಭಿನಯಿಸಿದ ಹಿನ್ನಲೆ ಇದ್ದರೆ **ದೀಪಾವಳಿ, ರತ್ನಮಾಂಗಲ್ಯ, ಬಾಳೇಬಂಗಾರ** ಮತ್ತು **ರೌಡಿರಾಜ** ಇತ್ಯಾದಿ ನಾಟಕ ಅಭಿನಯಿಸಿದ್ದಾರೆ.

## ದೊಡ್ಡಮ್ಮತಾಯಿ ಕೃಪಾಪೋಷಿತ ನಾಟಕ ಮಂಡಲಿ,
## ನಾಯಕರ ಬೀದಿ, ಮರಿಯಾಲ

ಇದು ಈಗಲೂ ಸಕ್ರಿಯವಾಗಿರುವ ತಂಡ. ಒಂದು ಅಂದಾಜಿನ ಪ್ರಕಾರ ೧೯೭೮ ರಿಂದ ನಾಟಕ ಪ್ರದರ್ಶಿಸಿಕೊಂಡು ಬಂದಿದ್ದಾರೆ.

ಈವರೆಗೆ **ದಾನಶೂರಕರ್ಣ** (ಶ್ರೀಕಂಠನಾಯ್ಕ ಹೆಡತಲೆ) **ವಿರಾಟ ಪರ್ವ** (ಸಿದ್ದಾಚಾರಿ ಇರಸವಾಡಿ) **ವಿಧಿವಿಲಾಸ** (ಚಿಕ್ಕೂಸನಾಯ್ಕ) **ಶಿವಕುಮಾರ, ದಕ್ಷಯಜ್ಞ** (**ಇದೇ ಗ್ರಾಮದ ಕೋದಂಡರಾಂ**) ಮೂರು ಬಾರಿ ಶಿವಕುಮಾರ ಹಾಗೂ ೪ ಬಾರಿ **ದಕ್ಷಯಜ್ಞ**ಅಭಿನಯಿಸಿದ್ದಾರೆ.

## ದೊಡ್ಡಮ್ಮತಾಯಿ ಕೃಪಾಪೋಷಿತ ನಾಟಕ ಮಂಡಲಿ,
## ಹರಿಜನರ ಬೀದಿ, ಮರಿಯಾಲ

ಇದು ಕಳೆದ ಎರಡು ವರ್ಷಗಳಿಂದ ಅಸ್ತಿತ್ವಕ್ಕೆ ಬಂದ ತಂಡ ಎರಡು ಬಾರಿ **'ತ್ರಿಜನ್ಮಮೋಕ್ಷ'** – ಅಭಿನಯಿಸಿದ್ದು, ಈ ಸಲದ ಬಂಡಿಜಾತ್ರೆಗೆ ಮತ್ತೆ ಅದೇ ನಾಟಕ ಕಲಿಯುತ್ತಿದ್ದಾರೆ. ಮೂರು ಪ್ರದರ್ಶನ ಮಾಡಿ ಮುಕ್ತಾಯಗೊಳಿಸಿ, ನಂತರ ಮುಂದಿನ ನಾಟಕ ತೆಗೆದುಕೊಳ್ಳುವ ಆಲೋಚನೆಯಲ್ಲಿ ಇದ್ದಾರೆ.

ಹೆಗ್ಗವಾಡಿ ಶಿವಶಂಕರ್ ಈ ನಾಟಕ ಕಲಿಸಿದ್ದಾರೆ, ಕಲಿಸುತ್ತಿದ್ದಾರೆ.

## ಮರಿಯಾಲದಹುಂಡಿ

ಇದು ಮರಿಯಾಲಕ್ಕೆ ಹೊಂದಿಕೊಂಡಂತ್ತಿರುವ ಗ್ರಾಮ. ಇಲ್ಲಿ ಕುರುಬರ ಬೀದಿ ಮತ್ತು ಹರಿಜನರ ಬೀದಿಯಲ್ಲಿ ನಾಟಕ ಆಡುತ್ತಿದ್ದರು.

**ರಾಜಸೂಯ ಯಾಗ, ಕುರುಕ್ಷೇತ್ರ** ಹಲವಾರು ಬಾರಿ **ಶನಿಮಹಾತ್ಮೆ, ಗಯಚರಿತ್ರೆ** ಆಡಿದ್ದಾರೆ. **ರತ್ನಮಾಂಗಲ್ಯ ಮತ್ತು ಮುದುಕನ ಮದುವೆ** ಕೂಡಾ ಆಡಿದ್ದಾರೆ.

## ಹರಿಜನರ ಬೀದಿ

೧೯೬೫ ರಿಂದ ೧೯೮೨ ರವರೆಗೆ ಹಲವಾರು ಬಾರಿ ಸಂಪೂರ್ಣ ರಾಮಾಯಣ ಆಡಿದ್ದುಉಂಟು.

ಈ ಎಲ್ಲ ತಂಡಗಳೂ ತಮ್ಮ – ತಮ್ಮ ತಂಡಗಳನ್ನು ದೊಡ್ಡಮ್ಮತಾಯಿ ಕೃಪಾಪೋಷಿತ ನಾಟಕ ಮಂಡಲಿ ಎಂದು ಕರೆದುಕೊಳ್ಳುವುದು ವಿಶೇಷ. ಮರಿಯಾಲದ ಪರಿಶಿಷ್ಟ ಜಾತಿಯವರ ಬಡಾವಣೆಯಲ್ಲಿ ದೊಡ್ಡಮ್ಮತಾಯಿ ಹಬ್ಬದಲ್ಲಿ ಮಾಡುವುದರಿಂದ ದೊಡ್ಡಮ್ಮತಾಯಿ ಕೃಪಾಪೋಷಿತ ನಾಟಕ ಮಂಡಲಿ ಎಂದು ಕರೆದರೂ, ಡಾ॥ ಬಿ.ಆರ್.ಅಂಬೇಡ್ಕರ್ ಯುವಕರ ಕಲಾಸಂಘ ಎನ್ನುವ ತಂಡವಿದೆ.

■

# ಅನುಬಂಧಗಳು

೧. ಈ ರಂಗ ಚಟುವಟಿಕೆಗಳಲ್ಲಿ ಈ ಹಿಂದೆ ನಿರಂತರವಾಗಿದ್ದು ಪ್ರೇರಣೆ ಸ್ಫೂರ್ತಿ ನೀಡಿ ಈಗ ಸ್ಥಗಿತಗೊಂಡಿರುವ ರಂಗತಂಡಗಳು.

೨. ಈಗಲೂ ರಂಗ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಸಂಘಟನೆಗಳು

೩. ಜಿಲ್ಲೆಯಲ್ಲಿ ರಂಗ ಶಿಕ್ಷಣ ಪಡೆದವರು.

೪. ಚಾಮರಾಜನಗರ ಜಿಲ್ಲೆಯ ನಾಟಕಕಾರರು.

೫. ಚಾಮರಾಜನಗರ ಜಿಲ್ಲೆಯಲ್ಲಿನ ವೃತ್ತಿರಂಗಭೂಮಿ ಕಲಾವಿದರು.

೬. ಚಾಮರಾಜನಗರ ಜಿಲ್ಲೆಯಲ್ಲಿ ರಂಗಟಚುವಟಿಕೆಗಳಿಗಾಗಿ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು.

೭. ಚಾಮರಾಜನಗರ ಜಿಲ್ಲೆಯ ಕೆಲವು ರಂಗಜೀವಿಗಳು.

೮. ಗ್ರಾಮೀಣ ಹವ್ಯಾಸಿ ತಂಡಗಳಿಗೆ ಪೌರಾಣಿಕ/ಸಾಮೂಹಿಕ ನಾಟಕ ಕಲ್ಪಿಸುತ್ತಿರುವ ನಾಟಕ ಮಾಸ್ತರುಗಳು.

೯. ಗ್ರಾಮೀಣ ಹವ್ಯಾಸ ತಂಡಗಳಿಗೆ ಪೋಷಾರು ಮೇಕಪ್, ದೀಪ ಸ್ಟೇಜ್ ಇವುಗಳನ್ನು ಒದಗಿಸುತ್ತಿರುವ ಸಂಸ್ಥೆಗಳು.

೧೦. ಕೆಲವು ಗ್ರಾಮೀಣ ಹವ್ಯಾಸಿ ತಂಡಗಳು.

**ರಂಗ ಚಟುವಟಿಕೆಯಲ್ಲಿ ಈ ಹಿಂದೆ ನಿರತವಾಗಿದ್ದು ಪ್ರೇರಣೆ ಸ್ಫೂರ್ತಿ ನೀಡಿ ಈಗ ಸ್ಥಗಿತಗೊಂಡಿರುವ ರಂಗ ತಂಡಗಳು.**

| | | |
|---|---|---|
| ೧. | ಕನ್ನಡ ಕಲಾ ಸಂಘ, ಚಾಮರಾಜನಗರ. | ೧೯೬೧–೧೯೬೬ |
| ೨. | ಕನ್ನಡ ಗೆಳೆಯರ ಬಳಗ, ಚಾಮರಾಜನಗರ. | ೧೯೬೩–೧೯೬೪ |
| ೩. | ಕನ್ನಡ ಸಾ"ತ್ಯ ಸಂಘ, ಚಾಮರಾಜನಗರ. | ೧೯೬೮–೧೯೭೩ |
| ೪. | ಕನ್ನಡ ಕಲಾಭಿಮಾನಿಗಳ ಸಂಘ, ಚಾಮರಾಜನಗರ. | ೧೯೬೭–೧೯೭೩ |

**ಈಗಲೂ ರಂಗ ಚಟುಪಟಿಕೆಗಳಲ್ಲಿ ನಿರಂತರ ತೊಡಗಿಸಿಕೊಂಡಿರುವ ಸಂಘಟನೆಗಳು**

೧. **ಶಾಂತಲಾ ಕಲಾವಿದರು,**
'ನೆಲೆ' ೩ನೆಯ ಬೀದಿ,
ಭ್ರಮರಾಂಬ ಬಡಾವಣೆ, ಚಾಮರಾಜನಗರ. ೧೯೭೩
ಸಂಪರ್ಕ ದೂರವಾಣಿ : ೦೮೨೨೬–೨೨೨೬೨೫, ೯೨೪೨೦೫೬೩೬೩

**೨. ರಂಗತರಂಗ,**
ಸೋಮಶೇಖರ ಬಿಸಲ್ವಾಡಿ, ೧೯೯೩
ಚಾಮರಾಜನಗರ.

**೩. ರಂಗವಾಹಿನಿ,**
ಸಿ.ಎಂ.ನರಸಿಂಹಮೂರ್ತಿ, ೨೦೦೦
ರಾಮಸಮುದ್ರ,

**೪. ಚೇತನಾ ಬಳಗ,**
ರಾಜಪ್ಪ,
ಚಾಮರಾಜನಗರ.

**೫. ರಂಗಜಂಗಮ,**
ಅಪೂರ್ವ ಡಿ ಸಿಲ್ವ,
ಚಾಮರಾಜನಗರ.

**೬. ಸಾಂಸ್ಕೃತಿಕ ಕಲಾ ತಂಡ (ರಿ),**
ಗುಂಡ್ಲುಪೇಟೆ.

**೭. ಸಾಂಸ್ಕೃತಿಕ ಕಲಾ ವೇದಿಕೆ,**
ಸೋಮಹಳ್ಳಿ, ಗುಂಡ್ಲುಪೇಟೆ ತಾ॥
ಮೊ. ೯೪೮೨೪೦೬೬೭೬೮.

**೮ ರಂಗದೇಗುಲ,**
ಯಳಂದೂರು.


## ಜಿಲ್ಲೆಯಲ್ಲಿ ರಂಗ ಶಿಕ್ಷಣ ಪಡೆದವರು

| | |
|---|---|
| ೧. ಚಂದ್ರಶೇಖರಾಚಾರ್ ಹೆಗ್ಗೋಠಾರ<br>ಹೆಗ್ಗೋಠಾರ ಗ್ರಾಮ, ಚಾಮರಾಜನಗರ. | ನೀನಾಸಮ್ ಪದವೀಧರರು, ೨<br>ತಿರುಗಾಟದ ಅನುಭವ ಈಗ,<br>ಜೆ.ಎಸ್.ಎಸ್.ಸಂಸ್ಥೆಯಲ್ಲಿ ಕಾರ್ಯ. |
| ೨. ರಾಮನಾಥ ಎಸ್.<br>ಕೊಳ್ಳೇಗಾಲ / ಮೈಸೂರು | ರಂಗಾಯಣ ಕಲಾವಿದ<br>ನಟ, ನಿರ್ದೇಶಕ, ನಾಟಕಕಾರ. |
| ೩. ರಾಮು ರಂಗಾಯಣ<br>ದಡದಹಳ್ಳಿ / ಮೈಸೂರು | ರಂಗಾಯಣದಲ್ಲಿ ಪದವೀಧರ<br>ನಟ, ನಿರ್ದೇಶಕ |
| ೪. ಚಿತ್ರಾ ವಿ.<br>ಚಾಮರಾಜನಗರ. | ನೀನಾಸಮ್ ಪದವೀಧರರು,<br>(೧ತಿರುಗಾಟದ ಅನುಭವ) ಈಗ ಸರಕಾರಿ |


| | |
|---|---|
| | ಪ್ರೌಢಶಾಲೆ, ಮನಗುಂಡಿ, ಧಾರವಾಡ ಜಿಲ್ಲೆಯಲ್ಲಿ ನಾಟಕ ಶಿಕ |
| ೫. ಪೂರ್ಣಿಮಾ ವಿ.ಡಿ. ಚಾಮರಾಜನಗರ. | ನೀನಾಸಮ್ ಪದವೀಧರರು (೨ತಿರುಗಾಟದ ಅನುಭವ) |
| ೬. ಬಿ.ಪಿ.ಶಂಕರಬಾಬು (ಸತ್ಯ) ಚಾಮರಾಜನಗರ/ಬೆಂಗಳೂರು | ನೀನಾಸಮ್ ಪದವೀಧರರು (ಚಲನಚಿತ್ರ ರಂಗದಲ್ಲಿ ಕೆಲಸ) |
| ೭. ಮಧುಸೂಧನ್ ವಿ.ಡಿ. ಚಾಮರಾಜನಗರ/ಮೈಸೂರು | ನೀನಾಸಮ್ ಪದವೀಧರರು ವಿನ್ಯಾಸಗಾರ ೪ ತಿರುಗಾಟದಲ್ಲಿ ನೇಪಥ್ಯ ಅನುಭವ |
| ೮. ವಿನಯ್ ಬಿ.ಎಸ್. ಚಾಮರಾಜನಗರ | ನೀನಾಸಮ್ ಪದವೀಧರರು ಸ॥ ಬಾ॥ ಕಿರಿಯ ಕಾಲೇಜಿನಲ್ಲಿ ಹಿಂದಿ ಶಿಕ್ಷಕ |
| ೯. ಮಂಜುನಾಥ ಕಾಚಕ್ಕಿ ರಾಮಸಮುದ್ರ / ಮೈಸೂರು | ನೀನಾಸಮ್ ಪದವೀಧರರು ತಿರುಗಾಟದ ಅನುಭವ ಜೆ.ಎಸ್.ಎಸ್.ಸಂಸ್ಥೆಯಲ್ಲಿ ಕೆಲಸ |
| ೧೦. ಯತೀಶ ಕೊಳ್ಳೇಗಾಲ | ನೀನಾಸಮ್ ಸಂಸ್ಥೆಯಲ್ಲಿ ಪದವೀಧರರು ಈಗ ಆಟಮಾಟ ತಂಡದ ಕಾರ್ಯದರ್ಶಿ |
| ೧೧. ಅಜಿತ್ ಕೆ. ಚಾಮರಾಜನಗರ | ಶಿವಕುಮಾರ ರಂಗ ಶಿಕ್ಷಣ ಶಾಲೆ ಸಾಣೆಹಳ್ಳಿಯಿಂದ ಪದವೀಧರ |
| ೧೨. ಶಿಲ್ಪ ಮಸಗಾಪುರ | ನೀನಾಸಮ್ ಪದವೀಧರರು ತಿರುಗಾಟದಲ್ಲಿ ನಿರತೆ |
| ೧೩. ರಾಜು ರಾಮಸಮುದ್ರ | ಶಿವಕುಮಾರ ರಂಗ ಶಿಕ್ಷಣ ಶಾಲೆ ಪದವೀಧರರು |
| ೧೪. ಕಿರಣ್ ಗಿರ್ಗಿ ಸಿದ್ದಯ್ಯನಪುರ | ಭಾರತೀಯ ರಂಗ ಶಿಕ್ಷಣ ಕೇಂದ್ರ, ಮೈಸೂರು |
| ೧೫. ರಮೇಶ್ ದಡದಹಳ್ಳಿ | ಶಿವಕುಮಾರ್ ರಂಗಪ್ರಯೋಗ ಶಾಲೆ, ಸಾಣೆಹಳ್ಳಿ |
| ೧೬. ಲಕ್ಷ್ಮಿ ಸತ್ತೇಗಾಲ | ಶಿವಕುಮಾರ್ ರಂಗಪ್ರಯೋಗ ಶಾಲೆ, ಸಾಣೆಹಳ್ಳಿ |

ಇವರುಗಳಲ್ಲದೇ ಭಾರತೀಯ ರಂಗಶಿಕ್ಷಣ ಕೇಂದ್ರ (ರಂಗಾಯಣ) ದಿಂದ ಎಂ.ಚಂದ್ರಶೇಖರ್, ನಾಗರಾಜು (ನೇಮಿನಾಥ), ಶ್ರೀನಿವಾಸ್ ವಿ. (ಚೀನಿ), ಯ.ಮ.ಹೇಮಂತ್‌ಕುಮಾರ್ (ಯಳಂದೂರು) ನಟನ ಮೈಸೂರು, ತಂಡದಲ್ಲಿ ಲೋಕೇಶ್ ಬಸವಟ್ಟಿ, ರುಸ್ತುಮ್ ಭರೂಚ ಅವರ ಕಮ್ಮಟದಲ್ಲಿ ಬರ್ಟಿಒಲಿವೇರಾ ಹಾಗೂ ಸಮುದಾಯ ನಡೆಸಿದ ಕಾರ್ಯಾಗಾರದಲ್ಲಿ ಅಪೂರ್ವ ಡಿ.ಸಿಲ್ವಾ, ಅರ್ನೆಸ್ಟ್ ಡಿ ಸಿಲ್ವಾ, ಜಿಯಾನಾ ಡಿ ಸಿಲ್ವಾ ತರಬೇತಿ ಪಡೆದಿರುತ್ತಾರೆ.

# ಗ್ರಾಮೀಣ ಹವ್ಯಾಸಿ ರಂಗತಂಡಗಳು ಅಭಿನಯಿಸಿದ ನಾಟಕಗಳ ದೃಶ್ಯ







ನಾಟಕ– ತುಘಲಕ್, ತಂಡ– ರಂಗತರಂಗ



ನಾಟಕ–ಏಕಲವ್ಯ, ತಂಡ – ರಂಗತರಂಗ



ನಾಟಕ–ಜೋಕುಮಾರಸ್ವಾಮಿ, ತಂಡ – ಶಾಂತಲಾ ಕಲಾವಿದರು



ನಾಟಕ–ತಲೆಬಾಗದ ಜನ, ತಂಡ – ಶಾಂತಲಾ ಕಲಾವಿದರು



ನಾಟಕ–ಮಂಟೇಸ್ವಾಮಿ ಕಥಾಪ್ರಸಂಗ, ತಂಡ – ರಂಗವಾಹಿನಿ



ನಾಟಕ–ಸ್ತ್ರೀ ಮತವನುತ್ತರಿಸಲಾಗದೆ?, ತಂಡ – ಅಭಿರುಚಿ



ನಾಟಕ–ಗಂಡಸ್ಕತ್ರಿ, ತಂಡ – ಶಾಂತಲಾ ಕಲಾವಿದರು



ನಾಟಕ–ಕುರುಕ್ಷೇತ್ರ, ತಂಡ – ಡಾ॥ ಬಿ.ಆರ್.ಅಂಬೇಡ್ಕರ್ ಕಲಾಸಂಘ, ಚಾ.ನಗರ



ನಾಟಕ–ಸೇವಂತಿ ಪ್ರಸಂಗ – ಶಾಂತಲಾ ಕಲಾವಿದರು